ಅಕ್ಟೋಬರ್ 2017 ಸಂಚಿಕೆ – 3 ಸಂಪುಟ – 33

# ಯೋಜನಾ

ಅಭಿವೃದ್ಧಿ ಮಾಸಪತ್ರಿಕೆ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ಮುಖಪುಟ ವಿನ್ಯಾಸ
**ಗಜಾನನ ಪಿ. ದೋಪೆ**

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತವೆ. ಚಿತ್ರಗಳು ಸಾಂದರ್ಭಿಕ.**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ 2

ಸ್ವಚ್ಛ ಭಾರತದ ಸೃಷ್ಟಿ 3
* **ಪರಮೇಶ್ವರನ್ ಅಯ್ಯರ್**

ಗ್ರಾಮೀಣ ಪ್ರದೇಶಗಳಲ್ಲಿ ಅವಕಾಶ ನಿರೂಪಣೆ 7
* **ಅಮರ್‌ಜೀತ್ ಸಿನ್ಹಾ**

ಜಾತೀಯತೆ ಮುಕ್ತ ಭಾರತದ ನಿರ್ಮಾಣ 11
* **ಅಮರ್‌ಜೀತ್ ಎಸ್. ನಾರಂಗ್**

ರೈತರ ಕಲ್ಯಾಣ : ಯಶಸ್ಸಿನ ಕೀಲಿ ಕೈ 15
* **ಡಾ. ಜಗದೀಪ್ ಸಕ್ಸೇನ**

ಆವಿಷ್ಕಾರ ಆಧರಿತ ಬದಲಾವಣೆ 19
* **ಡಾ. ಉನ್ನತ್ ಪಂಡಿತ್**

ತ್ರಿವಳಿ ತಲಾಖ್ ತೀರ್ಪು : ಮುಸ್ಲಿಂ ಮಹಿಳೆಯರಿಗೆ ಜಯ 23
* **ಆರ್. ಕೆ. ಸಿನ್ಹಾ**

ಬುಲೆಟ್ ರೈಲು ಯೋಜನೆಗೆ ಶಂಕು ಸ್ಥಾಪನೆ 25

ಗಾಂಧೀ ಗ್ರಾಮೀಣ ಗುರುಕುಲ 26
* **ಪ್ರಕಾಶ ಜೋಶಿ**

ಶೌಚಾಲಯಕ್ಕಾಗಿ ಸಮರ 28

ಭ್ರಷ್ಟಾಚಾರದ ವಿರುದ್ಧ ಭಾರತದ ಸಮರ 29
* **ವಿ. ಶ್ರೀನಿವಾಸ**

ಕೌಶಲ್ಯ ಮತ್ತು ವಾಣಿಜ್ಯೋದ್ಯಮ ಅಭಿವೃದ್ಧಿ 33
* **ಡಾ. ಅಮಿತ್ ಕುಮಾರ್ ದ್ವಿವೇದಿ ಮತ್ತು ಸರವಣನ್ ವೇಲುಸಾಮಿ**

ಮನ್ ಕೀ ಬಾತ್ 38
* **ಕೃಪೆ; ಆಕಾಶವಾಣಿ, ಬೆಂಗಳೂರು**

ಪಶು ಪೋಷಣೆಗೆ ವೈಜ್ಞಾನಿಕ ಮಾರ್ಗದರ್ಶನ 42
* **ರಾಘವೇಂದ್ರ ಭಟ್ಟ, ಎನ್.ಕೆ.ಎಸ್. ಗೌಡ ಮತ್ತು ಕೆ. ಗಿರಿಧರ್**

ಉಜ್ವಲ ಭವಿಷ್ಯಕ್ಕೆ ಉನ್ನತ ಶಿಕ್ಷಣ 44
* **ಡಾ. ತೇಜಸ್ವಿನಿ ಬಿ. ಯಕ್ಕುಂಡಿಮಠ**

ವಾರ್ತಾ ವಿಶೇಷ 52

**ಯೋಜನಾ ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**


**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**

Log on to
http://publicationsdivision.nic.in/,
in collaboration with bharatkosh.gov.in

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು, PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

ಮುಖ್ಯ ಸಂಪಾದಕರ ಲೇಖನಿಯಿಂದ

## ಹೊಸ ಕ್ಷಿತಿಜ




**ಸಾ**ವಿರ ಮೈಲುಗಳ ಪ್ರಯಾಣ ಆರಂಭವಾಗುವುದು ಕೂಡಾ ಒಂದು ಹೆಜ್ಜೆಯ ಮೂಲಕವೇ. 2022ನೇ ಇಸವಿ ವೇಳೆಗೆ ನವ ಭಾರತ ನಿರ್ಮಿಸಲು ಪ್ರಧಾನಮಂತ್ರಿಯವರು ನೀಡಿದ ಕರೆ, ಹೊಸ ಕ್ಷಿತಿಜದತ್ತ ಸಾಗಲು ಇಡೀ ದೇಶದಲ್ಲೆ ಹೊಸ ಶಕ್ತಿ ಸಂಚಯನ ಉಂಟು ಮಾಡಿದೆ. 1942ರ ಬ್ರಿಟಿಷರೆ ಭಾರತ ಬಿಟ್ಟು ತೊಲಗಿ ಆಂದೋಳನದ ವಜ್ರ ಮಹೋತ್ಸವದ ಸಂದರ್ಭದಲ್ಲಿ ಪ್ರಧಾನಮಂತ್ರಿಗಳು ಈ ಕರೆ ನೀಡಿದರು. ಭ್ರಷ್ಟಾಚಾರ, ಮತೀಯತೆ, ಜಾತೀಯತೆ ಮೊದಲಾದ ಪಿಡುಗುಗಳನ್ನು ದೇಶದಿಂದ ತೊಲಗಿಸಲು ಅದೇ ಮಾದರಿಯ ಸಮೂಹ ಆಂದೋಳನಕ್ಕಾಗಿ ಜನತೆಯನ್ನು ಪ್ರೇರೇಪಿಸುವುದು ಈ ಕರೆಯ ಹಿಂದಿರುವ ಉದ್ದೇಶ. ಬಡತನ, ಭ್ರಷ್ಟಾಚಾರ, ಭಯೋತ್ಪಾದನೆ, ಮತೀಯತೆ ಮತ್ತು ಜಾತೀಯತೆಗಳಿಂದ ಮುಕ್ತವಾದ ನವಭಾರತವನ್ನು 2022ರ ವೇಳೆಗೆ ರೂಪಿಸಲು ಇಡೀ ದೇಶವೇ ಒಕ್ಕೊರಲಿನ ಸಂಕಲ್ಪ ತೊಟ್ಟಿತು.

ನವಭಾರತ ಪರಿಕಲ್ಪನೆಗೆ ವಿಭಿನ್ನ ಆಯಾಮಗಳಿವೆ. ದೇಶವನ್ನು ಕಾಡುತ್ತಿರುವ ವಿವಿಧ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಮತ್ತು ಜನತೆ – ಇಬ್ಬರ ಪ್ರಯತ್ನಗಳೂ ಅತ್ಯಾವಶ್ಯಕ. ಒಂದೊಂದೆ ಸಮಸ್ಯೆಗಳನ್ನು ಪರಿಶೀಲಿಸಿದಾಗ, ಕೆಲವು ವರ್ಷಗಟ್ಟಲೆ ಹಳೆಯದಾಗಿದ್ದರೆ, ಕೆಲವು, ಶತಮಾನಗಳನ್ನೂ ಕಂಡಿರುವುದು ವ್ಯಕ್ತ. ಶುಚಿತ್ವಕ್ಕೆ ನಮ್ಮ ಸಂಸ್ಕೃತಿ ಆದ್ಯತೆ ನೀಡುತ್ತದೆ. ಆದರೆ ನಾವು ಮನೆಯೊಳಗೆ ಸ್ವಚ್ಛತೆಗೆ ಅತ್ಯುನ್ನತ ಸ್ಥಾನ ನೀಡಿ ದೇಶವಾಗಿ, ಸಾರ್ವಜನಿಕವಾಗಿ ಅಶುಚಿಯ ದುರಭ್ಯಾಸ ಬೆಳೆಸಿಕೊಂಡಿದ್ದೇವೆ. ರಸ್ತೆಗಿಳಿದೆವೆಂದರೆ, ಒಂದು ರೀತಿಯ ಮಾಂತ್ರಿಕ ರೂಪದಲ್ಲಿ ಬದಲಾಗುತ್ತೇವೆ. ರಸ್ತೆ, ಸಾರ್ವಜನಿಕ ಸ್ಥಳಗಳಲ್ಲಿ ಬೇಡವಾದ ಗೃಹತ್ಯಾಜ್ಯಗಳನ್ನು ಎಸೆಯುವುದಷ್ಟೆ ಅಲ್ಲ, ಮೂತ್ರ ವಿಸರ್ಜನೆ, ಬಯಲು ಬಹಿರ್ದೆಸೆಗೂ ಹೇಸುವುದಿಲ್ಲ. ಹೊಲಸು ನಾರುವ ಸ್ಥಳಗಳು ರೋಗರುಜಿನೆಗೆ ಕಾರಣವಾಗುವ ಜೊತೆಗೆ ಹೊರಗಿನವರಲ್ಲಿ ಅಸಹ್ಯ ಭಾವನೆ ಹುಟ್ಟಿಸಿ, ನಮ್ಮ ಆರ್ಥಿಕ ಸಮೃದ್ಧಿಗೂ ಮಾರಕವೆನಿಸುತ್ತವೆ. ಇದಕ್ಕೆಲ್ಲ ಶುದ್ಧ ಮಂತ್ರ, ಸ್ವಚ್ಛ ಭಾರತ.

ಬಡತನ, ಅಭಿವೃದ್ಧಿಗಿರುವ ದೊಡ್ಡ ಅಡ್ಡಗೋಡೆಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಇದು ಬಹು ಢಾಳಾಗಿ ವ್ಯಕ್ತ. ಭ್ರಷ್ಟಾಚಾರದ ಪಿಡುಗು, ಆರ್ಥಿಕ ಬೆಳವಣಿಗೆಯನ್ನೇ ಕುಡಿದು ನುಂಗುವಷ್ಟು ಕೆಟ್ಟ. ಭ್ರಷ್ಟಾಚಾರ ತಗ್ಗಿಸಿ, ಅಭಿವೃದ್ಧಿಯ ಲಾಭಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ನೇರ ಲಾಭ ವರ್ಗಾವಣೆ, ಆಧಾರ್, ಭೀಮ್ ಆ್ಯಪ್, ಮೊದಲಾದ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಆದರೂ ಈ ದಿಸೆಯಲ್ಲಿ ಮಾಡಬೇಕಾದ್ದು ಬಹಳಷ್ಟಿದೆ. ಬಡತನ ಮುಕ್ತ, ಭ್ರಷ್ಟಾಚಾರ ಮುಕ್ತ ಭಾರತ ರೂಪಿಸಬೇಕಿದೆ. ವಿಶ್ವವನ್ನು ಕಾಡುತ್ತಿರುವ ರಾಕ್ಷಸಿ ವರ್ತನೆ ಎಂದರೆ ಭಯೋತ್ಪಾದಕತೆ. ದಾರಿ ತಪ್ಪಿದವರನ್ನು ಮಾನಸಿಕವಾಗಿ ಕಾಡುವ ಈ ಅಪಾಯಕಾರಿ ಕಾಯಿಲೆ ಅಮಾಯಕ ಜನರನ್ನು ಬಲಿ ತೆಗೆದುಕೊಳ್ಳುತ್ತಿದೆ. ಇದನ್ನು ಬುಡಸಮೇತ ಕಿತ್ತೊಗೆದು ಭಯೋತ್ಪಾದನೆ ಮುಕ್ತ ವಾತಾವರಣ ಕಲ್ಪಿಸಬೇಕಿದೆ.

ಜಾತೀಯತೆಯ ಪಿಡುಗು ಇಂದು ನಿನ್ನೆಯದಲ್ಲ. ತಳವರ್ಗದವರನ್ನು ರಾಷ್ಟ್ರೀಯತೆಯ ಮುಖ್ಯವಾಹಿನಿಯಿಂದ ದೂರವಿರಿಸಿ, ಆರೋಗ್ಯ, ಶಿಕ್ಷಣ ನಿರಾಕರಿಸುವ ಅಸ್ಪೃಶ್ಯತೆ, ಸಮಗ್ರ ಜನಸಂಖ್ಯೆಯ ಪ್ರಗತಿಗೆ ಮುಳ್ಳಾಗಿ ಪರಿಣಮಿಸಿದೆ. ದೇಶದ ಪ್ರಗತಿಗೆ ತಳವರ್ಗದವರಿಗೆ ಅಭಿವೃದ್ಧಿಯ ಲಾಭ ತಲುಪುವಂತಾಗಬೇಕು. ಇದಕ್ಕಾಗಿ ಜಾತೀಯತೆ ಮುಕ್ತ, ಮತೀಯತೆ ಮುಕ್ತ ಪರಿಸರ ನಿರ್ಮಾಣವಾಗಬೇಕಿದೆ. ಭಾರತ ವಿವಿಧ ಧರ್ಮ ನಂಬಿಕೆಗಳ ನೆಲೆವೀಡಾಗಿದೆ. ಆದರೂ ಕೆಲವೊಮ್ಮೆ ಮತೀಯ ಗಲಭೆಗಳು ಸಾಮರಸ್ಯ ಕಲಕಲು ಕಾರಣವಾಗಿ ಅಭಿವೃದ್ಧಿಗೆ ತೊಡಕನ್ನುಂಟು ಮಾಡುತ್ತವೆ. ದ್ವೇಷ ಅಭಿವೃದ್ಧಿಗೆ ಮಾರಕ. ಈ ಮತೀಯತೆಯನ್ನು ನೀಗಬೇಕಿದೆ. ತ್ರಿವಳಿ ತಲಾಖ್ ಭಯ ನಿವಾರಿಸಲು ಸರ್ಕಾರ ನ್ಯಾಯಾಂಗ ಮೊರೆಹೋಗಿ ಮುಸ್ಲಿಂ ಮಹಿಳೆಯರನ್ನು ಸಶಕ್ತಗೊಳಿಸುವ ತೀರ್ಪು ಪಡೆಯಲು ಶಕ್ಯವಾಗಿದೆ. ಮೂರು ಬಾರಿ 'ತಲಾಖ್' ಎಂದು ಹೇಳಿದ ಮಾತ್ರಕ್ಕೆ ವಿಚ್ಛೇದನವೆಂಬ ಮುಸ್ಲಿಂ ಕಾಯ್ದೆಯ ಅಲಿಖಿತ ನಿಯಮ ಅನೇಕ ಮುಸ್ಲಿಂ ಮಹಿಳೆಯರ ಬದುಕು ಮೂರಾಬಟ್ಟೆಯಾಗಲು ಕಾರಣವಾಗಿತ್ತು. ಈ ಕ್ರೂರ ಸಂಪ್ರದಾಯ ನಿಷೇಧಿಸಲು ನಡೆದ ಮನವಿ, ಒತ್ತಾಯ, ಆಂದೋಳನಗಳ ಫಲವಾಗಿ ಕ್ರಮ ಕೈಗೊಳ್ಳಲಾಯಿತು.

'2022ರ ವೇಳೆಗೆ ನವಭಾರತ' ನಿರ್ಮಾಣ ಸಾಕಾರಗೊಳಿಸಲು ಸರ್ಕಾರ – ಸ್ಟಾರ್ಟ್ ಅಪ್ ನಡುವೆ ನೇರ ಸಂಪರ್ಕ ಕಲ್ಪಿಸಲು ಹಾಗೂ ಆವಿಷ್ಕಾರ ಉತ್ತೇಜಿಸಲು 'ಚಾಂಪಿಯನ್ ಆಫ್ ಚೇಂಜ್' ಉಪಕ್ರಮಕ್ಕೆ ಮುಂದಾಗಿದೆ.

ಮೊದಲ ಹೆಜ್ಜೆಯೇ ಮುಂದಿನ ಪಯಣದ ಸಂಕೇತ – ಭಾರತವನ್ನು 2022ರ ವೇಳೆಗೆ, ಆರ್ಥಿಕವಾಗಿ ಸಬಲ, ಸಮೃದ್ಧವನ್ನಾಗಿಸಲು ಹೊಸ ಆರಂಭ ಕೈಗೊಳ್ಳಲು ಈಗಾಗಲೇ ಸಂಕಲ್ಪ – ನಿರ್ಧಾರ ಕೈಗೊಳ್ಳಲಾಗಿದೆ. ❑

# ಸ್ವಚ್ಛ ಭಾರತದ ಸೃಷ್ಟಿ

* ಪರಮೇಶ್ವರನ್ ಅಯ್ಯರ್




ಸ್ವಚ್ಛ ಭಾರತ ಮಿಷನ್‌ಗೆ ಈಗ ಮೂರು ವರ್ಷಗಳ ಸಂಭ್ರಮ. ಈ ಯೋಜನೆಯ ಒಟ್ಟಾರೆ ಪ್ರಗತಿ ಉತ್ತಮವಾಗಿದೆ. ಅದರಲ್ಲೂ ಕೆಲ ರಾಜ್ಯಗಳ ಸಾಧನೆ ವಿಶೇಷವಾಗಿದೆ. ಈ ಯೋಜನೆಯ ಆರಂಭದಲ್ಲಿ ಶೇ.39 ರಷ್ಟಿದ್ದ ಗ್ರಾಮೀಣ ನೈರ್ಮಲ್ಯೀಕರಣದ ವ್ಯಾಪ್ತಿಯು ಇದೀಗ ಶೇ. 68 ತಲುಪಿದೆ.

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು, 2014ರ ಆಗಸ್ಟ್ 15 ರಂದು ಕೆಂಪು ಕೋಟೆಯ ಬತೇರಿ ಮೇಲೆ ನಿಂತು ಮಾತನಾಡಿ ಬಯಲು ಶೌಚ ಹಾಗೂ ಅಶುದ್ಧತೆಯ ವಿರುದ್ಧ ಯುದ್ಧ ಸಾರುವುದಾಗಿ ಹೇಳಿದರು. ಗಾಂಧೀಜಿಯವರ 150 ನೇ ಜಯಂತ್ಯುತ್ಸವ (2019ರ ಅಕ್ಟೋಬರ್ 2)ದ ವೇಳೆಗೆ 'ಬಯಲು ಶೌಚ ಮುಕ್ತ' ಹಾಗೂ 'ಸ್ವಚ್ಛ ಭಾರತ' ನಿರ್ಮಿಸುವ ಕನಸು ಬಿತ್ತುವ ಮೂಲಕ ಗಾಂಧೀಜಿಯವರ ಕನಸಿಗೆ ಬಲ ತುಂಬಲು ಮುನ್ನುಡಿ ಬರೆದರು.

ಬಯಲು ಶೌಚ ಹಾಗೂ ಸ್ವಚ್ಛತೆ ಕುರಿತಂತೆ ಕೇಂದ್ರ ತೆಗೆದುಕೊಂಡ ಬಹು ಮಹತ್ವಾಕಾಂಕ್ಷೆಯ ಹಾಗೂ ದಿಟ್ಟತನದ ಈ ನಿರ್ಣಯ ವಿಶ್ವಮಟ್ಟದಲ್ಲಿ ಹೆಸರಾಗಿದೆ. ನೈರ್ಮಲ್ಯೀಕರಣದ ಕುರಿತಾದ ನಡೆಯುತ್ತಿದ್ದ ಅತ್ಯುನ್ನತ ಮಟ್ಟದ ಚರ್ಚೆಯೊಂದು, ರಾಷ್ಟ್ರೀಯ ನೀತಿ ಮತ್ತು ಅಭಿವೃದ್ಧಿಯ ಮುಂಚೂಣಿ ಕಾರ್ಯಕ್ರಮವಾಗಿ ರೂಪುಗೊಂಡಿದ್ದು ವಿಶೇಷ.

ಬಯಲು ಮಲ ವಿಸರ್ಜನೆಯ ಪರಿಣಾಮ ಪ್ರತಿವರ್ಷ ಒಂದು ಲಕ್ಷಕ್ಕೂ ಅಧಿಕ ಮಕ್ಕಳು ಅತಿಸಾರದಂತಹ ಕಾಯಿಲೆಗಳಿಗೆ ತುತ್ತಾಗಿ ಅಸುನೀಗಿದ್ದು ದುರಂತ. ವಿಶ್ವಬ್ಯಾಂಕಿನ ಅಂದಾಜಿನ ಪ್ರಕಾರ ಭಾರತದ ಶೇ.40 ರಷ್ಟು ಮಕ್ಕಳ ಆರೋಗ್ಯ ಕುಂಠಿತಗೊಳ್ಳಲು ನೈರ್ಮಲ್ಯದ ಕೊರತೆಯೇ ಮೊದಲ ಕಾರಣ ಎನ್ನಲಾಗಿದೆ. ಇದು ಅವರ ಆರ್ಥಿಕ ಸಬಲತೆಯ ಮೇಲೆಯೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಅಲ್ಲದೇ, ಭಾರತದ ಜಿಡಿಪಿಯ ಶೇ.6 ರಷ್ಟು ಅಂದಾಜು ಇದಕ್ಕೇ ಖರ್ಚಾಗುತ್ತದೆ. ಬಯಲು ಶೌಚದಿಂದ ಮಹಿಳಾ ಸುರಕ್ಷತೆ ಮತ್ತು ಘನತೆಗೆ ಧಕ್ಕೆ ಇದೆ. ಆದ್ದರಿಂದಲೇ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇದಕ್ಕೊಂದು ತ್ವರಿತ ಪರಿಹಾರದ ಅವಶ್ಯಕತೆ ತೀವ್ರವಿದೆ ಎಂದು ಮನಗಂಡು, ಕಾಲಾವಧಿಯನ್ನು ನಿಗದಿಪಡಿಸುವ ಮೂಲಕ ಸ್ವಚ್ಛಭಾರತದ ಕನಸನ್ನು ಬಿತ್ತಿದರು. 21 ನೇ ಶತಮಾನದ ಭಾರತವೀಗ ಜಾಗತಿಕ ಆರ್ಥಿಕತೆಯ ಸೂಪರ್ ಪವರ್ ಆಗಲಿರುವ ಹಿನ್ನೆಲೆಯಲ್ಲಿ, ಬಯಲು ಶೌಚ ಹಾಗೂ ಅಶುಚಿತ್ವಕ್ಕೆ ಇಲ್ಲಿ ಜಾಗವಿಲ್ಲ. ಪರಿಣಾಮ ಪ್ರಧಾನಿಯವರು, ನೈರ್ಮಲ್ಯೀಕರಣ ಹಾಗೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿದ್ದೂ ಅಲ್ಲದೇ, ಇದಕ್ಕೆ ರಾಷ್ಟ್ರೀಯ ಪ್ರಾಧಾನ್ಯತೆಯನ್ನೂ ನೀಡಿದ್ದು ವಿಶೇಷ.

### ಸ್ವಚ್ಛ ಭಾರತ್ ಮಿಷನ್‌ನ ಪ್ರಗತಿ

ಸ್ವಚ್ಛ ಭಾರತ ಮಿಷನ್‌ಗೆ ಈಗ ಮೂರು ವರ್ಷಗಳ ಸಂಭ್ರಮ. ಒಟ್ಟಾರೆ ಈ ಯೋಜನೆಯ ಪ್ರಗತಿ ಉತ್ತಮವಾಗಿದೆ. ಅದರಲ್ಲೂ ಕೆಲ ರಾಜ್ಯಗಳ ಸಾಧನೆ ವಿಶೇಷವಾಗಿದೆ. ಈ ಯೋಜನೆಯ ಆರಂಭದಲ್ಲಿ ಶೇ.39 ರಷ್ಟಿದ್ದ ಗ್ರಾಮೀಣ ನೈರ್ಮಲ್ಯೀಕರಣದ ವ್ಯಾಪ್ತಿಯು ಇದೀಗ ಶೇ.68 ತಲುಪಿದೆ. ಭಾರತದ ಗ್ರಾಮೀಣ ಪ್ರದೇಶದ 230 ಮಿಲಿಯನ್ ಗೂ ಹೆಚ್ಚು ಜನರು ಬಯಲು ಶೌಚಕ್ಕೆ ಅಂತ್ಯ ಹಾಡಿದ್ದಾರೆ. 193 ಜಿಲ್ಲೆ ಮತ್ತು ದೇಶದ 235,000 ಕ್ಕೂ ಹೆಚ್ಚು ಹಳ್ಳಿಗಳನ್ನು ಬಯಲು ಶೌಚ ಮುಕ್ತ ಗ್ರಾಮಗಳೆಂದು ಘೋಷಿಸಲಾಗಿದೆ. ಸಿಕ್ಕಿಂ, ಹಿಮಾಚಲ ಪ್ರದೇಶ, ಕೇರಳ, ಹರ್ಯಾಣ ಮತ್ತು ಉತ್ತರಾಖಂಡ 5 ರಾಜ್ಯಗಳು ಬಯಲು ಶೌಚ ಮುಕ್ತವಾಗಿವೆ. ಪವಿತ್ರ ಗಂಗಾ ನದಿ ತೀರದ 4000 ಸಾವಿರ ಗ್ರಾಮಗಳು ಬಯಲು ಶೌಚ ಮುಕ್ತವಾಗಿದ್ದು ಒಂದು ವಿಶೇಷ ಸಾಧನೆ.

* ಕಾರ್ಯದರ್ಶಿ, ಕುಡಿಯುವ ನೀರು ಮತ್ತು ಶೌಚ ಇಲಾಖೆ, ಭಾರತ ಸರ್ಕಾರ. E-mail : param.iyer@gov.in

### ಸ್ವಚ್ಛ ಭಾರತ ಮಿಷನ್ ಹೇಗೆ ವಿಶಿಷ್ಟ?

ಸ್ವಚ್ಛ ಭಾರತ ಮಿಷನ್, ಜಾಗತಿಕವಾಗಿಯೂ ಒಂದು ವಿಶಿಷ್ಟ ಕಾರ್ಯಕ್ರಮ. ಏಕೆಂದರೆ ಇದುವರೆಗೂ ಜಗತ್ತಿನಲ್ಲಿ ನೈರ್ಮಲ್ಯೀಕರಣಕ್ಕೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿದ್ದ ಎಲ್ಲ ಯೋಜನೆಗಳಿಗಿಂತಲೂ ಇದು ವಿಭಿನ್ನವಾಗಿದೆ. ಇದರ ವ್ಯಾಪ್ತಿ ಹಾಗೂ ಗಾತ್ರ ಕೂಡಾ ಎಲ್ಲವುಗಳಿಗಿಂತ ವಿಶಿಷ್ಟವಾಗಿದೆ. ಗ್ರಾಮೀಣ ಭಾರತದ 550 ಮಿಲಿಯನ್ ಜನರನ್ನು ಬಯಲು ಶೌಚದಿಂದ ಮುಕ್ತಗೊಳಿಸುವುದು ತೀರಾ ಕಷ್ಟದಾಯಕ ಹಾಗೂ ಸವಾಲಿನ ಕೆಲಸವಾಗಿದೆ.



ರಸ್ತೆ, ಸೇತುವೆ ಮತ್ತು ವಿದ್ಯುತ್ ಸ್ಥಾವರಗಳಂತಹ ಕೆಲವು ಭೌತಿಕ ಮೂಲ ಸೌಕರ್ಯಗಳಂತೆಯೇ ಬಯಲು ಶೌಚಮುಕ್ತಗೊಳಿಸುವುದೂ ಅವುಗಳಲ್ಲೊಂದು. ಬಹುಕಾಲದಿಂದಲೂ ಆಚರಣೆಯಲ್ಲಿದ್ದ ಬಯಲು ಶೌಚದ ವಿರುದ್ಧ ಜನಾಂದೋಳನ ಹುಟ್ಟು ಹಾಕುವುದೂ ಅಲ್ಲದೇ, ಕೇವಲ ಭೌತಿಕ ಸವಲತ್ತನ್ನು ಮಾತ್ರ ಒದಗಿಸದೇ, ಜನರ ಮನೋಭಾವ ಬದಲಾವಣೆಗೆ ಹೆಚ್ಚಿನ ಆದ್ಯತೆ ನೀಡುವುದು ಇದರ ಮೂಲ ಧ್ಯೇಯ. ಇವೇ ಮೊದಲಾದ ಕಾರಣಗಳಿಗಾಗಿ ಸ್ವಚ್ಛ ಭಾರತ ಮಿಷನ್ ಜಾಗತಿಕ ಮಟ್ಟದಲ್ಲೂ ವಿಭಿನ್ನ ಹಾಗೂ ವಿಶಿಷ್ಟವಾಗಿ ಗುರುತಿಸಿಕೊಳ್ಳುವಂತಾಗಿದೆ.

ಮಾಹಿತಿ, ಶಿಕ್ಷಣ ಮತ್ತು ಸಂವಹನದ ಮೂಲಕ ಜನರ ನಡವಳಿಕೆಯಲ್ಲಿ ಬದಲಾವಣೆ ತರುವ ಜೊತೆಗೆ ಎಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ ಎನ್ನುವುದಕ್ಕಿಂತ, ಎಷ್ಟು ಜನ ಬಯಲು ಶೌಚದಿಂದ ಮುಕ್ತರಾದರು ಎಂಬುದರ ಮೇಲೆ ಗಮನ ಹರಿಸುವುದು ಈ ಯೋಜನೆಯ ಪ್ರಮುಖ ವೈಶಿಷ್ಟ್ಯ. ಈ ಇಡೀ ಪ್ರಕ್ರಿಯೆಯ ಕೇಂದ್ರ ಬಿಂದುವೇ ಸಮುದಾಯ. ಅವರೇ ಸ್ವಚ್ಛತಾ ಆಂದೋಳನದ ನೇತಾರರು. ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು ಮತ್ತು ವಿಶೇಷ ಚೇತನರು ಆಂದೋಳನದ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಬಯಲು ಶೌಚದ ವಿರುದ್ಧದ ಆಂದೋಳನದಲ್ಲಿ ತಮ್ಮ ಸಮುದಾಯವರಿಗೆ ಪ್ರೇರಣೆ ನೀಡುವುದೂ ಅಲ್ಲದೇ, ಅವರ ಸಹಭಾಗಿತ್ವಕ್ಕೂ ಕಾರಣರಾಗಿದ್ದಾರೆ. ಅಂತಾರಾಷ್ಟ್ರೀಯ ಮಹಿಳಾ ದಿನದಂದು 6000 ಮಹಿಳಾ ಸರಪಂಚರಿಗಾಗಿ ಏರ್ಪಡಿಸಿದ್ದ ವಿಶೇಷ ಸಮಾರಂಭದಲ್ಲಿ ಪ್ರಧಾನಿಯವರು, 10 ಜನ ಸ್ಫೂರ್ತಿದಾಯಕ ಮಹಿಳೆಯರಿಗೆ 'ಸ್ವಚ್ಛತಾ ಚಾಂಪಿಯನ್' ಗೌರವ ನೀಡಿದ್ದಾರೆ.

'ಸ್ವಚ್ಛಾಗ್ರಹಿ'ಗಳು ಎಂದು ಕರೆಯಲ್ಪಡುವ ನೈರ್ಮಲ್ಯೀಕರಣದ ಲಕ್ಷಾಂತರ ಪ್ರೇರಕ ಶಕ್ತಿ(ವ್ಯಕ್ತಿ)ಗಳು ಸಾಮುದಾಯಿಕ ವಿಧಾನದಲ್ಲಿ ತರಬೇತಿಯನ್ನು ಪಡೆದಿರುತ್ತಾರೆ. ವಾಸ್ತವವಾಗಿ ಇಂಥ ತರಬೇತಿಗಳನ್ನು ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣ ಸಚಿವಾಲಯ ನಡೆಸುತ್ತದೆ. ಪರಿಣಾಮಕಾರಿ ಸಮುದಾಯದ ಕ್ರೋಢೀಕರಣ ಹಾಗೂ ನಡವಳಿಕೆಯಲ್ಲಿನ ಧನಾತ್ಮಕ ಬದಲಾವಣೆಯನ್ನು ಪ್ರಧಾನವಾಗಿಟ್ಟುಕೊಂಡು ಈ ತರಬೇತಿ ನೀಡಲಾಗುವುದು. ವಿವಿಧ ಸ್ಥಳಗಳಲ್ಲಿ ಇಂತಹ ಪರಸ್ಪರ ಸಂವಹನದ ತರಬೇತಿ ಕಾರ್ಯ ನಡೆಯುತ್ತವೆ. ತರಬೇತುದಾರರು ಪ್ರೋತ್ಸಾಹ ಧನ ಆಧರಿತ ನಿಯಮದಡಿಯಲ್ಲಿ ಕೆಲಸ ಮಾಡುವವರಾಗಿದ್ದು, ಗ್ರಾಮ ಮಟ್ಟದಲ್ಲಿ ನೈರ್ಮಲ್ಯೀಕರಣದ ಮಹತ್ವ ಹಾಗೂ ಶೌಚಾಲಯಗಳಿಗೆ ಸಮುದಾಯದಲ್ಲಿ ಬೇಡಿಕೆ ವೃದ್ಧಿಯಾಗುವಂತೆ ಪ್ರೇರಣೆ ನೀಡುವ ಜವಾಬ್ದಾರಿ ಹೊಂದಿರುತ್ತಾರೆ. ದೇಶದಾದ್ಯಂತ ಸದ್ಯಕ್ಕೆ 150,000 ಸ್ವಚ್ಛಾಗ್ರಹಿಗಳಿದ್ದು, ಕ್ರಮೇಣ ಈ ಸಂಖ್ಯೆ ಏರುತ್ತಲೇ ಇದೆ. ಭಾರತದ ಪ್ರತಿ ಹಳ್ಳಿಗೂ ಒಬ್ಬ ಸ್ವಚ್ಛಾಗ್ರಹಿ ಇರಬೇಕೆಂಬುದು ಸ್ವಚ್ಛ ಭಾರತ ಮಿಷನ್‌ನ ಮೂಲ ಧ್ಯೇಯಗಳಲ್ಲೊಂದು.

ಸ್ಥಳೀಯವಾಗಿ ಆಯ್ಕೆಯಾಗಿರುವ ಪ್ರತಿನಿಧಿಗಳು, ಜನಸಾಮಾನ್ಯ ಮಟ್ಟದ ಸಂಸ್ಥೆಗಳು, ಎನ್‌ಜಿಓ ಗಳು, ಯುವ ಸಂಘ-ಸಂಸ್ಥೆಗಳು, ಶಾಲಾ ವಿದ್ಯಾರ್ಥಿಗಳು, ನಿಗಮಗಳು ಹಾಗೂ ನಾಗರಿಕ ಸಮಾಜ-ಸಂಸ್ಥೆಗಳನ್ನು ಭಾಗಿಯಾಗಿಸಿಕೊಂಡು, ಸ್ವಚ್ಛ ಭಾರತ ಮಿಷನ್ ಎಂಬುದನ್ನು ಒಂದು 'ಜನಾಂದೋಳನ'ವಾಗಿ ಪರಿವರ್ತಿಸುವಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣ



ಸಚಿವಾಲಯ ಹಾಗೂ ರಾಜ್ಯಗಳು ಗಣನೀಯ ಪ್ರಯತ್ನ ಮಾಡಿವೆ.

ಸ್ವಚ್ಛ ಭಾರತ ಮಿಷನ್‌ಗೆ ಪೂರಕವಾಗಿ ನೈರ್ಮಲ್ಯೀಕರಣದ ಸಂದೇಶ ಪಸರಿಸಲು ಹಾಗೂ ಯೋಜನೆಯ ಯಶಸ್ಸಿಗೆ ಸಹಕರಿಸಲು ಜಾಗೃತಿ ಮೂಡಿಸುವಲ್ಲಿ ವಿದ್ಯುನ್ಮಾನ ಹಾಗೂ ಮುದ್ರಣ ಮಾಧ್ಯಮಗಳನ್ನೂ ಬಳಸಿಕೊಳ್ಳಲಾಗಿದೆ. ಬಾಲಿವುಡ್ ನಟರು ಹಾಗೂ ಖ್ಯಾತ ಕ್ರಿಕೆಟಿಗರನ್ನೂ ಕೂಡಾ ಈ ಮಿಷನ್ ನಲ್ಲಿ ತೊಡಗಿಸಿಕೊಳ್ಳಲಾಗಿದೆ. ಟಿ.ವಿ, ರೇಡಿಯೊ ಮತ್ತು ದೇಶದಾದ್ಯಂತ ಎಲ್ಲೆಡೆ ಹಾಕಲಾಗಿರುವ ಫ್ಲೆಕ್ಸ್ ಕಂಡು ಬರುವ 'ದರ್ವಾಜಾ ಬಂದ್' ಎಂಬ ಆಂದೋಳನದ ನೇತೃತ್ವವನ್ನು ಸೂಪರ್ ಸ್ಟಾರ್ ಶ್ರೀ ಅಮಿತಾಬ್ ಬಚ್ಚನ್ ಅವರು ವಹಿಸಿಕೊಂಡಿದ್ದನ್ನು ನಾವು ಕಾಣಬಹುದು. ಬಯಲು ಶೌಚ ವಿಷಯ ಆಧರಿತ 'ಏಕ್ ಪ್ರೇಮ್ ಕಥಾ' ಎಂಬ ಬಾಲಿವುಡ್ ಬ್ಲಾಕಬಸ್ಟರ್ ಚಿತ್ರವನ್ನು ಶ್ರೀ ಅಕ್ಷಯ್ ಕುಮಾರ್ ನೀಡಿದ್ದು, ಅದೂ ಈ ವರ್ಷದ ಬಿಗ್ಗೆಸ್ಟ್ ಹಿಟ್ ಲಿಸ್ಟ್‌ಗೆ ಸೇರಿದೆ.

### ಪರಿಶೀಲನಾ ಪ್ರಕ್ರಿಯೆ

ಗ್ರಾಮಸಭಾ ಮಟ್ಟದಲ್ಲಿ ಒಮ್ಮೆ ಒಂದು ಹಳ್ಳಿಯು ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಂಡರೆ, ನಂತರ ಅದರ ಪರಿಶೀಲನೆಯ ಪ್ರಕ್ರಿಯೆ ಇರುತ್ತದೆ. ಪ್ರಸ್ತುತವಾಗಿ ಶೇ.60 ರಷ್ಟು ಸ್ವಯಂ ಘೋಷಿತ ಬಯಲು ಶೌಚ ಮುಕ್ತ ಗ್ರಾಮಗಳನ್ನು ಪರೀಶೀಲಿಸಬೇಕಿದ್ದು, ಕಳೆದ ಕೆಲವು ತಿಂಗಳ ಹಿಂದೆ ಶೇ.25 ರಷ್ಟು ಗ್ರಾಮಗಳನ್ನು ಪರಿಶೀಲಿಸಲಾಗಿದೆ. ಸ್ವಚ್ಛ ಭಾರತ್ ಮಿಷನ್ ಮಾರ್ಗದರ್ಶಿಕೆ ಪ್ರಕಾರ, ಬಯಲು ಶೌಚ ಮುಕ್ತ ಎಂದು ಘೋಷಿಸಿಕೊಂಡ ದಿನದಿಂದ ಮೂರನೇ ಪಕ್ಷದ ಪರಿಶೀಲನೆಗೆ 90 ದಿನಗಳ ಕಾಲಾವಕಾಶವನ್ನು ನಿಗದಿ ಮಾಡಲಾಗಿದೆ. ಪರಿಶೀಲನೆ ವೇಳೆ ಯಾವುದೇ ಲೋಪದೋಷಗಳು ಕಂಡು ಬಂದರೆ ತಕ್ಷಣವೇ ಗುರುತಿಸಬೇಕು

ಮತ್ತು ಪರಿಶೀಲನೆಯ ಸಮಯದಲ್ಲಿ ಸಮುದಾಯ ಗಮನಿಸುತ್ತಿರಬೇಕು. ಈ ರೀತಿಯಾಗಿ ಪರಿಶೀಲನೆಗೂ ಸಮಯ ನಿಗದಿ ಹಾಗೂ ಸಮುದಾಯದ ಸಹಭಾಗಿತ್ವ ಸ್ವಚ್ಛ ಭಾರತ ಮಿಷನ್‌ನ ಎರಡನೇಯ ವೈಶಿಷ್ಟ್ಯ ಎನ್ನಬಹುದು.

ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಪರಿಶೀಲನೆಯ ವ್ಯವಸ್ಥೆ ಸದೃಢವಾಗಿದೆ. ಹಾಗೆಯೇ ರಾಷ್ಟ್ರ ಮಟ್ಟದಲ್ಲಿ, ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣ ಸಚಿವಾಲಯವು ಪ್ರತ್ಯೇಕ ಪರಿಶೀಲನೆ ಅಲ್ಲದೇ, ಸ್ವತಂತ್ರ ಸಂಸ್ಥೆಗಳಿಂದ ಮೂರನೇ ಪಕ್ಷಗಳ ಮಾದರಿ ಸಮೀಕ್ಷೆಯನ್ನು ಮಾಡಿಸಲಾಗುತ್ತದೆ. ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ ವತಿಯಿಂದ ಮೇ–ಜೂನ್–2017ರ ಅವಧಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಕೈಗೊಂಡ 140,000 ಮನೆಗಳ ಸಮೀಕ್ಷೆಯಲ್ಲಿ, ದೇಶದಾದ್ಯಂತ ಶೌಚಾಲಯಗಳ ಬಳಕೆ ಶೇ.91 ರಷ್ಟು ಇದೆ ಎಂದು ಹೇಳಲಾಗಿದೆ.



ಬಯಲು ಶೌಚ ಮುಕ್ತ ಗ್ರಾಮ ಎಂದು ಗುರುತಿಸಿಕೊಂಡ ಗ್ರಾಮವೇ ನಂತರ ಮೂಲ ಸಮಸ್ಯೆಯಿಂದ ಸಂಪೂರ್ಣ ಹೊರಬರುವಲ್ಲಿ ವಿಫಲವಾಗಿದ್ದಕ್ಕೆ ಅನೇಕ ನಿದರ್ಶನಗಳಿವೆ. ತುಂಬಾ ದಿನಗಳಿಂದ ನಡೆದುಕೊಂಡು ಬಂದಿದ್ದ ರೂಢಿಗಳನ್ನು ತಪ್ಪಿಸುವುದು ನಿಜಕ್ಕೂ ಕಷ್ಟದಾಯಕ. ಬಯಲು ಶೌಚ ಮುಕ್ತ ಎಂಬುದನ್ನು ನಿರಂತರವಾಗಿ ಕಾಯ್ದುಕೊಳ್ಳುವುದೂ ಸರಳ ಮಾತಲ್ಲ. ಜಿಲ್ಲೆ, ರಾಜ್ಯ ಹಾಗೂ ಗ್ರಾಮಗಳು ಮಾಹಿತಿ, ಶಿಕ್ಷಣ ಮತ್ತು ಸಂವಹನಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಯೋಜನೆಯ ಕನಸನ್ನು ಸಾಧಿಸಲು ಪ್ರಯತ್ನಿಸಬೇಕು. ಬಯಲು ಶೌಚ ಮುಕ್ತತೆಯಲ್ಲಿ ನೈಜ ಯಶಸ್ಸನ್ನು ಸಾಧಿಸಲು ಪೂರಕವಾಗಿ ಕೇಂದ್ರ ಪ್ರಾಯೋಜಿತ ಪ್ರೋತ್ಸಾಹದಾಯಕ ಕ್ರಮ (ಉದಾ: ಪೈಪ್ ಮೂಲಕ ನೀರು ಸರಬರಾಜು) ಗಳನ್ನು ಕೈಗೊಂಡಿದೆ. ಕುಡಿಯುವ ನೀರು ಹಾಗೂ ನೈರ್ಮಲೀಕರಣ ಸಚಿವಾಲಯವೂ ಈ ಕುರಿತು ರಾಜ್ಯಗಳಿಗೆ ಅಗತ್ಯ ಮಾರ್ಗದರ್ಶಿ ಸೂತ್ರಗಳನ್ನು ನೀಡುವುದಲ್ಲದೇ, ಪ್ರೋತ್ಸಾಹದಾಯಕವಾಗಿ ಆರ್ಥಿಕ ಸಹಾಯವನ್ನೂ ನೀಡುತ್ತಿದೆ. ಅಲ್ಲದೇ ಯೋಜನೆಯ ಕನಸನ್ನು ಸಾಕಾರಗೊಳಿಸುವ ಜಿಲ್ಲೆಗೆ 'ಸ್ವಚ್ಛ ಭಾರತ ದರ್ಪಣ್' ಎಂಬ ಮಾನ್ಯತೆಯನ್ನೂ ನೀಡಿ ಗೌರವಿಸುತ್ತದೆ. ಇದೊಂದು ರೀತಿ ಜಿಲ್ಲೆಗಳ ನಡುವಿನ ಆರೋಗ್ಯಕರ ಸ್ಪರ್ಧೆ ಎನ್ನಬಹುದು.

### ತ್ಯಾಜ್ಯ ನಿರ್ವಹಣೆ

ಸ್ವಚ್ಛ ಭಾರತ ಮಿಷನ್ ನ ಮತ್ತೊಂದು ವೈಶಿಷ್ಟ್ಯತೆ ಎಂದರೆ ತ್ಯಾಜ್ಯ ನಿರ್ವಹಣೆ. ಕೇವಲ ಸ್ವಚ್ಛತೆಗೆ ಆದ್ಯತೆ ಅಷ್ಟೇ ಅಲ್ಲ, ಅದರಲ್ಲೂ ಘನ ಹಾಗೂ ದ್ರವ ತ್ಯಾಜ್ಯಗಳ ಸೂಕ್ತ ನಿರ್ವಹಣೆ ಈ ಯೋಜನೆಯ ಪ್ರಮುಖಾಂಶ. ಇತ್ತೀಚೆಗಂತೂ ತ್ಯಾಜ್ಯ 'ಸಂಪನ್ಮೂಲ' ಎಂದು ಗುರುತಿಸಿಕೊಂಡಿದೆ. ಅಲ್ಲದೇ ಇದಕ್ಕೆ 'ಘನ ಹಾಗೂ ದ್ರವ ತ್ಯಾಜ್ಯ ಸಂಪನ್ಮೂಲ ನಿರ್ವಹಣೆ' ಮರು ನಾಮಕರಣ ಮಾಡಲಾಗಿದೆ.

ಸ್ವಚ್ಛತಾ ಮಿಷನ್ ನ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವ ಮೂಲಕ ಗ್ರಾಮಗಳು ಸ್ವಯಂ ಘೋಷಣೆ ಮಾಡಿಕೊಳ್ಳುವ ಅವಕಾಶವಿದೆ. ಈ ನಿಟ್ಟಿನಲ್ಲಿ ಈಗಾಗಲೇ ಅಂದಾಜು 1.5 ಲಕ್ಷ ಗ್ರಾಮಗಳು ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿವೆ. ಇದು ರಾಜ್ಯದ ಸ್ವಚ್ಛತೆಯ ಕನಸು ನನಸಾಗಿಸುವಲ್ಲಿ ಪೂರಕವಲ್ಲದೇ, ಸ್ಥಳೀಯ ಮಟ್ಟದಲ್ಲಿ ಯೋಜನೆಯ ಯಶಸ್ಸಿನ ಪ್ರತಿಬಿಂಬವೂ ಆಗಿರುತ್ತದೆ. ಬಯಲು ಶೌಚ ಮುಕ್ತ ಗ್ರಾಮಗಳಲ್ಲಿ ಘನ ಹಾಗೂ ದ್ರವ ತ್ಯಾಜ್ಯಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿದ್ದೇ ಆದಲ್ಲಿ ಆ ಗ್ರಾಮವನ್ನು ಓಡಿಎಫ್ ಎಂದು ಕರೆಯಲಾಗುತ್ತದೆ.

### ಸ್ವಚ್ಛ ಭಾರತ ಮಿಷನ್ ಎಲ್ಲರ ಜವಾಬ್ದಾರಿ

ಪ್ರಧಾನ ಮಂತ್ರಿಯವರು ಹೇಳಿದಂತೆ ನೈರ್ಮಲ್ಯೀಕರಣ ಎಂಬುದು ಕೇವಲ ಸಚಿವಾಲಯ ಅಥವಾ ಸರ್ಕಾರದ ಜವಾಬ್ದಾರಿಯಲ್ಲಿ ಇದು ಜನಸಾಮಾನ್ಯರೆಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ಸ್ವಚ್ಛ ಗಣ್ಯ ಸ್ಥಳ (ಸಿಪ್) ಮತ್ತು ಸ್ವಚ್ಛತಾ ಕ್ರಿಯಾ ಯೋಜನೆ (ಸ್ಯಾಪ್) ಆರಂಭಿಸಲಾಗಿದೆ.



ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿರಿಮೆ ಹೊಂದಿರುವ 20 ಸ್ಥಳಗಳನ್ನು ಈಗಾಗಲೇ ಎಸ್‌ಐಸಿ ಅಡಿ ಗುರುತಿಸಲಾಗಿದ್ದು, ಅವುಗಳನ್ನು ಸ್ವಚ್ಛತೆಯ ದೀಪಗಳಂತೆ ಮಾರ್ಪಡಿಸುವಲ್ಲಿ ಭರದಿಂದ ಕೆಲಸ ಸಾಗಿದೆ. ಇದೇ ಹಂತದಲ್ಲಿ ಇನ್ನೂ 80 ಸ್ಥಳಗಳನ್ನು ಆಯ್ಕೆ ಮಾಡಲಾಗುವುದು. ಕೇಂದ್ರ ಸರ್ಕಾರ ಎಲ್ಲ ಸಚಿವಾಲಯಗಳೂ ಸಹ ಸ್ವಚ್ಛತಾ ಕ್ರಿಯಾ ಯೋಜನೆ ಅನುಷ್ಠಾನಕ್ಕೆ ಸಂಪೂರ್ಣವಾಗಿ ಸಹಕರಿಸುತ್ತಿವೆ. 12000 ಕೋಟಿ ಅನುದಾನವನ್ನು 2017–18 ರ ಹಣಕಾಸು ವರ್ಷದಲ್ಲಿ ತೆಗೆದಿರಿಸಿವೆ. ಬಹುಶಃ ಸರ್ಕಾರದ ಎಲ್ಲ ವಿಭಾಗಗಳ ಸಹಭಾಗಿತ್ವ ಒಳಗೊಂಡ ಏಕೈಕ ಸರ್ಕಾರಿ ಯೋಜನೆ ಎಂದರೆ ಸ್ವಚ್ಛ ಭಾರತ ಮಿಷನ್ ಮಾತ್ರ ಎನ್ನಬಹುದು.

ಖಾಸಗಿ ವಲಯವೂ ಕೂಡಾ ಸ್ವಚ್ಛ ಭಾರತ ಮಿಷನ್ ಯಶಸ್ಸಿಗೆ ತನ್ನದೇ ಕೊಡುಗೆ ನೀಡಲು ಬಯಸಿದೆ. ಅದೂ ಸಿಎಸ್ ಆರ್ ಅಡಿಯಲ್ಲಿ ಕೇವಲ ಹಣ ನೀಡಿ ಕೈತೊಳೆದುಕೊಳ್ಳುವುದಲ್ಲ, ಮಾನವ ಹಾಗೂ ವ್ಯವಸ್ಥಾಪಕ ಸಂಪನ್ಮೂಲಗಳನ್ನೂ ಕೂಡಾ ಹೆಚ್ಚಿಸಿಕೊಳ್ಳುವಲ್ಲಿ ಆಸ್ಥೆ ತೋರಿರುವುದು ಗಮನಾರ್ಹ. ಟಾಟಾ ಟ್ರಸ್ಟ್ ಈ ನಿಟ್ಟಿನಲ್ಲಿ ಭಾಗೀದಾರಿಕೆ ಸಲ್ಲಿಸಿದ್ದು ವಿಶೇಷ. ಈ ಟ್ರಸ್ಟ್ 600 ಜನ ವೃತ್ತಿಪರ ಯುವಜನತೆಯನ್ನು ಪ್ರತಿ ಜಿಲ್ಲೆಯಲ್ಲೂ ಸ್ವಚ್ಛ ಭಾರತ ಮಿಷನ್ ಯಶಸ್ಸಿಗೆ ಪೂರಕವಾಗಿ ಕೆಲಸ ಮಾಡುವಲ್ಲಿ ನೇಮಿಸಿದೆ. ಈ ವೃತ್ತಿಪರರನ್ನು 'ಜಿಲ್ಲಾ ಸ್ವಚ್ಛ ಭಾರತ ಪ್ರೇರಕರು' ಎಂದು ಕರೆಯಲಾಗುತ್ತಿದೆ. ಇವರ ಕಾರ್ಯ ಎಲ್ಲ ರಾಜ್ಯ ಸರ್ಕಾರಗಳಿಂದಲೂ ಪ್ರಶಂಸೆಗೆ ಪಾತ್ರವಾಗಿದೆ.

### ಜನಾಂದೋಲನವಾಗಿ ಸ್ವಚ್ಛ ಭಾರತ ಮಿಷನ್

ಸ್ವಚ್ಛ ಭಾರತ್ ಮಿಷನ್ 3 ನೇ ವರ್ಷದ ಸಂಭ್ರಮದಲ್ಲಿದೆ. ಒಂದು ಯೋಜನೆಯಾಗಿ ಆರಂಭವಾದ ಈ



ಕಾರ್ಯಕ್ರಮ, ಇಂದು ಜನಾಂದೋಳನವಾಗಿ ಪರಿವರ್ತನೆ ಹೊಂದಿದೆ. ನವಭಾರತ ನಿರ್ಮಾಣಕ್ಕಾಗಿ ಪ್ರಧಾನಿ ಅವರು, ನೀಡಿದ ಕರೆಯಿಂದ ಸ್ಫೂರ್ತಿಗೊಂಡು ಸ್ವಚ್ಛ ಭಾರತ ಮಿಷನ್ ಗ್ರಾಮ್ ಅಡಿ ಜನಸಾಮಾನ್ಯರ ಸಹಭಾಗಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಕ್ರಾಂತಿಯನ್ನೇ ಮಾಡಲಾಯಿತು. ಈ ನಿಟ್ಟಿನಲ್ಲಿ ಸ್ವಚ್ಛಥಾನ್ ಮೊದಲನೆಯದು. ಸ್ವಚ್ಛ ಭಾರತ ಮಿಷನ್‌ಗೆ ಸಂಬಂಧಿಸಿದ ಅನೇಕ ಸವಾಲು ಪ್ರಶ್ನೆಗಳಿಗೆ ಆಧುನಿಕ ತಂತ್ರಜ್ಞಾನ ಆಧರಿತ ಪರಿಹಾರ ನೀಡುವುದೇ ಸ್ವಚ್ಛ ಭಾರತ ಹ್ಯಾಕಥಾನ್‌ನ ಪ್ರಧಾನ ಲಕ್ಷಣ. ಶೌಚಾಲಯಗಳ ಬಳಕೆ, ತಂತ್ರಜ್ಞಾನದ ವಿನ್ಯಾಸ, ಶಾಲಾ ಶೌಚಾಲಯ ಹಾಗೂ ತ್ಯಾಜ್ಯ ನಿರ್ವಹಣೆ, ಮುಟ್ಟಿನ ತ್ಯಾಜ್ಯದ ಸುರಕ್ಷಿತ ವಿಲೇವಾರಿ ಮುಂತಾದ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ತಂತ್ರಜ್ಞಾನಾಧರಿತ ಪರಿಹಾರ ಕಂಡುಕೊಳ್ಳಲಾಗಿದೆ. ಸ್ವಚ್ಛಥಾನ್ ದೇಶದಾದ್ಯಂತ ಇದುವರೆಗೂ 3000 ಪ್ರವೇಶವನ್ನು ಸ್ವೀಕರಿಸಿದ್ದು, ಪೂರಕವಾಗಿ ನೂತನ ಪರಿಕಲ್ಪನೆಗಳನ್ನು ತಿಳಿಸಿದ್ದು ಮಿಷನ್‌ನ ಯಶಸ್ಸಿಗೆ ಸಹಕಾರಿಯಾಗಿದೆ.

**ಸಂಕಲ್ಪದಿಂದ** ಸಿದ್ಧಿ ಎಂಬ ಪ್ರಧಾನಿ ಅವರ ಮಾತಿನಂತೆ, ಎಸ್ ಬಿಎಂ–ಜಿ (ಸ್ವಚ್ಛ ಭಾರತ ಮಿಷನ್), ಸ್ವಚ್ಛ ಸಂಕಲ್ಪದಿಂದ ಸ್ವಚ್ಛ ಸಿದ್ಧಿ ಎಂಬ ಚಲನಚಿತ್ರ, ಇದೇ ವಿಷಯಾಧಾರಿತ ನಿಬಂಧ ಮತ್ತು ಚಿತ್ರಸ್ಪರ್ಧೆ ಮೊದಲಾದವು ಸ್ವಚ್ಛತೆ ಎಂಬುದನ್ನು ಜನಾಂದೋಳನವನ್ನಾಗಿ ರೂಪಿಸುವಲ್ಲಿ ತೆಗೆದುಕೊಂಡ ಮಹತ್ವದ ಹೆಜ್ಜೆಗಳು. ಶಾಲಾ ಮಕ್ಕಳು, ಸಶಸ್ತ್ರ ಪಡೆಗಳು, ಯುವ ಸಂಘಟನೆಗಳು ಮತ್ತು ಬಹುಪ್ರಮಾಣದಲ್ಲಿ ಸಾರ್ವಜನಿಕರೂ ಕೂಡಾ ಈ ಆಂದೋಳನದಲ್ಲಿ ಭಾಗಿಯಾಗಿದ್ದಾರೆ. ನಿಬಂಧ ಅಥವಾ ವಿಡಿಯೊ ಮಾಡುವ ಮೂಲಕ ಸ್ವಚ್ಛತಾ ಆಂದೋಳನಕ್ಕೆ ಸಂಬಂಧಿಸಿದ ತಮ್ಮ ಅನುಭವ ಹಾಗೂ ಯೋಜನೆ/ಯೋಚನೆಗಳನ್ನು ಹಂಚಿಕೊಂಡಿದ್ದಾರೆ. ಸ್ವಚ್ಛ ಭಾರತಕ್ಕೆ ಸಂಬಂಧಿಸಿದಂತೆ ಒಂದು ಕೋಟಿಗೂ ಹೆಚ್ಚು ನಿಬಂಧ ಮತ್ತು 50 ಸಾವಿರಕ್ಕೂ ಹೆಚ್ಚು ವಿಡಿಯೊಗಳನ್ನು ನಿರೀಕ್ಷಿಸಿದ್ದು, ಈ ಮೂಲಕ ಸಾರ್ವಜನಿಕರಲ್ಲಿ ಸ್ವಚ್ಛತೆಯ ಕುರಿತ ಜಾಗೃತಿ ಹಾಗೂ ಸ್ವಚ್ಛ ಭಾರತ ಮಿಷನ್ ನ ಧ್ಯೇಯ ಎಲ್ಲರಲ್ಲೂ ಪ್ರೇರಕವಾಗಲಿ ಎಂಬುದೇ ಇದರ ಮೂಲ ಉದ್ದೇಶ.

ಪ್ರಧಾನಿ ಅವರು, ಆ.27 ರಂದು ಮಾಡಿದ ಮನ್ ಕಿ ಬಾತ್ ಭಾಷಣದಲ್ಲಿ, ಬಹು ಮಹತ್ವಾಕಾಂಕ್ಷೆಯುಳ್ಳ ಈ ಎಲ್ಲ ಕ್ರಮಗಳ ಕುರಿತು ಪ್ರಸ್ತಾಪಿಸಿದರು. ಈ ಯೋಜನೆಯಲ್ಲಿ ಸಮಯದ ಮಿತಿ, ದೇಶದಾದ್ಯಂತ ಪ್ರಚಾರ, ಶೌಚಾಲಯಗಳ ನಿರ್ಮಾಣ, ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಹಾಗೂ ಶ್ರಮದಾನದ ಮೂಲಕ (2017 ರ ಸೆ.15 ರಿಂದ ಅ.2 ರವರೆಗೆ) ಸ್ವಚ್ಛ ಭಾರತ್ ಮಿಷನ್ ಕುರಿತ ಜಾಗೃತಿ ಮೂಡಿಸುವಂತೆ ಜನತೆಗೆ ಕರೆ ಕೊಟ್ಟಿದ್ದಾರೆ. ಇದಕ್ಕೆ ಅವರು 'ಸ್ವಚ್ಛತೆಯೇ ಸೇವೆ' ಎಂಬ ಹೆಸರು ನೀಡಿದ್ದಾರೆ. ಉತ್ತರ ಪ್ರದೇಶದ ಗ್ರಾಮವೊಂದರಲ್ಲಿ ರಾಷ್ಟ್ರಪತಿಯವರು, ಸ್ವಚ್ಛ ಸಂಕಲ್ಪದಿಂದ ಸ್ವಚ್ಛ ಸಿದ್ಧಿ ಕಾರ್ಯಕ್ರಮಕ್ಕೆ



2017 ರ ಆ.15 ರಂದು ಅಧಿಕೃತವಾಗಿ ಚಾಲನೆ ನೀಡಿದ್ದಾರೆ.

### ಪರಿಕಲ್ಪನೆಯೇ ಬದಲು

ಇವೆಲ್ಲ ಅವಶ್ಯಕ ಕ್ರಮಗಳ ಪ್ರತಿಫಲವಾಗಿ ಸ್ವಚ್ಛ ಭಾರತ ಮಿಷನ್ ದೇಶಾದ್ಯಂತ ಪ್ರಬಲವಾಗಿ ತನ್ನ ಮಹತ್ವ ಸಾರಿದೆ. ಇದರಿಂದ ಜನತೆಯಲ್ಲಿಯೂ ಧನಾತ್ಮಕ ಪ್ರೇರಣೆ ನೀಡುವ ಮೂಲಕ ಬದಲಾವಣೆಗೆ ಕಾರಣವಾಗಿದೆ. ಇದು ದೇಶದ ಪರಿಕಲ್ಪನೆಯನ್ನೇ ಬದಲಿಸಿದ್ದೂ ಅಲ್ಲದೇ, ಸ್ವಾತಂತ್ರ್ಯ ದೊರಕಿ 70 ವರ್ಷಗಳ ನಂತರ, ಮಹಾತ್ಮ ಗಾಂಧೀಜಿಯವರ ಸ್ವಚ್ಛ ಭಾರತದ ಕನಸು ನನಸಾಗುತ್ತಿದೆ. ಇದುವರೆಗೂ ಅಸಾಧ್ಯ ಎಂದು ಅನ್ನಿಸಿದ್ದ ಬಯಲು ಶೌಚ ಮುಕ್ತತೆಯ ಕನಸನ್ನು ಕೇವಲ 5 ವರ್ಷಗಳಲ್ಲಿ ಸಾಧಿಸುವ ದೃಢ ಸಂಕಲ್ಪೈಯಲು ಪ್ರಧಾನಿಗೆ ಇವೆಲ್ಲ ಬಲ ತಂದುಕೊಟ್ಟವೆಂದೇ ಹೇಳಬಹುದು. ಇದೇ ರೀತಿ ಮುಂದುವರೆಯಲು ಇನ್ನೂ ಉತ್ತಮ ಮಾರ್ಗವಿದೆ. ಇದುವರೆಗಿನ ಪ್ರಗತಿಯನ್ನು ಪರಿಗಣಿಸಿದರೆ ಮುಂಬರುವ 12–15 ತಿಂಗಳಲ್ಲಿ ನಿರೀಕ್ಷಿತ ಫಲಿತಾಂಶ ಕಾಣಬಹುದು. ಲಕ್ಷಾಂತರ ಜನರ ಸಹಭಾಗಿತ್ವದ ಪರಿಣಾಮ ಸ್ವಚ್ಛ ಭಾರತದ ಗುರಿಯನ್ನು ಸಾಧಿಸುವುದು ಇದೀಗ ಖಚಿತವಾಗಿದೆ. ❑

# ಯೋಜನಾ

## ನವೆಂಬರ್ 2017 ಸಂಚಿಕೆಯ ವಿಷಯ

# ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು

ಅನಿವಾರ್ಯ

# ಗ್ರಾಮೀಣ ಪ್ರದೇಶಗಳಲ್ಲಿ ಅವಕಾಶ ನಿರೂಪಣೆ

* ಅಮರ್‌ಜೀತ್ ಸಿನ್ಹಾ



ಬಡತನವನ್ನು ಹಲವಾರು ದೃಷ್ಟಿಕೋನದಿಂದ ಗ್ರಹಿಸಿ, ಪ್ರೋತ್ಸಾಹಭರಿತ ಮಾರ್ಗಗಳ ಮೂಲಕ ಗ್ರಾಮೀಣ ಸುಧಾರಣೆಯನ್ನು ಮಾಡುವ ಸವಾಲು ಗ್ರಾಮ ಪಂಚಾಯತ್‌ಗಳ ಮೇಲೆ ಇದೆ. ಇದಕ್ಕಾಗಿ ಅಂತ್ಯೋದಯ ಮಿಷನ್ ಅನ್ನು ಉತ್ತಮವಾಗಿ ಜಾರಿ ಮಾಡಿ, ಹಲವು ಆಯಾಮದ ಸಮಸ್ಯೆ ಹೊಂದಿರುವ ಬಡತನವನ್ನು ಹೋಗಲಾಡಿಸಬಹುದಾಗಿದೆ.

ಕ್ವಿಟ್ ಇಂಡಿಯಾ 1942ರ ಚಳವಳಿಗೆ 75 ವರ್ಷಗಳಾದ ಸಂದರ್ಭದಲ್ಲಿ ಪ್ರಧಾನಮಂತ್ರಿಗಳು ಭಾರತದಿಂದ ಬಡತನವನ್ನು ಹೊಡೆದೋಡಿಸಲು ಕರೆ ನೀಡಿದರು. ಇದರ ಜತೆಗೆ 2022ರೊಳಗೆ ಬಡತನ ಮುಕ್ತವಾಗಿಸಲು ಸಾಮಾಜಿಕ ಸಂಕಲ್ಪದ ಬಗ್ಗೆಯೂ ಕರೆ ನೀಡಿದರು. ಈ ವಿಚಾರವಾಗಿ ಮಾಹಿತಿ ನೀಡಬೇಕಾದರೆ, ಗ್ರಾಮೀಣ ಭಾರತದಲ್ಲಿ ಸುಮಾರು 8.85 ಕೋಟಿ ಬಡಕುಟುಂಬಗಳಿವೆ. ಇವರು ಬಡತನ ವ್ಯವಸ್ಥೆಯೊಳಗೆ ಸೇರಿಹೋಗಿದ್ದು, ಬಹಳಷ್ಟು ಸಂಖ್ಯೆಯಲ್ಲಿರುವ ಇವರನ್ನು ಮೇಲೆತ್ತಿ, ಸಮರ್ಥನೀಯರನ್ನಾಗಿ ಮಾಡುವುದು ಸವಾಲಿನ ಕೆಲಸವಾಗಿದೆ. ಆದರೂ ಕಳೆದ ಎರಡೂವರೆ ವರ್ಷಗಳಿಂದ ಗ್ರಾಮೀಣ ಪ್ರದೇಶದ ಬಡವರಲ್ಲಿ ಆತ್ಮಸ್ಥೈರ್ಯ ಮೂಡಿಸುವ ಕೆಲಸ ಮಾಡಲಾಗುತ್ತಿದ್ದು, ಗ್ರಾಮೀಣ ಭಾಗದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತಿದೆ.

ಇತ್ತೀಚಿನ ಹೆಚ್‌ಎಸ್‌ಬಿಸಿ ನಡೆಸಿದ ಅಧ್ಯಯನದ ಪ್ರಕಾರ, ಗ್ರಾಮೀಣ ಪ್ರದೇಶದ ಶೇ.69 ರಷ್ಟು ಕುಟುಂಬಗಳಿಗೆ ಕೇವಲ ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಇದೆ ಅಥವಾ ಭೂಮಿಯೇ ಇಲ್ಲ. ಉಳಿದ ಶೇ.31 ರಷ್ಟು ಕುಟುಂಬಗಳಿಗೆ ಹೋಲಿಕೆ ಮಾಡಿದರೆ ಇವರ ಜೀವನ ಕಷ್ಟಕರವಾಗಿದೆ. ಇವರ ನೈಜ ವೇತನ ಹೆಚ್ಚಿಸುವ, ಗ್ರಾಮೀಣ ಕೌಶಲ್ಯರಹಿತ ನಿರುದ್ಯೋಗ ಸಮಸ್ಯೆ ಹೋಗಲಾಡಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ. ಅಲ್ಲದೆ ಕಷ್ಟದ ಸಂದರ್ಭಗಳಾದ ಬರಗಾಲ, ಕೃಷಿ ಉತ್ಪನ್ನಗಳ ಬೆಲೆ ಇಳಿಕೆ ಸಂದರ್ಭದಲ್ಲಿ ಅವರ ಜೀವನೋಪಾಯಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಇದಕ್ಕಾಗಿ ಐಆರ್‌ಎಂಎ (2017) ನಡೆಸಿದ ದೀನದಯಾಳ್ ಅಂತ್ಯೋದಯ ರಾಷ್ಟ್ರೀಯ ಗ್ರಾಮೀಣ ಜೀವನ ಮಿಷನ್‌ನ ರಾಷ್ಟ್ರೀಯ ಮೌಲ್ಯಮಾಪನ ಪ್ರಕಾರ ಉಪಕ್ರಮ ಕೈಗೊಳ್ಳಲಾದ ಪ್ರದೇಶಗಳಲ್ಲಿ ದುರ್ಬಲರು ಹೆಚ್ಚುವರಿಯಾಗಿ ಶೇ.22 ರಷ್ಟು ಆದಾಯ ಗಳಿಸಿರುವುದು ಕಂಡುಬಂದಿದೆ. ಡಿಎವೈಎನ್‌ಆರ್‌ಎಲ್‌ಎಂ ನಡಿಯ ಮಹಿಳಾ ಸ್ವಸಹಾಯ ಗುಂಪುಗಳು ಇರುವ ಕಡೆ ಸಕ್ರಿಯವಾಗಿ ಉತ್ಪಾದಕ ಆಸ್ತಿ, ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕಾಂಶ ವಲಯದಲ್ಲಿ ಹೆಚ್ಚಿನ ಹೂಡಿಕೆ ಆಗಿರುವುದು ವ್ಯಕ್ತವಾಗಿದೆ. ಸಾಮಾಜಿಕ ಬಂಡವಾಳ ವಿಷಯವನ್ನೇ ಬಳಸಿಕೊಂಡು ವೈವಿಧ್ಯತೆಯಿಂದ ಅಭಿವೃದ್ಧಿಯನ್ನು ಹೇಗೆ ಸಾಬೀತು ಮಾಡಬಹುದೆಂಬುದನ್ನು ಇದು ತೋರಿಸಿದೆ ಎಂದು ಈ ವರದಿ ಹೇಳಿದೆ. ಅಲ್ಲದೆ ಇದೊಂದು ಜೀವನ ಸುಧಾರಣೆ, ಅಭಿವೃದ್ಧಿಗೆ ಉತ್ತಮ ಮಾರ್ಗ ಎಂದೂ ಅಭಿಪ್ರಾಯಪಟ್ಟಿದೆ.

ಗ್ರಾಮೀಣಾಭಿವೃದ್ಧಿ ಸಚಿವಾಲಯವು ಸಾರ್ವಜನಿಕ ಕಾರ್ಯಕ್ರಮ ಜಾರಿಯ (ಉದ್ಯೋಗ, ಕೌಶಲ್ಯ, ಸಾಮಾಜಿಕ ಭದ್ರತೆ, ಜೀವನ ವೈವಿಧ್ಯತೆ, ರಸ್ತೆ ನಿರ್ಮಾಣ, ವಸತಿ, ನೀರು ಸಂಸ್ಕರಣೆ, ಘನ ಮತ್ತು ನೀರಿನ ಮೂಲ ನಿರ್ವಹಣೆ) ಪ್ರಮುಖ ಮೂಲವಾಗಿದೆ. ಒಬ್ಬ ವ್ಯಕ್ತಿಯ ಅವಶ್ಯಕತೆಗಳಿಗಾಗಿ ಏನೇನು ಬೇಕಾಗಿದೆ ಅಂದರೆ, ಶಿಕ್ಷಣ,

* ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಇಲಾಖೆ, ಭಾರತ ಸರ್ಕಾರ E-mail : secyrd@nic.in

ಆರೋಗ್ಯ, ಕೌಶಲ್ಯ, ನೈರ್ಮಲೀಕರಣ, ಸ್ವಚ್ಛ ಕುಡಿಯುವ ನೀರು, ಪೌಷ್ಟಿಕಾಂಶ, ಆಹಾರ ಭದ್ರತೆ, ಜೀವನ ವಿಧಾನ, ವಸತಿ, ಲಿಂಗ ಮತ್ತು ಸಾಮಾಜಿಕ ಸಮಾನತೆ ಹಾಗೂ ಸಬಲೀಕರಣ, ಸಂಪರ್ಕ, ವಿದ್ಯುತ್, ಸಮರ್ಥ ಸಂಪನ್ಮೂಲಗಳ ವ್ಯವಸ್ಥೆಯ ಉಪಯೋಗ, ಕಸ ನಿರ್ವಹಣೆ ಮತ್ತು ಈ ಎಲ್ಲವುಗಳನ್ನು ಸಮರ್ಥವಾಗಿ ವೈವಿಧ್ಯತೆಯನ್ನೊಳಗೊಂಡ ಆರ್ಥಿಕ ಚಟುವಟಿಕೆಗಳ ಮೂಲಕ ನೀಡಿ ಹೆಚ್ಚಿನ ಆದಾಯ ಗಳಿಸಲು ಸಹಾಯ ಮಾಡಿದಲ್ಲಿ, ಹೆಚ್ಚಿನ ಆದಾಯ ಗಳಿಕೆ ಮಾಡಿ ಬಡತನದಿಂದ ಮೇಲೆ ಬರಲು ಸಾಧ್ಯವಾಗುತ್ತದೆ. ಬಡತನವನ್ನು ಹಲವಾರು ದೃಷ್ಟಿಕೋನದಿಂದ ಗ್ರಹಿಸಿ, ಪ್ರೋತ್ಸಾಹ ಭರಿತ ಮಾರ್ಗಗಳ ಮೂಲಕ ಗ್ರಾಮೀಣ ಸುಧಾರಣೆಯನ್ನು ಮಾಡುವ ಸವಾಲು ಗ್ರಾಮ ಪಂಚಾಯತಿಗಳ ಮೇಲೆ ಇದೆ. ಇದಕ್ಕಾಗಿ ಅಂತ್ಯೋದಯ ಮಿಷನ್ ಅನ್ನು ಉತ್ತಮವಾಗಿ ಜಾರಿ ಮಾಡಿ, ಹಲವು ಆಯಾಮದ ಸಮಸ್ಯೆ ಹೊಂದಿರುವ ಬಡತನವನ್ನು ಹೋಗಲಾಡಿಸಬಹುದಾಗಿದೆ. ಹೀಗಾಗಿ ಗ್ರಾಮೀಣಾಭಿವೃದ್ಧಿ ಸಚಿವಾಲಯ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳ ಸಹಯೋಗದಲ್ಲಿ ಕಾರ್ಯಕ್ರಮಗಳನ್ನು ಇನ್ನಷ್ಟು ಉತ್ತಮಪಡಿಸಿ ಮತ್ತು ಸರಿಯಾಗಿ ಜಾರಿಯಾಗುವಂತೆ ಶ್ರಮಿಸುತ್ತಿದೆ. ಇದರ ಜತೆಗೆ ಅಂತ್ಯೋದಯ ಮಿಷನ್‌ಗೆ ಉತ್ತಮ ರೂಪು ನೀಡಿ ಎರಡೂವರೆ ವರ್ಷಗಳಲ್ಲಿ ಪರಿಣಾಮಕಾರಿಯಾಗಿ ಬದಲಾವಣೆ ಮಾಡಿದೆ.

**1. ಹಂಚಿಕೆಯಲ್ಲಿ ಮಧ್ಯಸ್ಥಿಕೆ** – ಭಾರತವು ಭಾರಿ ಪ್ರಮಾಣದ ಗ್ರಾಮೀಣ ಕುಟುಂಬಗಳನ್ನು ಹೊಂದಿದ್ದು, ಸಾವಿರಾರು ಜನವಸತಿ ಪ್ರದೇಶ ಮತ್ತು ಹಳ್ಳಿಗಳಲ್ಲಿ ವಿಸ್ತಾರವಾಗಿ ಹರಡಿಕೊಂಡಿದೆ. ಕೇಂದ್ರ ಸರ್ಕಾರ ನೀಡುತ್ತಿರುವ ಹಣ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳು ಮಾಡುತ್ತಿರುವ ವೆಚ್ಚಗಳಲ್ಲಿ ಇತ್ತೀಚಿನ ದಿನಗಳಲ್ಲಿ ಗಣನೀಯ ಏರಿಕೆಯಾಗಿದೆ. 2017–18ರಲ್ಲಿ 1.05 ಲಕ್ಷ ಕೋಟಿ ಅನುದಾನ ನೀಡಲಾಗಿದ್ದು, 2012–13ಕ್ಕೆ ಹೋಲಿಕೆ ಮಾಡಿದರೆ ಇದು ದುಪ್ಪಟ್ಟಾಗಿದೆ. ಇದರಲ್ಲಿ ರಾಜ್ಯಗಳ ಪಾಲು (ಹಿಮಾಲಯ ಕಣಿವೆ ಮತ್ತು ಈಶಾನ್ಯ ರಾಜ್ಯಗಳ ಹೊರತುಪಡಿಸಿ ಉಳಿದ ರಾಜ್ಯಗಳಿಗೆ 60–40 ಪಾಲು ಮತ್ತು ಹಿಮಾಲಯ ಕಣಿವೆ, ಈಶಾನ್ಯ ರಾಜ್ಯಗಳಿಗೆ 90–10 ಮಾದರಿಯಲ್ಲಿ) ಹಂಚಿಕೆ



ಮಾಡಲಾಗುತ್ತಿದೆ.ಇದೇ ಅವಧಿಯಲ್ಲಿ 14ನೇ ಹಣಕಾಸು ಆಯೋಗದ ಅಡಿಯಲ್ಲಿ ಗ್ರಾಮ ಪಂಚಾಯತಿಗಳಿಗೆ 25 ಸಾವಿರ ಕೋಟಿಯಿಂದ 35 ಸಾವಿರ ಕೋಟಿ ರೂ. ಅನುದಾನ ನೀಡಲಾಗಿದೆ. ಜತೆಗೆ 2017–18ರ ಅವಧಿಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ಬ್ಯಾಂಕ್ ಸಾಲ ರೂಪದಲ್ಲಿ ವಿತರಿಸಲಾಗಿದೆ. 70 ಸಾವಿರ ಕೋಟಿ ಹಣ ನೀಡಲಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ ಈ ನೀಡಿಕೆ ಭಾರಿ ಪ್ರಮಾಣದಲ್ಲಿ ಹೆಚ್ಚಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬೃಹತ್ ಪ್ರಮಾಣದ ಆರ್ಥಿಕ ಚಟುವಟಿಕೆಗಳಿಗಾಗಿ ಕೌಶಲ್ಯ ಮತ್ತು ಸ್ವಯಂ ಉದ್ಯೋಗಗಳಿಗೆ ಹೆಚ್ಚಿನ ಒತ್ತು ಕಲ್ಪಿಸಲಾಗಿದೆ. ಪಶುಸಂಗೋಪನೆ ಮತ್ತು ಜೀವನೋಪಾಯ ವೈವಿಧ್ಯತೆಯನ್ನು ಒಗ್ಗೂಡಿಸುವ ಮೂಲಕ ಗ್ರಾಮೀಣ ಪ್ರದೇಶದ ಕುಟುಂಬಗಳಿಗೆ ಹೆಚ್ಚುವರಿಯಾಗಿ ಆದಾಯ ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಅಡಿಯಲ್ಲಿ ಅಕ್ಕಿ ಮತ್ತು ಗೋಧಿಯನ್ನು ಬಡ ಕುಟುಂಬಗಳಿಗೆ ಕಡಿಮೆ ದರದಲ್ಲಿ ನೀಡುವ ಸಲುವಾಗಿ ರಾಷ್ಟ್ರೀಯ ಸಬ್ಸಿಡಿಯನ್ನೂ ಏರಿಕೆ ಮಾಡಲಾಗಿದೆ. ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡು ಅತ್ಯುತ್ತಮ ಮಾದರಿಯಲ್ಲಿ, ಅತಿ ಕಡಿಮೆ ಸೋರಿಕೆ ಮೂಲಕ ಗ್ರಾಮೀಣ ಕುಟುಂಬಗಳನ್ನು ಸುಧಾರಣೆ ತರಲಾಗಿದೆ. ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆಯಡಿಯಲ್ಲಿ ಒಂದು ಕೋಟಿ ಸುಂದರ ಮನೆಗಳನ್ನು ನಿರ್ಮಿಸಿಕೊಡುವ ಕನಸಿದೆ. ಜತೆಯಲ್ಲಿ ಗ್ರಾಮೀಣ ಪ್ರದೇಶದ ಸಂಪರ್ಕಕ್ಕಾಗಿ ಸರ್ವ ಋತು ರಸ್ತೆಗಳನ್ನು 2019ರ ಮಾರ್ಚ್ ಅಂತ್ಯದ ವೇಳೆಗೆ ಪೂರ್ಣಗೊಳಿಸಲಾಗುತ್ತದೆ. ಇದರ ಜತೆಯಲ್ಲೇ ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡು ಮಹಿಳಾ ಸ್ವ ಸಹಾಯ ಗುಂಪುಗಳಿಗೆ 2018–19ರ ವೇಳೆಗೆ 60 ಸಾವಿರ ಕೋಟಿ ರೂ. ಬ್ಯಾಂಕ್ ಸಾಲ ನೀಡಲು ಗುರಿಹೊಂದಲಾಗಿದೆ. 2014–15ಕ್ಕೆ ಹೋಲಿಕೆ ಮಾಡಿದರೆ ಇದು ಮೂರು ಪಟ್ಟು ಹೆಚ್ಚಾಗಿದೆ.

**2. ಜಲ ಸಂರಕ್ಷಣೆಗೆ ಒತ್ತು ಮತ್ತು ಜೀವನೋಪಾಯ ಭದ್ರತೆ** – ಒಂದು ಹಳ್ಳಿಯನ್ನು ಮಾದರಿ ಎಂದು ಹೇಳಬೇಕಾದರೆ, ಆ ಗ್ರಾಮದಲ್ಲಿನ ಜನ ಚೆನ್ನಾಗಿ ಜೀವನ ಸಾಗಿಸುತ್ತಿರಬೇಕು ಮತ್ತು ಆ ಗ್ರಾಮದಲ್ಲಿ ನೀರಿನ ಸಂರಕ್ಷಣಾ ವ್ಯವಸ್ಥೆ ಚೆನ್ನಾಗಿರಬೇಕು. ಇದರಿಂದಾಗೇ ಮನರೇಗಾದಲ್ಲಿ ಶೇ.60 ರಷ್ಟು ವೆಚ್ಚವನ್ನು ಕೃಷಿ ಮತ್ತು ಇದಕ್ಕೆ ಸಂಬಂಧಿಸಿದ ಕೆಲಸಗಳಿಗಾಗಿ ಮಾಡುವಂತೆ ನಿರ್ಧರಿಸಲಾಗಿದ್ದು. 2015ರ ಮೇನಲ್ಲಿ ಬರಪೀಡಿತ 13 ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಚರ್ಚೆ ನಡೆಸುವಾಗ ಮಾನ್ಯ ಪ್ರಧಾನಮಂತ್ರಿಗಳು ಜಲ ಸಂರಕ್ಷಣೆಗೆ ಒತ್ತು ನೀಡುವಂತೆ ಒತ್ತಾಯ ಮಾಡಿದ್ದರು. ರಾಜಸ್ಥಾನದಲ್ಲಿ ಮುಖ್ಯಮಂತ್ರಿ ಜಲ ಸ್ವಾವಲಂಬನಾ ಅಭಿಯಾನ, ಆಂಧ್ರ ಪ್ರದೇಶದಲ್ಲಿ ನೀರು–ಚೆಟ್ಟು, ತೆಲಂಗಾಣದಲ್ಲಿ ಮಿಷನ್ ಕಾಕತೀಯ, ಮಹಾರಾಷ್ಟ್ರದಲ್ಲಿ ಜಲಯುಕ್ತ ಶಿಬಿರ ಮತ್ತು ಜನ ಸಂರಕ್ಷಣಾ ಯೋಜನೆಗಳು, ಜಾರ್ಖಂಡ್ ನಲ್ಲಿ ದೋಭಾ ಕೃಷಿ ಹೊಂಡಗಳು ಹಾಗೂ ಇತರೆ ರಾಜ್ಯಗಳಲ್ಲಿ ನೀರು ಸಂರಕ್ಷಣೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಇದಕ್ಕಾಗಿ ಕೆಲಸ ಮಾಡುತ್ತಿರುವ ಮನರೇಗಾ ಯೋಜನೆ ಅಡಿಯಲ್ಲಿ ಹೆಚ್ಚು ವೇತನ ನೀಡಿ ಕಳೆದ 5 ವರ್ಷಗಳಲ್ಲೇ ಅತಿ ಹೆಚ್ಚು ಅಂದರೆ, 2015–16 ಮತ್ತು 2016–17ರಲ್ಲಿ 235 ಕೋಟಿ ಮಾನವ ದಿನಗಳ ಕೆಲಸ ನೀಡಲಾಗಿದೆ. ನರೇಗಾ ಆರಂಭವಾದಾಗಿನಿಂದ ಇಲ್ಲಿವರೆಗೆ ಈ ಎರಡು ವರ್ಷಗಳಲ್ಲೇ ಅತ್ಯಂತ ಹೆಚ್ಚು ವೆಚ್ಚ ಮಾಡಲಾಗಿದೆ. ಇದರ ಜತೆಗೆ ವೈಯಕ್ತಿಕ ಫಲಾನುಭವ ಯೋಜನೆಗಳಲ್ಲಿ ಕುರಿ ಹುಂಡಿ, ಕೋಳಿ ಫಾರಂ, ಹಸು ಕೊಟ್ಟಿಗೆ, ವಸತಿ ನಿರ್ಮಾಣಕ್ಕಾಗಿ 90/95 ದಿನಗಳ ಕೆಲಸ, 11 ಲಕ್ಷ ಕೃಷಿ ಹೊಂಡಗಳ ನಿರ್ಮಾಣ ಮಾಡುವ ಸಲುವಾಗಿ ಹಲವಾರು ಉದ್ಯೋಗಾವಕಾಶ ನೀಡಿ ಗ್ರಾಮೀಣ ಪ್ರದೇಶದ ಜನರ ಆದಾಯವನ್ನೂ ಹೆಚ್ಚಿಸಲು ನೆರವಾಗಿ ಅವರ ಜೀವನ ಸುಧಾರಣೆಗೆ ಒತ್ತು ನೀಡಲಾಗಿದೆ.

ಹೊಸ ನೀರು ಸಂರಕ್ಷಣಾ ಮಾರ್ಗದರ್ಶಿಗಳ ಅನ್ವಯ ಜಲ ಸಂಪನ್ಮೂಲ ಇಲಾಖೆ ಮತ್ತು ಭೂ ಸಂಪನ್ಮೂಲ ಇಲಾಖೆಯ ಜತೆಗೂಡಿ

ಸೇರಿಕೊಂಡು ನೀರಿನ ತೊಂದರೆ ಇರುವ 2264 ವಲಯಗಳನ್ನು ಗುರುತಿಸಿ, ಇಲ್ಲಿ ತಾಂತ್ರಿಕವಾಗಿ ಮತ್ತು ವೈಜ್ಞಾನಿಕವಾಗಿ ನೀರು ಸಂರಕ್ಷಣೆ ಮಾಡುವಂಥ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

**3. ಜನರ ಸಹಭಾಗಿತ್ವ** – ಹೊಣೆಗಾರಿಕೆಯನ್ನು ಉತ್ತಮಗೊಳಿಸುವ ಸಂಬಂಧ ಇಲಾಖೆ ನಾಗರಿಕ ಕೇಂದ್ರಿತ ಕಾರ್ಯಕ್ರಮಗಳತ್ತ ಗಮನಹರಿಸಿದೆ. ಇದಕ್ಕಾಗಿ ವಿಶೇಷವಾಗಿ ಘಟಕ ಹಾಗೂ ಪಂಚಾಯತ್ ಫಲಾನುಭವಿ ತಂಡಗಳನ್ನು ರಚಿಸಲಾಗಿದ್ದು, ಈ ಮೂಲಕ ಹಿಂದುಳಿದಿರುವ ವಲಯಗಳನ್ನು ಗುರುತಿಸಲಾಗಿದೆ.

ಎಸ್ಇಸಿಸಿಯ ದಾಖಲೆಗಳನ್ನು ಬಳಸಿಕೊಂಡು 2569 ಹಿಂದುಳಿದ ವಲಯಗಳಲ್ಲಿ ಪರಿಣಾಮಕಾರಿಯಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಪ್ರತಿ ಬಡಕುಟುಂಬಗಳ ಜತೆ ಸಂಪರ್ಕ ಸಾಧಿಸಿ, ಸೌಲಭ್ಯ ವಂಚಿತರ ಪ್ರತಿ ಮನೆಗಳ ಬಾಗಿಲು ಬಡಿದು ಅವರಿಗೆ ಸೌಲಭ್ಯ ಸಿಗುವಂತೆ ಮಾಡಲಾಗುತ್ತಿದೆ. ಇದಲ್ಲದೇ ನಾಗರಿಕ ಕೇಂದ್ರಿತ ಆ್ಯಪ್ ಮೇರಿ ಸಡಕ್ ಅನ್ನು ಬಳಸಿಕೊಂಡು ರಸ್ತೆ ಕುರಿತಂತೆ ಜನರಿಂದ ಪ್ರತಿಕ್ರಿಯೆ ಪಡೆಯಲಾಗುತ್ತಿದೆ. ಇದಲ್ಲದೇ ಆವಾಸ್ ಸಾಫ್ಟ್ ಎಂಬ ಆ್ಯಪ್ ಮೂಲಕ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ರೂಪಿತವಾದ ಗ್ರಾಮೀಣ ಮನೆಗಳ ಭಾವಚಿತ್ರಗಳನ್ನು ಹಾಕಲಾಗುತ್ತಿದೆ.

ಈ ಆ್ಯಪ್‌ಗಳು ಸರ್ಕಾರದ ಜತೆ ಕುಟುಂಬಗಳ ಸಂಪರ್ಕ ಹೆಚ್ಚಿಸಲು ನೆರವಾಗಿವೆ. ಇದರ ಜತೆಗೆ ಸಾರ್ವಜನಿಕ ಮಾಹಿತಿ ಆಂದೋಲನದ ಅಂಗವಾಗಿ ಇಲಾಖೆಯು ಗ್ರಾಮ ಸಮೃದ್ಧಿ ಮತ್ತು ಪಾಕ್ಷಿಕಾ ಸ್ವಚ್ಛತಾ ಕಾರ್ಯಕ್ರಮಗಳನ್ನು 2017ರ ಅಕ್ಟೋಬರ್ 1ರಿಂದ ಪ್ರತಿ ಗ್ರಾಮ ಪಂಚಾಯತಿಯಲ್ಲಿ ನಡೆಸುತ್ತಿದೆ. ಈ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳು ಸಾರ್ವಜನಿಕ ಪರಿಶೀಲನೆಗಾಗಿ ತಮ್ಮಲ್ಲಿ ಇರುವ ಎಲ್ಲ ದಾಖಲೆಗಳು, ಕಾರ್ಯಕ್ರಮಗಳು, ಫಲಾನುಭವಿಗಳ ಮಾಹಿತಿ, ಇತ್ಯಾದಿಗಳನ್ನು ಪ್ರದರ್ಶಿಸಲಿವೆ. ಇದಷ್ಟೇ ಅಲ್ಲ, ಸೆಲ್ ಫೋನ್ ಮೂಲಕ ಜನತಾ ಮಾಹಿತಿ ವ್ಯವಸ್ಥೆಯನ್ನೂ ಹಮ್ಮಿಕೊಳ್ಳಲಾಗಿದ್ದು, ಇದರ ಮೂಲಕ ಹಳ್ಳಿಯ ಪ್ರತಿ ಯೋಜನೆಯನ್ನು ಆ ಗ್ರಾಮದ ಆತ ಅಥವಾ ಆಕೆ ವಿಚಕ್ಷಣೆ ನಡೆಸಬಹುದಾಗಿದೆ.

**4. ಆಧಾರ್ ಬಳಸುವ ಮೂಲಕ ಐಟಿ / ಡಿಬಿಟಿಯಲ್ಲಿ ಪಾರದರ್ಶಕತೆ** – ಉಳಿದ ಇಲಾಖೆಗಳಿಗೆ ಹೋಲಿಕೆ ಮಾಡಿದರೆ, ಗ್ರಾಮೀಣಾಭಿವೃದ್ಧಿ ಇಲಾಖೆ ನಾಯಕನ ಸ್ಥಾನದಲ್ಲಿದ್ದು, ಫಲಾನುಭವಿಗಳ ಸಬ್ಸಿಡಿಯನ್ನು ಐಟಿ / ಡಿಬಿಟಿ ಬಳಸಿಕೊಂಡು ಅವರ ಬ್ಯಾಂಕ್ / ಅಂಚೆ ಖಾತೆಗಳಿಗೆ ನೇರವಾಗಿ ಹಾಕಲಾಗುತ್ತಿದೆ. ಇದಷ್ಟೇ ಅಲ್ಲ, ಮನರೇಗಾದಲ್ಲಿ ವೇತನವನ್ನು ಶೇ.98% ಹಾಗೂ ಪ್ರಧಾನಮಂತ್ರಿ ಆವಾಸ್ ಯೋಜನೆಯ ಶೇ.100 ರಷ್ಟು ಫಲಾನುಭವಿಗಳಿಗೆ ನೇರವಾಗಿ ಐಟಿ/ಡಿಬಿಟಿ ಬಳಸಿಕೊಂಡು ಹಣ ಹಾಕಲಾಗುತ್ತಿದೆ. ಮನರೇಗಾದ 5.9 ಕೋಟಿ ಕಾರ್ಮಿಕರು, ಅವರದ್ದೇ ಅನುಮತಿ ಮೇರೆಗೆ ಈಗಾಗಲೇ ಆಧಾರ್ ಸಂಪರ್ಕ ಹೊಂದಿರುವ ಬ್ಯಾಂಕ್ ಖಾತೆಗಳನ್ನು ಹೊಂದಿದ್ದಾರೆ. ಬ್ಯಾಂಕ್ ಅಥವಾ ಅಂಚೆ ಕಚೇರಿಗಳು ಸುಲಭವಾಗಿ ಸಿಗುವ ದೃಷ್ಟಿಯಿಂದ ಮೈಕ್ರೊ ಎಟಿಎಂಗಳನ್ನು ಜತೆಗೇ ಗ್ರಾಮಗಳಲ್ಲೇ ಹಾಕಿಸಲಾಗಿದೆ. ಈ ಮೂಲಕ ಭಾರಿ ಮಟ್ಟದಲ್ಲಿ ಡಿಜಿಟಲ್ ವಹಿವಾಟು ನಡೆಸಲು ಅನುವು ಮಾಡಿಕೊಡಲಾಗಿದೆ. ಈ ಮಾರ್ಗದಿಂದಾಗಿ ಕಾರ್ಮಿಕರು, ಪಿಂಚಣಿ



ಪಡೆಯುತ್ತಿರುವವರಿಗೆ ಸರಳ ಮಾರ್ಗ ಸಿಕ್ಕಿದೆ. ಮಹಿಳಾ ಸ್ವ ಸಹಾಯ ಸಂಘಗಳ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಬ್ಯಾಂಕುಗಳ ಪ್ರತಿನಿಧಿಗಳನ್ನಾಗಿ ಅಥವಾ ಬ್ಯಾಂಕಿನ ಸಖಿಯರನ್ನಾಗಿ ಮಾಡಲಾಗಿದೆ. ಇದುವರೆಗೆ ಈ ಪ್ರಯತ್ನಕ್ಕೆ ಉತ್ತಮ ಸ್ಪಂದನೆ ಸಿಕ್ಕಿದೆ.

**5. ಉಪಗ್ರಹ ತಾಂತ್ರಿಕತೆ ಮೂಲಕ ಪಾರದರ್ಶಕತೆ ಮತ್ತು ಪರಿಣಾಮಕಾರಿ ಪರಿಶೀಲನೆ–** ಉಪಗ್ರಹ ತಾಂತ್ರಿಕತೆಯಿಂದ ಪಾರದರ್ಶಕತೆ ಸಾಧಿಸಿ, ಮನರೇಗಾ ಮೂಲಕ 2 ಕೋಟಿ ಸ್ವತ್ತುಗಳನ್ನು ಭಾರಿ ಪರಿಶ್ರಮದಿಂದ ರಚಿಸಲಾಗಿದೆ. ಇದಷ್ಟೇ ಅಲ್ಲ ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಫಲಾನುಭವಿಗಳನ್ನು ಶೇ.100ರಷ್ಟು ಭೌಗೋಳಿಕ ಸಂಪರ್ಕದ ಮೂಲಕ ಗುರುತಿಸಲಾಗುತ್ತಿದೆ. ಪಿಎಂಜಿಎಸ್‌ವೈನಲ್ಲಿ ಉಪಗ್ರಹ ತಂತ್ರಜ್ಞಾನವನ್ನು ರಸ್ತೆಗಳ ನಿರ್ಮಾಣ, ನಿರ್ಮಾಣ ಮಾಡಬೇಕಿರುವ ರಸ್ತೆಯ ಅಳತೆ ಮತ್ತು ಜನವಸತಿಗಳ ಜತೆಗೆ ಸಂಪರ್ಕ ಬೆಸೆಯಲು ಬಳಸಿಕೊಳ್ಳಲಾಗುತ್ತಿದೆ. ಇದರ ಜತೆಗೆ ಮನರೆಗಾ ಯೋಜನೆಯ ಕಾರ್ಮಿಕರಿಂದ ಪಿಎಂಜಿಎಸ್‌ವೈ ರಸ್ತೆಗಳ ಅಕ್ಕ – ಪಕ್ಕ ಮರಗಳನ್ನು ಬೆಳೆಸಲಾಗಿದೆಯೇ ಎಂಬ ಬಗ್ಗೆ ಪರಿಶೀಲನೆಯನ್ನೂ ನಡೆಸಲಾಗುತ್ತಿದೆ. ಅಲ್ಲದೆ ಈ ತಾಂತ್ರಿಕತೆಯನ್ನು ಎಲ್ಲೆಡೆ ವಿಸ್ತರಿಸುವ ಸವಾಲು ಎದುರಾಗಿದ್ದು, ಮನರೆಗಾದ ಸ್ವತ್ತುಗಳನ್ನು ಭೂ ಸಂಪರ್ಕಕ್ಕೆ ಜೋಡಿಸಿ, ಮುಂದೆ ಭೂತ ಮತ್ತು ವರ್ತಮಾನ ರಸ್ತೆಗಳನ್ನು ಪರಿಶೀಲಿಸಲು ಅವಕಾಶ ಕಲ್ಪಿಸಬೇಕಾಗಿದೆ.

**6. ಮಹಿಳಾ ಸ್ವಸಹಾಯ ಸಂಘಗಳಿಗೆ ಬ್ಯಾಂಕ್ ಸಾಲದ ಬಲ** – ದೀನ್ ದಯಾಳ್ ಅಂತ್ಯೋದಯ ಯೋಜನೆ– ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ(ಡಿಎವೈ–ಎನ್ಆರ್ಎಲ್ಎಂ) ಗಳು ಸಮುದಾಯದ ಒಗ್ಗೂಡಿಸುವ ಮತ್ತು ಗುಂಪುಗಳ ರಚನೆ ಮಾಡುವ ಮೂಲಕ ಸಾಮಾಜಿಕ ಬಂಡವಾಳವನ್ನು ಕ್ರೋಢೀಕರಿಸಿವೆ. ಇದರಿಂದಾಗಿ ಆರ್ಥಿಕ ಚಟುವಟಿಕೆ ಅಭಿವೃದ್ಧಿಯಾಗಿ ಜೀವನೋಪಾಯ ವೈವಿಧ್ಯತೆಗೆ ಒತ್ತು ಸಿಕ್ಕಿದೆ.

ಇದರ ಜತೆಗೆ ಬಡತನ ಪ್ರಮಾಣವನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ ವೈವಿಧ್ಯತೆಯನ್ನೊಳಗೊಂಡ ಆರ್ಥಿಕ ಚಟುವಟಿಕೆಗಳಿಗಾಗಿ ಹಣಕಾಸು ಸಂಸ್ಥೆಗಳಿಂದ ಕಡಿಮೆ ದರದಲ್ಲಿ ಬಡ್ಡಿಕೊಡಿಸುವ ಸಂಬಂಧ ಬ್ಯಾಂಕ್‌ಗಳೊಂದಿಗೆ ಸಂಪರ್ಕ ಸಾಧಿಸುವ ಕೆಲಸಗಳಿಗೆ ಒತ್ತು ನೀಡಲಾಗಿದೆ. ಈಗಾಗಲೇ 43000 ಕೋಟಿ ರೂ.ಗಳನ್ನು ಬ್ಯಾಂಕುಗಳ ಜತೆ ಜೋಡಿಸಲಾಗಿದ್ದು, ಈ ಮೂಲಕ ವಾರ್ಷಿಕ ಗುರು ಸಾಧಿಸಲಾಗಿದೆ. 2018–19ರಲ್ಲಿ ಈ ಪ್ರಮಾಣ 60,000 ಕೋಟಿ ರೂ.ಗಳಿಗೆ ಮೀರಲಿದೆ ಎಂಬ ವಿಶ್ವಾಸವಿದೆ. ಕೌಶಲ್ಯ ಅಭಿವೃದ್ಧಿ ಜತೆ ಸಂಪರ್ಕ ಸಾಧಿಸಿದ್ದರಿಂದ ಮಹಿಳಾ ಸ್ವಸಹಾಯ ಸಂಘಗಳು, ಕುಟುಂಬಗಳೂ ಬ್ಯಾಂಕ್‌ಗಳ ಸಾಲವನ್ನು ಉತ್ತಮವಾಗಿ ಬಳಕೆ ಮಾಡಲು ಶುರು ಮಾಡಿವೆ.

7. ಸಂಪರ್ಕಕ್ಕೆ ವೇಗ – ಗ್ರಾಮೀಣ ಭಾಗದಲ್ಲಿನ ಜನರ ಉತ್ತಮ ಜೀವನೋಪಾಯಕ್ಕೆ ರಸ್ತೆಗಳ ಸಂಪರ್ಕವೇ ಸುಧಾರಣಾ ಹಾದಿಯಾಗಿದೆ. ಇದು ಮಾರುಕಟ್ಟೆಗಳನ್ನು ತಲುಪಲು ಸಹಾಯ ಮಾಡುವುದಲ್ಲದೇ ಕಾರ್ಮಿಕರು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆರಳಲು ಅನುವು ಮಾಡಿಕೊಡುತ್ತದೆ. ಇದರಿಂದಾಗಿಯೇ 2011–14ರ ಅವಧಿಯಲ್ಲಿ ಪಿಎಂಜಿಎಸ್‌ವೈ ರಸ್ತೆಗಳ ನಿರ್ಮಾಣ ದಿನಕ್ಕೆ 70 ಕಿ.ಮೀ. ಆಗುತ್ತಿದ್ದರೆ, 2016–17ರ ಅವಧಿಯಲ್ಲಿ ದಿನಕ್ಕೆ 130 ಕಿ.ಮೀ. ಮಾಡಲಾಗಿದೆ. ಶೇ.80 ರಷ್ಟು ಅರ್ಹ ಜನ ವಸತಿ ಪ್ರದೇಶಗಳಿಗೆ ಈಗಾಗಲೇ ಸರ್ವಋತು ರಸ್ತೆ ಸಂಪರ್ಕ ಸಾಧಿಸಲಾಗಿದೆ. 2019ರ ಮಾರ್ಚ್ ವೇಳೆಗೆ ಈ ಪ್ರಮಾಣವನ್ನು ಶೇ.100 ಕ್ಕೆ ತೆಗೆದುಕೊಂಡು ಹೋಗುವ ಗುರಿ ಹೊಂದಲಾಗಿದೆ. ರಸ್ತೆ ನಿರ್ಮಾಣಕ್ಕಾಗಿ ಹಸಿರು ಮತ್ತು ನವ ನವೀನ ತಂತ್ರಜ್ಞಾನಗಳಾದ ಪ್ಲಾಸ್ಟಿಕ್ ತ್ಯಾಜ್ಯ, ಹಾರುವ ಬೂದಿ, ಜಿಯೊ ಜವಳಿ, ಸೆಲ್ ತುಂಬಿದ ಕಾಂಕ್ರೀಟ್, ಕೋಲ್ಡ್ ಮಿಕ್ಸ್ ಅನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಲಾಗುತ್ತಿದೆ. ಇವುಗಳ ಬಳಕೆಯಿಂದ ಪರಿಸರಾತ್ಮಕವಾಗಿಯೂ ಅನುಕೂಲವಾಗಿದೆ. ಮಧ್ಯ ಪ್ರದೇಶದಲ್ಲಿ ಯಶಸ್ವಿಯಾಗಿ ಈ ರಸ್ತೆಗಳ ನಿರ್ವಹಣೆ ಮಾಡಲಾಗುತ್ತಿದ್ದು, ಉತ್ತರಾಖಂಡದಲ್ಲಿ ಸಮುದಾಯಗಳಿಂದಲೇ ನಿರ್ವಹಣೆ ಮಾಡಲಾಗುತ್ತಿದೆ. ಇದನ್ನು ಇತರೆ ರಾಜ್ಯಗಳಿಗೆ ವಿಸ್ತರಿಸುವ ಗುರಿ ಹೊಂದಲಾಗಿದೆ.

**8. ಅಗತ್ಯಕ್ಕನುಗುಣವಾಗಿ ಕೌಶಲ್ಯವೃದ್ಧಿ** – ಉದ್ಯೋಗಕ್ಕಾಗಿ ಕೌಶಲ್ಯ ಮತ್ತು ಸ್ವಯಂ ಉದ್ಯೋಗ ವ್ಯವಸ್ಥೆಯು ಗ್ರಾಮೀಣ ಪ್ರದೇಶದಲ್ಲಿರುವ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಅತ್ಯಗತ್ಯವಾಗಿ ಬೇಕಾಗಿದೆ. ಗ್ರಾಮೀಣ ಭಾಗದ ಕೈಗಾರಿಕೆಗಳಾದ ಚಿಲ್ಲರೆ ವ್ಯಾಪಾರ, ಕೃಷಿ ಉತ್ಪಾದನೆ ಸಂಸ್ಥೆಗಳು, ಸಾಂಪ್ರದಾಯಿಕ ಉದ್ಯೋಗ ಕೇಂದ್ರಗಳು, ಗ್ರಾಮೀಣ ಸಾರಿಗೆ ವ್ಯವಸ್ಥೆ, ಕೈಮಗ್ಗ ಮತ್ತು ಕುಸುರಿ, ಕಲೆಗಳಿಗೆ ಸೇರಿದ್ದಾಗಿದ್ದು, ಇವುಗಳಿಗೆ ಯೋಜಿತವಾಗಿ ಬೆಂಬಲ ನೀಡುವ ಮೂಲಕ ಸಮ್ಮಿಳಿತಗೊಳಿಸಬಹುದಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯು ಕೃಷಿ, ಪಶುಸಂಗೋಪನೆ, ಎಂಎಸ್‌ಎಂಇ, ಕೆಪಿಐಸಿ, ಜವಳಿ ಇಲಾಖೆಗಳ ಪ್ರಮುಖ ಸಾಮರ್ಥ್ಯ ಮತ್ತು ಕಾರ್ಯಕ್ರಮಗಳನ್ನು ಪ್ರಯೋಗಿಸಲು ಯತ್ನಿಸುತ್ತಿದೆ. ಈ ಮೂಲಕ ವಿಪುಲವಾಗಿ



ಕೃಷಿ ಮತ್ತು ಕೃಷಿಯೇತರ ಉದ್ಯೋಗಗಳ ಅವಕಾಶ ಸೃಷ್ಟಿಸಬಹುದಾಗಿದೆ. ಸದ್ಯ ಅಕುಶಲ ಕಾರ್ಮಿಕರು ಮತ್ತು ಗ್ರಾಮೀಣ ಪ್ರದೇಶದ ಕಲ್ಲುಕುಟಿಗರ ಹೆಚ್ಚುವರಿ ಕೆಲಸದ ಸಮಯವನ್ನು ಕಡಿಮೆ ಮಾಡುವ ಸಲುವಾಗಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಇಂಥ ಕೌಶಲ್ಯ ರಹಿತ ಕೆಲಸ ಮಾಡುವವರ ಪ್ರಮಾಣ ದೇಶದಲ್ಲಿ ಭಾರಿ ಸಂಖ್ಯೆಯಲ್ಲೇ ಅಂದರೆ 5 ಕೋಟಿ ಇದೆ. ಸಾಮಾನ್ಯವಾಗಿ ಇಂಥ ಕಾರ್ಯಕ್ರಮಗಳನ್ನುವಲಯ ಕೌಶಲ್ಯ ಮಂಡಳಿಗಳು ರೂಪಿಸುತ್ತವೆ, ಇವು ಹಲವಾರು ರೀತಿಯ ಸಹಾಯ ಮಾಡಿ ಪ್ರಮಾಣಪತ್ರವನ್ನೂ ನೀಡುತ್ತವೆ.

**9. ಸುಧಾರಣೆಗಾಗಿ ನವೀನತೆಗೆ ಪ್ರೋತ್ಸಾಹ** – ಗ್ರಾಮೀಣಾಭಿವೃದ್ಧಿ ಸಚಿವಾಲಯವು ಸ್ಥಳೀಯ ಸಮುದಾಯ ಮತ್ತು ರಾಜ್ಯ ಸರ್ಕಾರಗಳ ಸಮಸ್ಯೆಗಳನ್ನು ನವೀನತೆಯ ಮಾರ್ಗದಲ್ಲಿ ಬಗೆಹರಿಸಲು ಪ್ರಯತ್ನಿಸುತ್ತಿದೆ. ಘನ ಸಂಪನ್ಮೂಲ ನಿರ್ವಹಣಾ ಕಾರ್ಯಕ್ರಮದಡಿ ತಮಿಳುನಾಡಿನ ಶೇ.80 ರಷ್ಟು ಗ್ರಾಮಗಳಲ್ಲಿ, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ಹಾಗೂ ಈಗ ಬಿಹಾರ ಮತ್ತು ಛತ್ತೀಸ್‌ಗಢಗಳ ಶೇ.80 ರಷ್ಟು ಗ್ರಾಮಗಳಲ್ಲಿ ದ್ರವ ಸಂಪನ್ಮೂಲ ನಿರ್ವಹಣಾ ಕಾರ್ಯಕ್ರಮ ಸಾಧಿಸಲಾಗಿದೆ. ಇದಕ್ಕಾಗಿ ಮನರೇಗಾ ಮತ್ತು ಡಿಎವೈ ಎನ್‌ಆರ್‌ಎಲ್‌ಎಂ ಸಮ್ಮಿಳಿತದಲ್ಲಿ ರೂಪಿಸಲಾಗಿದ್ದು, ನವೀನ ಆವಿಷ್ಕಾರಗಳಿ,. ಗೆ ಇದು ಅತ್ಯುತ್ತಮ ಉದಾಹರಣೆಯಾಗಿದೆ. ಆಜೀವಿಕಾ ಗ್ರಾಮೀಣ ಎಕ್ಸ್‌ಪ್ರೆಸ್ ಗ್ರಾಮೀಣ ಸಾರಿಗೆ ಯೋಜನೆ, ಜಲ ಸಂರಕ್ಷಣಾ ಮಿಷನ್ ಮತ್ತು ಗ್ರಾಮೀಣ ರಸ್ತೆ ಯೋಜನೆ, ಗ್ರಾಮೀಣ ಭಾಗಕ್ಕೆ ಹೊಂದಿಕೊಳ್ಳುವಂಥ ಮನೆಗಳನ್ನು ತಾಂತ್ರಿಕವಾಗಿ ನಿರ್ಮಿಸುವ ಸಲುವಾಗಿ ವಸತಿ ಮಾದರಿಯ ಅಧ್ಯಯನ, ಪೂರ್ಣ ಉದ್ಯೋಗದ ಜೀವನೋಪಾಯ ಯೋಜನೆಗಳನ್ನು ಮನರೇಗಾ ಯೋಜನೆಯಡಿಯಲ್ಲೇ ರೂಪಿಸಿ ಇದರಲ್ಲಿ ಕೆಲಸ ಮಾಡುವ ಕಾರ್ಮಿಕರ ಕೌಶಲ್ಯ ವೃದ್ಧಿ ಮಾಡಲಾಗುತ್ತಿದೆ. ಈ ತಂತ್ರಗಳನ್ನು ಯೋಜನೆಯ ಭಾಗವಾಗಿ ಬಳಸಿಕೊಳ್ಳಲಾಗುತ್ತಿದೆ.

**10. ಸಾಕ್ಷ್ಯ ಆಧರಿತ ವಿಚಕ್ಷಣೆ**– ಬೃಹತ್ ಮಾದರಿಯ ಕಾರ್ಯಕ್ರಮಗಳ ಪರಿಣಾಮಕಾರಿ ಜಾರಿಗೆ ವಿಚಕ್ಷಣೆ ಮತ್ತು ಮೌಲ್ಯಮಾಪನ ಅತ್ಯಗತ್ಯ. ಇದರ ಜತೆಯಲ್ಲೇ ಹೆಚ್ಚು ಸದೃಢ ಮತ್ತು ಪಾರದರ್ಶಕ ವಹಿವಾಟಿನ ಮೂಲವಾದ ಎಂಐಎಸ್, ಸ್ವತ್ತುಗಳ ಗುಣಮಟ್ಟ ಖಚಿತತೆಗಾಗಿ ಭೌಗೋಳಿಕ ಸಂಪರ್ಕದ ಬಳಕೆ, ಪ್ರತಿ ವರ್ಷ 600 ಜಿಲ್ಲೆಗಳಿಗೆ ಭೇಟಿ ಮಾಡಿ, ಸಂಸ್ಥೆಗಳಿಂದ ಕ್ರಮಬದ್ಧವಾಗಿ ಪರಿಶೀಲನೆ, ಪ್ರತಿ ವರ್ಷ ಎರಡು ಬಾರಿ ರಾಜ್ಯಗಳ ಸಾಮಾನ್ಯ ಪ್ರಗತಿ ಪರಿಶೀಲನೆ ನಡೆಸುವ ಮೂಲಕ ಉದ್ದೇಶಿತ ಕಾರ್ಯಕ್ರಮ ಉತ್ತಮವಾಗಿ ಜಾರಿಯಾಗಲು ಮತ್ತು ಜಾರಿಗಾಗಿ ಸಹಾಯ ಮಾಡುವ ಕೆಲಸ ಮಾಡಲಾಗುತ್ತಿದೆ. ಇದರ ಜತೆಯಲ್ಲಿ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳ ಮೌಲ್ಯಮಾಪನ, ಅಂದರೆ ಇತ್ತೀಚೆಗಷ್ಟೇ ಡಿಎವೈ–ಎನ್‌ಆರ್‌ಎಲ್‌ಎಂನ ಬಗ್ಗೆ ಮೌಲ್ಯಮಾಪನ ನಡೆಸಿ ಪ್ರಕಟಿಸಿದ ಐಆರ್‌ಎಂಎ ವರದಿಯನ್ನು ಬಳಸಿಕೊಳ್ಳಲಾಗುತ್ತದೆ. ಬೇಕಾದ ಅರಿವನ್ನು ಬಹುವೈವಿಧ್ಯತೆಯಲ್ಲಿ ನೀಡಿ, ತಾಂತ್ರಿಕತೆಯನ್ನು ಬಳಸಿಕೊಂಡು ಸಚಿವಾಲಯವು ಉನ್ನತ ಮಟ್ಟದ ತಜ್ಞರ ಗುಂಪುಗಳನ್ನು ರಚಿಸಿದೆ. ಮಾನವ ಸಂಪನ್ಮೂಲದ ಬಳಕೆಯ ಫಲಿತಾಂಶ, ಮಾಹಿತಿ ತಂತ್ರಜ್ಞಾನದ ಬಳಕೆ ಮತ್ತು ಸವಾಲುಗಳು, ಆಂತರಿಕ ಲೆಕ್ಕಪತ್ರ ಪರಿಶೋಧನೆ, ಮಾರುಕಟ್ಟೆ ಜೋಡಣೆ ಮತ್ತು ಮೌಲ್ಯಮಾಪನ ಸಂಪರ್ಕಕ್ಕಾಗಿ ಸರ್ಕಾರದ ಹೊರಗಿರುವ ಅತ್ಯುತ್ತಮ ತಜ್ಞರನ್ನು ಬಳಸಿಕೊಂಡು ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲಾಗುತ್ತಿದೆ.

**11. ಸಮ್ಮಿಳಿತದ ಮಾದರಿಯಲ್ಲಿ ಅನುಷ್ಠಾನ** – ಬಡತನ ಮುಕ್ತ ಎಂಬುದು ಸೌಲಭ್ಯ ವಂಚಿತ ಕುಟುಂಬಗಳಿಗೆ ಸಾಮಾಜಿಕ ಅವಕಾಶಗಳನ್ನು ಕೊಟ್ಟು ಮೇಲೆತ್ತುವುದಾಗಿದೆ. ಇದು ಅಂತ್ಯೋದಯ ಮಿಷನ್‌ನ ಸಮ್ಮಿಳಿತ, ಬಹು ಆಯಾಮದ ಪ್ರಯತ್ನವಾಗಿದೆ. ❑

# ಜಾತೀಯತೆ ಮುಕ್ತ ಭಾರತದ ನಿರ್ಮಾಣ

* ಅಮರ್‌ಜೀತ್ ಎಸ್. ನಾರಂಗ್



**ದೇಶದ ಎಲ್ಲಾ ಪ್ರಜೆಗಳು ವಿಚಾರವಂತ ವ್ಯಕ್ತಿಗಳಾಗಿರುವುದು ಪ್ರಜಾಪ್ರಭುತ್ವದ ಅರ್ಥಪೂರ್ಣ ಕಾರ್ಯನಿರ್ವಹಣೆಗೆ ಮುಖ್ಯವಾಗಿದೆ. ಇಂತಹ ವ್ಯಕ್ತಿಗಳ ಸ್ವಯಂ ಯೋಗ್ಯತಾ ನಿರ್ಣಯವು ಆತನ/ಆಕೆಯ ವೈಯಕ್ತಿಕ ಯೋಗ್ಯತೆಯನ್ನು ಆಧರಿಸಿರಬೇಕೇ ಹೊರತು, ಆತ ಅಥವಾ ಆಕೆ ಸೇರಿರುವ ಯಾವುದೇ ಸಾಮಾಜಿಕ ಸಮುದಾಯದ ಯೋಗ್ಯತೆಯನ್ನು ಆಧರಿಸಿರಬಾರದು.**

**ಜಾ**ತೀಯತೆಯು, ಭಾರತದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಜತೆ ಜತೆಗೆ ದೇಶದ ಏಕತೆಯನ್ನು ಬಾಧಿಸುತ್ತಿರುವ ಅತಿದೊಡ್ಡ ಸಾಮಾಜಿಕ ಪಿಡುಗುಗಳಲ್ಲಿ ಒಂದಾಗಿದೆ. ನಾವು ಐಕ್ಯ ಭಾರತದ ಬಗ್ಗೆ ಆಲೋಚಿಸುತ್ತಿದ್ದರೆ, ಈ ಜಾತೀಯತೆಯು ಪ್ರಬಲ ವಿಭಜನೆಯ ಶಕ್ತಿಯಾಗಿ ಕೆಲಸ ಮಾಡುತ್ತಾ ಸಾಮಾಜಿಕ ಸಂಘರ್ಷಗಳು, ಸುಸ್ಥಿರತೆ, ಶಾಂತಿ ಮತ್ತು ಸೌಹಾರ್ದತೆಯನ್ನು ಹಾಳುಗೆಡುವುತ್ತಿದೆ. ಅಷ್ಟೇ ಅಲ್ಲ, ಚುನಾವಣಾ ಫಲಿತಾಂಶಗಳು, ಶಾಸಕಾಂಗ ಮತ್ತು ಕಾರ್ಯಾಂಗಗಳ ನಿರ್ಧಾರಗಳ ಮೇಲೂ ಪ್ರಭಾವಶಾಲಿ ಪರಿಣಾಮ ಬೀರುತ್ತಿದೆ. ಈ ಸಮಸ್ಯೆಯ ತೀವ್ರತೆ ಯಾವ ಮಟ್ಟಕ್ಕೆ ತಲುಪಿದೆಯೆಂದರೆ, ಪರಂಪರಾಗತವಾಗಿ ಜಾತೀಯತೆಯ ನಂಟು ಹೊಂದಿರುವ ಕೇವಲ ಹಿಂದೂಗಳು ಮಾತ್ರವಲ್ಲದೆ, ಸಿಖ್ಖರು, ಮುಸ್ಲಿಮರು, ಜೈನರು, ಬೌದ್ಧರು ಕ್ರೈಸ್ತರು ಕೂಡಾ ಜಾತೀಯತೆಯ ಕುರುಹುಗಳನ್ನು ಹೊಂದಿದ್ದಾರೆ. ಬಲಿಷ್ಠ, ಸ್ವಾವಲಂಬಿ, ಬಡತನ ಮುಕ್ತ, ಸಾಕ್ಷರ ಮತ್ತು ಆರೋಗ್ಯವಂತ ಭಾರತ ನಿರ್ಮಾಣ ಮಾಡಲು ಮತ್ತು ವಿಶ್ವ ಸಮುದಾಯದಲ್ಲಿ ಭಾರತಕ್ಕೆ ಗೌರವನೀಯ ಸ್ಥಾನಮಾನ ಗಳಿಸಿಕೊಡಲು ಜಾತೀಯತೆಯನ್ನು ಹೋಗಲಾಡಿಸುವುದು ಸದ್ಯದ ಅತ್ಯಗತ್ಯ ಅಂಶಗಳಲ್ಲಿ ಒಂದೆನಿಸಿದೆ. ದೇಶದ ಜನನಾಯಕರು, ನೀತಿ ನಿರೂಪಕರು, ವಿಮರ್ಶಕರು ಮತ್ತು ಅರ್ಥಪೂರ್ಣ ರಾಜಕೀಯ ನಾಯಕರಲ್ಲೂ ಈ ವಿಷಯ ಒಪ್ಪಿತವಾದಂಥದ್ದಾಗಿದೆ. ಇದಕ್ಕಾಗಿ ಮೊದಲು ನಾವು ಜಾತೀಯತೆಯ ಬಗ್ಗೆ ಕೆಲವೊಂದು ಅಪಾರ್ಥಗಳು, ಜಾತೀಯತೆಯ ಉದಯಕ್ಕೆ ಕಾರಣ ಮತ್ತು ಜಾತೀಯತೆಯ ಬೆಳವಣಿಗೆ ಹಾಗೂ ಪ್ರಸ್ತುತ ಅದರ ಪಾತ್ರವನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯವಾಗಿದೆ.

### ಜಾತಿ ವ್ಯವಸ್ಥೆ

ಜಾತಿ ವ್ಯವಸ್ಥೆಯ ವ್ಯಾಖ್ಯಾನ, ಅದರ ಹುಟ್ಟು ಮತ್ತು ವಿವಿಧ ಕಾಲಘಟ್ಟಗಳಲ್ಲಿ ಅದರ ಪಾತ್ರದ ಬಗ್ಗೆ ವಿಮರ್ಶಕರು ಮತ್ತು ಪರಿಣಿತರ ನಡುವೆ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಸ್ಥೂಲವಾಗಿ ಹೇಳುವುದಾದರೆ, ಇದು ಸಾಂಪ್ರದಾಯಿಕ ವೃತ್ತಿ ನಿರ್ದಿಷ್ಟವಾದ ಒಂದು ಬಗೆಯ ಸಾಮಾಜಿಕ ಶ್ರೇಣೀಕರಣದ ವ್ಯವಸ್ಥೆಯಾಗಿದೆ. ಜಾತಿ ವ್ಯವಸ್ಥೆಯನ್ನು 'ವರ್ಣ'ವ್ಯವಸ್ಥೆಯೊಂದಿಗೆ ನಂಟು ಮಾಡಲಾಗುತ್ತದೆಯಾದರೂ, ಇದರ ಮೂಲವು ಪ್ರಾಚೀನ ಧರ್ಮಗ್ರಂಥಗಳಲ್ಲಿ ಕಾಣಸಿಗುವುದಿಲ್ಲ. ಆರ್ಥಿಕ, ರಾಜಕೀಯ ಮತ್ತು ಲೌಕಿಕ ವಿಕಸನದ ಹಾದಿಯಲ್ಲಿ ಸುಮಾರು 2000 ವರ್ಷಗಳ ಹಿಂದೆ ಜಾತೀಯತೆಯ ಮೂಲವನ್ನು ಸಂಶೋಧಕರು ಗುರುತಿಸಿದ್ದಾರೆ. ಇದು ಭಾರತೀಯ ಜನಜೀವನದಲ್ಲಿ ಎಂದೂ ನಿಶ್ಚಿತ ಅಂಶವಾಗಿ ಉಳಿಯದೆ, ಸಾಮಾಜಿಕ-ರಾಜಕೀಯ ಮತ್ತು ಐತಿಹಾಸಿಕ ವಾತಾವರಣಗಳಲ್ಲಿ ವಿಕಸನವಾಗುತ್ತಾ ಬಂದಿದೆ. ಬ್ರಿಟಿಷರ ಆಡಳಿತಕ್ಕೂ ಮುನ್ನ ಜಾತಿ ಸಂಲಗ್ನ ಸಡಿಲ ಮತ್ತು ಅಸ್ಥಿರವಾಗಿತ್ತು.

### ವಸಾಹುತಶಾಹಿ ಅವಧಿಯಲ್ಲಿ ಜಾತಿ

ಸುದೀರ್ಘ ಅವಧಿಯಿಂದಲೂ ಭಾರತದಲ್ಲಿ ಜಾತೀಯತೆಯು ಸಾಮಾಜಿಕ ವಾಸ್ತವ ಎನಿಸಿದ್ದರೂ, ಬ್ರಿಟಿಷರ ವಸಾಹುತಶಾಹಿ ಆಡಳಿತದಲ್ಲಿ, ಜಾತಿಯನ್ನು ಭಾರತೀಯ ಸಮಾಜದ ಸಾಂಸ್ಥಿಕ

* ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ, ದೆಹಲಿ E-mail : asnarang7@hotmail.com



ಅಡಿಗಲ್ಲಾಗಿ ಪರಿಗಣಿಸಲಾಯಿತು. 1871ರಲ್ಲಿ ಮೊಟ್ಟ ಮೊದಲ ಬಾರಿಗೆ ಆರಂಭಗೊಂಡ ದಶವಾರ್ಷಿಕ ಜನಗಣತಿಯು ಮುಂದೆ ಜಾತಿ ವ್ಯವಸ್ಥೆಯ ಬಗ್ಗೆ ಮಾಹಿತಿ ಸಂಗ್ರಹಕ್ಕೆ ಮತ್ತು ಜಾತಿ ವ್ಯವಸ್ಥೆಯ ಶ್ರೇಣೀಕರಣಕ್ಕೆ ಮುಖ್ಯ ಸಾಧನವಾಗಿ ಮಾರ್ಪಟ್ಟಿತು. ಜನಗಣತಿಯಲ್ಲಿನ ಅಂಕಿ–ಸಂಖ್ಯೆಗಳ ಆಧಾರದ ಮೇಲೆ ಜಾತಿ ಮತ್ತು ಉಪಜಾತಿಗಳ ಮಾಪನವು, ಅದುವರೆಗೂ ಅರಿಯದ ಹೊಸ ಜಾತಿಗಳ ಗುರುತಿಸುವಿಕೆ ನಿಗದಿಗೆ ನೆರವಾಯಿತು ಎನ್ನುತ್ತಾರೆ ನೀರಜ್ ಜಾಯಲ್ (2006). ಮುಖ್ಯವಾಗಿ 1901 ಮತ್ತು 1911ರ ಜನಗಣತಿಯಲ್ಲಿ ಜನಸಂಖ್ಯೆಯನ್ನು ಕಠಿಣ ವರ್ಗಗಳಾಗಿ ವಿಂಗಡಿಸಿದ ಬಳಿಕ ಜಾತಿ ಗುರುತಿಸುವಿಕೆಯು ಮತ್ತಷ್ಟು ಬಲಿಷ್ಠವಾಯಿತು. ಬ್ರಿಟಿಷ್ ಆಡಳಿತಗಾರರು ಜಾತಿ ವ್ಯವಸ್ಥೆಯನ್ನು ಒಡೆದು ಆಳುವ ನೀತಿಗೆ ಒಂದು ಸಾಧನವಾಗಿ ಬಳಸಿಕೊಂಡರು. ಅವರು ಜಾತಿ ಜಾಗೃತಿಯನ್ನು ಕಠಿಣವಾಗಿ ಜಾರಿಗೊಳಿಸಿದರು. ಸರ್ಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಗೂ ಜಾತಿಯನ್ನು ಅನ್ವಯಿಸುವ ಮೂಲಕ ಅದನ್ನು ಸಾಂಸ್ಥೀಕರಣಗೊಳಿಸಿದರು. ಪೊಲೀಸ್, ಸೇನೆ ಸೇರಿದಂತೆ ಕೆಲವೊಂದು ನಿರ್ದಿಷ್ಟ ಉದ್ಯೋಗಗಳಿಗೆ ಕೆಲವೊಂದು ಜಾತಿಯವರಿಗೆ ವಿಶೇಷ ಆದ್ಯತೆ ನೀಡಲಾಗುತ್ತಿತ್ತು, ಕೆಲವರಿಗೆ ಅಪರಾಧಿಗಳೆಂಬಂತೆ ಹಣೆಪಟ್ಟಿ ಕಟ್ಟಲಾಗಿತ್ತು. ಜಾತಿಯನ್ನು ಆಧರಿಸಿ ಕೆಲವೊಂದು ನೀತಿಗಳನ್ನು ರೂಪಿಸಲಾಗುತ್ತಿತ್ತು ಮತ್ತು ಆ ನಿರ್ದಿಷ್ಟ ಜಾತಿಯವರಿಗೆ ಆಡಳಿತ ಅಥವಾ ಸರ್ಕಾರದ ಆಪ್ತ ಸ್ಥಾನಮಾನ ನೀಡಲಾಗುತ್ತಿತ್ತು. ಇದರ ಕ್ಷಿಪ್ರ ಪರಿಣಾಮವೆಂಬಂತೆ, ಜಾತಿ ಕಲ್ಪನೆ ಮತ್ತಷ್ಟು ಹೆಚ್ಚಾಗಿ, ಜಾತಿಗಳ ನಡುವೆ ಆಂತರಿಕ ಸ್ಪರ್ಧೆ ಹೆಚ್ಚಾಯಿತು. ಏಕೆಂದರೆ, ಪ್ರಾದೇಶಿಕ ಇತಿಮಿತಿಗಳನ್ನು ದಾಟಲು ಹಾಗೂ ಜಾತಿ ವಿಚಾರವನ್ನು ಬಳಸಿ ಬ್ರಿಟಿಷ್ ಸರ್ಕಾರದಿಂದ ಕೆಲವೊಂದು ವಿನಾಯಿತಿಗಳನ್ನು ಪಡೆಯಲು ಜನರಿಗೆ ಅವಕಾಶ ದೊರೆಯಿತು ಎನ್ನುವುದು ಶ್ರೀನಿವಾಸ್ ಅವರ ಅಭಿಮತ. ಜಾಯಲ್ ಅವರು ಬರೆಯುವಂತೆ, ಜಾತಿ ವ್ಯವಸ್ಥೆಯ ನಿರ್ಣಯಕಾರರು ಆಚರಣೆಗಳ ಭಾಗವಾಗಿ ಉಳಿಯದೆ, ರಾಜಕೀಯ ಮತ್ತು ರಾಷ್ಟ್ರೀಯ ಚಳವಳಿಯ ಭಾಗವಾದರು. ರಾಷ್ಟ್ರೀಯ ನಾಯಕರು ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡಿ ಸಾಮಾಜಿಕ ನ್ಯಾಯ ವಿಚಾರಗಳನ್ನು ಅಂತರ್ಗತಗೊಳಿಸಲು ಪ್ರಯತ್ನಿಸಿದರಾದರೂ, ಅಷ್ಟಾಗಿ ಯಶಸ್ಸು ಕಾಣಲಿಲ್ಲ.

### ಸ್ವತಂತ್ರ ಭಾರತದಲ್ಲಿ ಜಾತಿ

ವಸಾಹುತುಶಾಹಿ ಆಡಳಿತದ ಅವಧಿಯಲ್ಲಿ ಜಾತಿವರ್ಗಗಳು ಮತ್ತಷ್ಟು ಜಾಗೃತ ಮತ್ತು ಸಂಘಟಿತವಾದವು.ಸ್ವಾತಂತ್ರ್ಯದ ಸಮಯದಲ್ಲಿ ಇವರಲ್ಲಿ ಕೆಲವರು ತಮ್ಮ ಕಳವಳ ಮತ್ತು ಬೇಡಿಕೆಗಳನ್ನೂ ಮುಂದಿಟ್ಟರು.ಸಂವಿಧಾನದ ರಚನಾಕಾರರು ಸಮಾನತಾವಾದಿ, ನ್ಯಾಯಸಮ್ಮತ, ಭ್ರಾತೃ ಭಾವವನ್ನೊಳಗೊಂಡ ಹಾಗೂ ನ್ಯಾಯಯುತ ಸಮಾಜದ ರಚನೆಗಾಗಿ ಬದ್ಧರಾಗಿದ್ದರು. ಆದ್ದರಿಂದ 1950ರ ಸಂವಿಧಾನವು ತಾರತಮ್ಯ, ನಿರ್ಬಂಧಗಳಿಗೆ ಸಾಧನದಂತೆ ಬಳಕೆಯಾಗುತ್ತಿದ್ದ ಜಾತಿ ವ್ಯವಸ್ಥೆಯನ್ನು ನಿರ್ಮೂಲಗೊಳಿಸಿತು, ಅದರಲ್ಲೂ ಮೂಲಭೂತ ಹಕ್ಕುಗಳು, ಸ್ವಾತಂತ್ರ್ಯ ಮತ್ತು ಮುಕ್ತತೆಗಳ ಮೂಲಕ ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸಿತು. ಇದೇ ವೇಳೆ, ಸಮಾಜದಲ್ಲಿ ತುಳಿತಕ್ಕೆ ಒಳಗಾಗಿದ್ದ ಮತ್ತು ಅವಕಾಶವಂಚಿತವಾಗಿದ್ದ ಕೆಲವೊಂದು ವರ್ಗಗಳ ಕುರಿತಾಗಿ ಸಕಾರಾತ್ಮಕ ಕ್ರಮದ ಭಾಗವಾಗಿ, ಪರಿಶಿಷ್ಟ ಜಾತಿ, ಬುಡಕಟ್ಟು ಜನಾಂಗ ಮತ್ತು ಹಿಂದುಳಿದ ವರ್ಗಗಳನ್ನು ಸಂವಿಧಾನದಲ್ಲಿ ಸೇರಿಸಲಾಯಿತು. ಮುಂದಿನ ಹಂತದಲ್ಲಿ, ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಮತ್ತು ಪರಿವರ್ತನ ಸಮಾಜವು ಸಾಮಾಜಿಕವಾಗಿ ಸಮ್ಮಿಳಿತವಾಗುತ್ತವೆಂದು ನಿರೀಕ್ಷಿಸಲಾಯಿತು.

ಏಳು ದಶಕಗಳ ಸ್ವತಂತ್ರ ಭಾರತದಲ್ಲಿ ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಜಾತಿಯ ಪ್ರಭಾವ ಕಡಿಮೆಯಾಗುತ್ತಿದೆಯಾದರೂ, ರಾಜಕೀಯ ವಲಯದಲ್ಲಿ ಇದರ ಪ್ರಭಾವ ತೀವ್ರಗೊಳ್ಳುತ್ತಿದೆ. ಹೊಸ ಜಾತಿ ಆಧರಿತ ಸಂಘಟನೆಗಳು ಹುಟ್ಟಿಕೊಂಡಿವೆ, ಜಾತಿ ಆಧರಿತವಾಗಿ ಧ್ರುವೀಕರಣ ಹೆಚ್ಚಿದೆ, ಹಿಂಸಾಚಾರ ಮತ್ತು ಮೀಸಲಾತಿ ಸಂಘರ್ಷಗಳೂ ತೀವ್ರಗೊಂಡಿವೆ. ದೇಶದ ಸಾಮಾಜಿಕ–ಆರ್ಥಿಕ ವ್ಯವಸ್ಥೆಯಲ್ಲಿ ಜಾತಿಯು ಅವಿಭಾಜ್ಯವಾಗಿ ತಳವೂರಿದೆ. ವಯಸ್ಕ ಮತದಾನ ಪದ್ಧತಿಯನ್ನು ಒಳಗೊಂಡ ಪ್ರಜಾಪ್ರಭುತ್ವವನ್ನು ನಾವು ಅನುಷ್ಠಾನಗೊಳಿಸುವುದರೊಂದಿಗೆ ಅನಕ್ಷರಸ್ಥ, ಅಷ್ಟಾಗಿ ರಾಜಕೀಯ ತಿಳಿವಳಿಕೆ ಇಲ್ಲದ ಮತ್ತು ರಾಜಕೀಯವನ್ನು ಕೇವಲ ಸರ್ಕಾರದ ಯೋಜನೆಗಳು ಹಾಗೂ ಜಾತಿ ಸಿದ್ಧಾಂತ, ಧರ್ಮದ ಆಧಾರದ ಮೇಲೆ ಅರ್ಥಮಾಡಿಕೊಳ್ಳುವಂತಹ ಜನರನ್ನು ಸಜ್ಜುಗೊಳಿಸುವುದು ಅಗತ್ಯವಾಯಿತು ಮತ್ತು ಇಂತಹ ಜನರೊಂದಿಗಿನ ನಂಟು ಪ್ರಸ್ತುತವೆನಿಸತೊಡಗಿತು. ಆದ್ದರಿಂದ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ರಾಜಕೀಯ ಸಾಮಾಜೀಕರಣದ ವಿಷಯ ಮತ್ತು ದಿಕ್ಕು ನಿರ್ಧಾರಣೆ, ಸಜ್ಜುಗೊಳಿಸುವಿಕೆ ಮತ್ತು ಸಾಂಸ್ಥೀಕರಣದಲ್ಲಿ ಜಾತಿ ವ್ಯವಸ್ಥೆಯು ಮಹತ್ವದ ಪಾತ್ರ ವಹಿಸಲು ಆರಂಭಿಸಿತು. ಇದು ಜಾತೀಯತೆಯ ಉದಯಕ್ಕೆ ಕಾರಣವಾಯಿತು.

### ಜಾತೀಯತೆ

ಸಾಮಾನ್ಯಾರ್ಥದಲ್ಲಿ ಜಾತೀಯತೆ ಪದದ ಅರ್ಥ ವಿವರಿಸುವುದಾದರೆ, ಅದು ಒಂದು ಜಾತಿಯ ಅಥವಾ ಉಪ ಜಾತಿಯ ಸದಸ್ಯರಿಗೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಲಾಭಗಳನ್ನು ಗರಿಷ್ಠಗೊಳಿಸಲು ಮತ್ತು ಇತರ ಜಾತಿಗಳಿಗೆ ಅಥವಾ ಇಡೀ ಸಮಾಜಕ್ಕೆ ಹಾನಿ ಮಾಡುವ ಪ್ರವರ್ತನೆಯಾಗಿದೆ.ಇದು ರಾಜಕೀಯ ಸ್ವಾಮಿನಿಷ್ಠೆಯ ಸಿದ್ಧಾಂತವೂ ಆಗಿದ್ದು, ಒಂದು ಸಮುದಾಯವನ್ನು ಪ್ರಾಥಮಿಕ ಮತ್ತು ನಿರ್ಣಾಯಕ ಎಂದು ಗುರುತಿಸಲಾಗುತ್ತದೆ. ಇದರಿಂದ ಒಂದು ಜಾತಿಯ ಬಗ್ಗೆ ಅಂಧ ನಿಷ್ಠೆ ಬೆಳೆಯುವುದಲ್ಲದೆ ಇದರ ಮೂಲಕ ಆ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳನ್ನು ಪೂರೈಸಬಹುದೆಂದು ನಂಬಲಾಗುತ್ತದೆ. ಕೆಲವೊಮ್ಮೆ ಇದು ಜಾತಿ–ಜಾತಿಗಳ ನಡುವೆ




ವೈಷಮ್ಯಕ್ಕೂ ದಾರಿ ಮಾಡುತ್ತದೆ. ಈಗಾಗಲೇ ಹೇಳಿರುವಂತೆ, ಎರಡನೇ ಸಮುದಾಯವು ವ್ಯವಸ್ಥಿತ ರಾಜಕೀಯ ಮೂಲಸೌಕರ್ಯ ಹೊಂದಿಲ್ಲವೆಂದಾದರೆ, ಮೊದಲನೆಯ ಅಥವಾ ಪ್ರಬಲ ಸಮುದಾಯವು ಪ್ರಮುಖ ರಾಜಕೀಯ ಪ್ರವರ್ತಕನಾಗಿ ಮುಂಚೂಣಿಗೆ ಬಂದು ಅಧಿಕಾರ ಮತ್ತು ಲಾಭಗಳನ್ನು ಪಡೆದುಕೊಳ್ಳುತ್ತದೆ. ರಾಜಕೀಯ ವ್ಯವಸ್ಥೆಯಲ್ಲಿರುವವರು ತಮ್ಮ ಬೆಂಬಲವರ್ಗವನ್ನು ಬೆಳೆಸಿಕೊಳ್ಳುವ ಉದ್ದೇಶದಿಂದ ಜಾತಿ ನಿಷ್ಠೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಇವರಲ್ಲಿ ಬಹುತೇಕ ಮಂದಿಗೆ ಅಭಿವೃದ್ಧಿ ಬಗ್ಗೆ ಕನಿಷ್ಠ ಕಳಕಳಿಯೂ ಇಲ್ಲ. ಪ್ರಜಾಪ್ರಭುತ್ವ ಮತ್ತು ಚುನಾವಣೆಯನ್ನು ಅಧಿಕಾರಕ್ಕೆ ಬರುವ ಮತ್ತು ಸರ್ಕಾರದ ಮೇಲೆ ಹಿಡಿತ ಸಾಧಿಸುವ ಮಾರ್ಗವಾಗಿ ಮಾತ್ರ ಅವರು ಪರಿಗಣಿಸುತ್ತಿದ್ದಾರೆ. ಚುನಾವಣೆಯಲ್ಲಿ ನಿಲ್ಲಲು ಮತ್ತು ಮತದಾರರ ಮೇಲೆ ಪ್ರಭಾವ ಬೀರಲು ಮಾತ್ರವಲ್ಲದೆ, ತಮಗೆ ನ್ಯಾಯಸಮ್ಮತವಾಗಿ ದಕ್ಕಬೇಕಿರುವ ಮತ್ತು ತಮಗೆ ಅರ್ಹವಲ್ಲದ ಲಾಭಗಳನ್ನು ಪಡೆಯಲೂ ಸಹ ಜಾತಿಯನ್ನು ಒತ್ತಡ ತಂತ್ರವಾಗಿ ಬಳಸಲಾಗುತ್ತಿದೆ. ಮೀಸಲಾತಿ ಪರ ಮತ್ತು ವಿರೋಧ ಒತ್ತಡವು ಇಂತಹವುಗಳ ಪ್ರಮುಖ ಉದಾಹರಣೆಯಾಗಿದೆ. ಇದು ಕೆಲವೊಮ್ಮೆ ಹಿಂಸಾತ್ಮಕ ಪ್ರತಿಭಟನೆ, ಸಾರ್ವಜನಿಕ ಆಸ್ತಿ–ಪಾಸ್ತಿ ನಷ್ಟಕ್ಕೆ ದಾರಿ ಮಾಡುತ್ತದೆ. ಜೊತೆಗೆ ಜನಕಲ್ಯಾಣ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಬಳಸಬೇಕಾದ ಸಂಪನ್ಮೂಲಗಳನ್ನು ಕಾನೂನು–ಸುವ್ಯವಸ್ಥೆ ಕಾಪಾಡಲು ಬಳಸಬೇಕಾದ ಅನಿವಾರ್ಯತೆ ಇದರಿಂದ ಸೃಷ್ಟಿಯಾಗುತ್ತದೆ. ಈ ನಿಟ್ಟಿನಲ್ಲಿ, ಜಾತಿಯ ರಾಜಕೀಯಕರಣವು ಹೊಸ ಒಗ್ಗಟ್ಟು ಸೃಷ್ಟಿಗೆ ಕಾರಣವಾಗುತ್ತಿರುವುದಲ್ಲದೆ, ಜಾತಿಯೇ ಹೊಸ ಮತ್ತು ಜಾತ್ಯತೀತ ಪಾತ್ರಗಳನ್ನು ನಿರ್ವಹಿಸುವ ಸನ್ನಿವೇಶಕ್ಕೂ ಕಾರಣವಾಗುತ್ತಿದೆ. ಮೈರೋನ್ ವೀನರ್ (2006) ಅವರು ಹೇಳುವಂತೆ, ಜಾತಿಯು ಪ್ರಸ್ತುತ ವ್ಯಕ್ತಿಯೊಬ್ಬನ ವೈಯಕ್ತಿಕ ಜೀವನದ ಆಯ್ಕೆಗಳನ್ನು ನಿರ್ಧರಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುವುದಕ್ಕಿಂತಲೂ ಅದು ರಾಜಕೀಯ ಗುರುತಿಸುವಿಕೆ ಮತ್ತು ನಾಗರಿಕ ಸಮಾಜದ ಸಾಂಸ್ಥಿಕ ಶಕ್ತಿಯಾಗಿ ಹೆಚ್ಚಿನ ಮಹತ್ವ ಪಡೆದುಕೊಂಡಿರುವುದು ವಿಪರ್ಯಾಸ. ಈಗ ಜಾತಿ ಆಧರಿತ ಶಿಕ್ಷಣ ಸಂಸ್ಥೆಗಳು, ಹೋಟೆಲ್‌ಗಳು, ಗೃಹ ನಿರ್ಮಾಣ ಸಂಘಗಳು ಇತ್ಯಾದಿ ಹುಟ್ಟಿಕೊಂಡಿವೆ. ಇವುಗಳಲ್ಲಿ ಕೆಲವು ಅವಕಾಶ ವಂಚಿತರನ್ನು ಮುಖ್ಯವಾಹಿನಿಗೆ ತರುವಲ್ಲಿ ಮತ್ತು ಅವರ ಆಶೋತ್ತರಗಳನ್ನು ಈಡೇರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಹೌದಾದರೂ, ಒಟ್ಟಾರೆಯಾಗಿ ಜಾತೀಯತೆಯು ಸಾಮಾಜಿಕ ಸೌಹಾರ್ದತೆಯನ್ನು ಹಾಳುಗೆಡವುತ್ತಿವೆ. ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಮತ್ತು ನವ ಭಾರತ ನಿರ್ಮಾಣ ಕಾರ್ಯಗಳ ಮೇಲೆ ಇದು ಗಂಭೀರ ಪರಿಣಾಮಗಳನ್ನು ಬೀರುತ್ತಿದೆ.

### ನಿರ್ಮೂಲನೆಯ ಅಗತ್ಯ

ಈಗಾಗಲೇ ಚರ್ಚಿಸಿದಂತೆ, ಜಾತೀಯತೆಯು ದೇಶದ ಸಾಮಾಜಿಕ–ಆರ್ಥಿಕ ಮತ್ತು ರಾಜಕೀಯ ರಚನೆಯನ್ನು ಹಾಳು ಮಾಡುತ್ತಿದೆ. ಸಾಮಾಜಿಕ ವಲಯದಲ್ಲಿ ಜಾತಿಯು ಕ್ರಮೇಣ ಅಳಿವಿನತ್ತ ಸಾಗಿರುವುದು ಹೌದು. ಆಧುನಿಕ ಜೀವನ ಮತ್ತು ಕೆಲಸದ ಸ್ಥಿತಿಗತಿಗಳು ಹಲವು ಸಾಂಪ್ರದಾಯಿಕ ವಿಧಿಗಳು, ನಂಬಿಕೆಗಳು ಮತ್ತು ಆಚರಣೆಗಳನ್ನು ಅರ್ಥಹೀನವೆನಿಸುವಂತೆ ಮಾಡಿವೆ. ಜಾತಿ–ಜಾತಿಗಳ ಸಾಮೂಹಿಕ ಭೋಜನ, ಅಂತರಜಾತೀಯ ವಿವಾಹಗಳೂ ಈಗ ನಿಷೇಧಿತ ವಿಷಯಗಳಾಗಿ ಉಳಿದಿಲ್ಲ. ಅದರಲ್ಲೂ ನಗರ ಪ್ರದೇಶಗಳಲ್ಲಿ ಇವು ಸಾಮಾನ್ಯವಾಗಿವೆ. ಮುಖ್ಯವಾಗಿ ಮಹಾನಗರಗಳಲ್ಲಿರುವ ಸುಶಿಕ್ಷಿತ ಜನರಲ್ಲಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾತಿ ಆಧರಿತ ಆಚರಣೆಗಳು ಹಾಸ್ಯಾಸ್ಪದವೆನಿಸಿವೆ. ಮತ್ತೊಂದು ಸಕಾರಾತ್ಮಕ ವಿಚಾರವೆಂದರೆ, ಕಳೆದ ಕೆಲವು ಚುನಾವಣೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಲೋಕಸಭೆ ಚುನಾವಣೆಯಲ್ಲಿ ಜಾತಿ ಗೌಣವಾಗಿದೆ. ರಾಜಕೀಯ ಪಕ್ಷಗಳು ಅಭಿವೃದ್ಧಿ, ಭ್ರಷ್ಟಾಚಾರ, ಕಾರ್ಯದಕ್ಷತೆ, ಆಡಳಿತ ಮುಂತಾದವುಗಳಿಗೆ ಪ್ರಾಧಾನ್ಯತೆ ನೀಡುತ್ತಿವೆ. ಆದರೂ ಇನ್ನೂ ಕೆಲವೊಂದು ಪಕ್ಷಗಳು ಮತ್ತು ಸಮುದಾಯಗಳಿಗೆ ಜನರ ಬೆಂಬಲ ಗಳಿಸಲು ಮತ್ತು ಪ್ರಚಾರಕ್ಕೆ ಜಾತಿಯೇ ಆಧಾರವಾಗಿದ್ದು, ಇದರ ಆಧಾರದ ಮೇಲೆಯೇ ಕಾರ್ಯಪ್ರವೃತ್ತವಾಗಿವೆ. ಚುನಾವಣೆಯಲ್ಲಿ ಅಭಿವೃದ್ಧಿ ಮತ್ತು ಆಡಳಿತದ ವಿಚಾರಗಳು ದೊಡ್ಡ ಮಟ್ಟದಲ್ಲಿ ಪ್ರಾಧಾನ್ಯತೆ ಪಡೆದರೂ, ಅಷ್ಟೇ ಮಟ್ಟದಲ್ಲಿ ಚುನಾವಣೆಯಲ್ಲಿ ಜಾತಿಯ ಪ್ರಭಾವ ಇಳಿಮುಖವಾಗಿಲ್ಲ. ಅದರಲ್ಲೂ ರಾಜ್ಯಗಳ ವಿಧಾನಸಭೆ ಮತ್ತು ಕೆಳ ಹಂತದ ಚುನಾವಣೆಗಳಿಗೆ ಇದು ಹೆಚ್ಚಾಗಿ ಅನ್ವಯಿಸುತ್ತದೆ. ಆದ್ದರಿಂದ ಜಾತೀಯತೆಯ ನಿರ್ಮೂಲನೆ ಅಥವಾ ಅದರ ಪ್ರಭಾವ ತಗ್ಗಿಸುವಿಕೆಯು ಇಂದಿನ ದಿನದ ಅತ್ಯಗತ್ಯವೆನಿಸಿದೆ.




ಜಾತೀಯತೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯೆಂದರೆ, ಶಿಕ್ಷಣ. ಶಿಕ್ಷಣವೆಂದರೆ ಕೇವಲ ಔಪಚಾರಿಕ ಶಿಕ್ಷಣ ಅಥವಾ ಶಾಲಾ ಶಿಕ್ಷಣವಲ್ಲ. ಜಾತಿ ವ್ಯವಸ್ಥೆ ಕುರಿತಾದ ಮಿಥ್ಯಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಅವುಗಳನ್ನು ಪ್ರಸಾರ ಮಾಡುವುದು ಶಿಕ್ಷಣದ ಭಾಗವಾಗಬೇಕು. ಆರಂಭದಲ್ಲೇ ಹೇಳಿದಂತೆ, ಹಲವು ಬಾರಿ ಧರ್ಮ ಅಥವಾ ಧಾರ್ಮಿಕ ಆಚರಣೆಗಳನ್ನು ಜಾತಿಯ ಭಾಗವೆಂದು ಪರಿಗಣಿಸಲಾಗುತ್ತದೆ. ಆದರೆ ಅದು ಸರಿಯಲ್ಲ. ರಾಜಕೀಯ ನಾಯಕರು ಜಾತಿ ಹೆಸರಿನಲ್ಲಿ ಹೇಗೆ ತಮ್ಮನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ, ಅಭಿವೃದ್ಧಿಯ ಲಾಭಗಳಿಂದ ನಿರ್ದಿಷ್ಟ ಜಾತಿ ಮತ್ತು ಇಡೀ ಸಮಾಜವನ್ನು ಹೇಗೆ ದೂರ ಮಾಡಿದ್ದಾರೆ ಎಂಬ ಬಗ್ಗೆ ಮತದಾರರಲ್ಲಿ ಅರಿವು ಮೂಡಿಸಬೇಕು. ಶಾಲೆಗಳಲ್ಲಿ ಮಕ್ಕಳು ಒಟ್ಟಾಗಿ ಊಟ ಮಾಡಲು ಮತ್ತು ಆಟವಾಡಲು ಶಿಕ್ಷಕರು ಉತ್ತೇಜಿಸಬೇಕು. ಸಮಾಜವನ್ನು ಆದಿಕಾಲದ ಕಟ್ಟುಪಾಡುಗಳಿಂದ ಹೊರತರಲು ಸಾಮಾಜಿಕ–ಸಾಂಸ್ಕೃತಿಕ ಅಸಮತೋಲನವನ್ನು ನಿವಾರಿಸುವುದು ಅಗತ್ಯವಾಗಿದೆ. ಯಾವುದೇ ಜಾತಿಯನ್ನು ಅಪವಿತ್ರವೆಂದು ಅಥವಾ ಕೀಳಾಗಿ ಕಾಣುವುದರಿಂದ, ಆ




ಸಮುದಾಯಕ್ಕೆ ಸೇರಿದ ನಾಯಕನೊಬ್ಬ ತಾರತಮ್ಯದ ವಿರುದ್ಧ ಧ್ವನಿಯೆತ್ತಲು ಮತ್ತು ಆ ಸಮುದಾಯದ ಜನರು ಆತನ ನಾಯಕತ್ವದಲ್ಲಿ ಒಟ್ಟುಗೂಡಲು ಕಾರಣವಾಗುತ್ತದೆ. ಕೆಲವೊಂದು ಪ್ರಕರಣಗಳಲ್ಲಿ, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು ಏಕರೂಪಿಯಾಗಿರುತ್ತವೆ. ಉದಾಹರಣೆಗೆ ಬಹುತೇಕ ಪರಿಶಿಷ್ಟ ಜಾತಿಯ ಜನರು ಬಡವರಷ್ಟೇ ಅಲ್ಲದೆ ಅವಕಾಶ ವಂಚಿತರೂ ಆಗಿರುತ್ತಾರೆ. ಪ್ರಜಾಪ್ರಭುತ್ವದಲ್ಲಿ, ಇಂತಹ ತಾರತಮ್ಯದ ವಿರುದ್ಧ ಒಂದಾಗುವುದು ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ತೊಡಗುವುದು ಕಾನೂನು ಸಮ್ಮತವೇ ಆಗಿದೆ. ಕೆಲವೊಂದು ಸಮುದಾಯದ ವಿರುದ್ಧ ತಾರತಮ್ಯ ಅಥವಾ ಅಸಮಾನತೆ ಮುಂದುವರಿಸಿದಾಗ, ಅದು ಸಾಮೂಹಿಕ ಹೋರಾಟಕ್ಕೆ ಸಕಾರಣ ಒದಗಿಸುತ್ತದೆ ಮತ್ತು ಈ ರೀತಿ ತಿರುಗಿಬಿದ್ದ ಸಮುದಾಯವು ತಮ್ಮ ನಾಯಕತ್ವ ವಹಿಸಿರುವ ಮುಖಂಡನ ಗೌಪ್ಯ ಅಥವಾ ದುರುದ್ದೇಶವನ್ನು ಲೆಕ್ಕಿಸದೆ ಅನ್ಯಾಯದ ವಿರುದ್ಧ ಹೋರಾಡುತ್ತದೆ. ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಯಲ್ಲಿ ನಾಗರಿಕ ಸಮಾಜ ಪಾತ್ರ ಅತ್ಯಂತ ಮಹತ್ವದ ಮತ್ತು ಪ್ರಧಾನವಾದುದಾಗಿದೆ. ಜಾತಿ, ಧರ್ಮವನ್ನು ಬಳಸದೆ ಮತದಾರರನ್ನು ಒಟ್ಟುಗೂಡಿಸಬೇಕು ಮತ್ತು ಅವರಲ್ಲಿ ಅರಿವು ಮೂಡಿಸಬೇಕು. ಅಭಿವೃದ್ಧಿಯ ಪರಿಣಾಮಗಳು ಮತ್ತು ಚುನಾವಣೆಯಲ್ಲಿ ಜಾತಿ–ಧರ್ಮದದುರ್ಬಳಕೆ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು. ಸಾಮಾಜಿಕ ಸೌಹಾರ್ದತೆ ಕೊರತೆ ಮತ್ತು ಸಂಘರ್ಷಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕು. ತಾರತಮ್ಯ ಕುರಿತಾದ ಮಿಥ್ಯಗಳ ಬಗ್ಗೆ ಗಮನ ಸೆಳೆಯಲು ಅಂತರ್ಜಾತೀಯ ವಿವಾಹಗಳು, ಭೋಜನ ಕೂಟಗಳು ಮತ್ತು ಇತರ ಸಾಮಾಜಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಪ್ರೋತ್ಸಾಹಿಸುವ ಮೂಲಕ ಸಮಾಜ ಈ ನಿಟ್ಟಿನಲ್ಲಿ ಗಮನಾರ್ಹ ಪಾತ್ರ ನಿರ್ವಹಿಸಬಹುದು. ಚುನಾವಣಾ ಆಯೋಗದ ಪಾತ್ರವೂ ಅತ್ಯಂತ ಮಹತ್ವದ್ದಾಗಿದೆ. ಈಗಾಗಲೇ ಹೇಳಿದಂತೆ, ಜಾತೀಯತೆಯ ಮೂಲ ಕಾರಣವೆಂದರೆ ರಾಜಕೀಯ. ಚುನಾವಣೆ ವೇಳೆ ಜಾತಿಯ ದುರ್ಬಳಕೆಯನ್ನು ತಡೆಯುವ ಹಾದಿಗಳನ್ನು ಆಯೋಗ ಕಂಡುಕೊಳ್ಳಬೇಕು. ಸರ್ಕಾರದಿಂದಲೇ ಚುನಾವಣೆಗೆ ಹಣ ಒದಗಣೆ, ನೀತಿ ಸಂಹಿತಿಯ ಕಠಿಣ ಅನುಷ್ಠಾನ, ಮತದಾರರ ಜಾಗೃತಿ ಮುಂತಾದ ಕ್ರಮಗಳು ಈ ನಿಟ್ಟಿನಲ್ಲಿ ನೆರವಾಗಲಿವೆ.

ರಾಜಕೀಯ ಇಚ್ಛಾಶಕ್ತಿ ಮತ್ತು ಒಮ್ಮತವೂ ಈ ನಿಟ್ಟಿನಲ್ಲಿ ಅತ್ಯಂತ ಮುಖ್ಯವಾಗಿದೆ. ಬಹುತೇಕ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಜಾತಿಯ ಬಳಕೆ ಮತ್ತು ದುರ್ಬಳಕೆಯನ್ನು ವಿರೋಧಿಸುತ್ತವಾದರೂ, ಟಿಕೆಟ್ ಹಂಚಿಕೆ ಸಮದಲ್ಲಿ ಹಾಗೂ ಜನರ ಬೆಂಬಲ ಪಡೆಯಬೇಕಾದಾಗ ಜಾತಿ ಮುಖಂಡರಿಗೇ ಮಣೆ ಹಾಕುತ್ತವೆ. ಮತದಾರರು ಜಾತಿ ಮತ್ತು ಸಮುದಾಯದ ಅಂಶಗಳನ್ನು ಮೀರಿ ಸರ್ಕಾರಗಳ ಕಾರ್ಯದಕ್ಷತೆ, ನಾಯಕತ್ವ ಮತ್ತು ಅಭಿವೃದ್ಧಿ ವಿಚಾರಗಳಿಗೆ ಗಮನ ನೀಡುತ್ತಿರುವುದು ಇತ್ತೀಚೆಗಿನ ಚುನಾವಣಾ ಪ್ರವೃತ್ತಿಯಿಂದ ತಿಳಿದುಬಂದಿದೆ. ಈ ಪ್ರವೃತ್ತಿಯನ್ನು ಮತ್ತಷ್ಟು ಬಲಗೊಳಿಸಬೇಕಿದೆ. ರಾಜಕೀಯ ಪಕ್ಷಗಳು ತಾತ್ಕಾಲಿಕ ಲಾಭಗಳ ರಾಜಕಾರಣವನ್ನು ಬದಿಗಿರಿಸಿ, ತಾವು ಬದ್ಧವೆಂದು ಹೇಳಿಕೊಳ್ಳುವ ರಾಷ್ಟ್ರ ನಿರ್ಮಾಣದಂತಹ ದೀರ್ಘ ಕಾಲೀನ ಗುರಿಗಳತ್ತ ಚಿಂತಿಸಬೇಕಿದೆ. ಪ್ರಜಾಪ್ರಭುತ್ವವು ಕೇವಲ ಚುನಾವಣೆಯಲ್ಲಿ ಗೆಲುವು ಮತ್ತು ಸೋಲು ಮಾತ್ರವಲ್ಲದೆ, ಅದಕ್ಕೂ ಮೀರಿದ್ದಾಗಿದೆ. ಮತದಾರರು ಸೇರಿದಂತೆ ದೇಶದ ಎಲ್ಲಾ ಪ್ರಜೆಗಳು ವಿಚಾರವಂತ ವ್ಯಕ್ತಿಗಳಾಗಿರುವುದು ಪ್ರಜಾಪ್ರಭುತ್ವದ ಅರ್ಥಪೂರ್ಣ ಕಾರ್ಯನಿರ್ವಹಣೆಗೆ ಮುಖ್ಯವಾಗಿದೆ.ಇಂತಹ ವ್ಯಕ್ತಿಗಳ ಸ್ವಯಂ ಯೋಗ್ಯತಾ ನಿರ್ಣಯವು ಆತನ/ಆಕೆಯ ವೈಯಕ್ತಿಕ ಯೋಗ್ಯತೆಯನ್ನು ಆಧರಿಸಿರಬೇಕೇ ಹೊರತು, ಆತ ಅಥವಾ ಆಕೆ ಸೇರಿರುವ ಯಾವುದೇ ಸಾಮಾಜಿಕ ಸಮುದಾಯದ ಯೋಗ್ಯತೆಯನ್ನು ಅದು ಆಧರಿಸಿರಬಾರದು. ಜಾತಿ, ಸಮುದಾಯಗಳ ಓಲೈಕೆ ಅಥವಾ ಒತ್ತಡಗಳಿಂದ ಪ್ರಭಾವಿತರಾಗದೆ ಜನರು ಮುಕ್ತ ಮನಸ್ಸಿನಿಂದ ಮತದಾನ ಮಾಡಬೇಕು. ಭಾರತೀಯರು ಈಗಿನ ಪರಿಸ್ಥಿತಿಗೆ ಸ್ಪಂದಿಸಿ, ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಭ್ರಾತೃತ್ವದ ತಳಹದಿಯನ್ನು ಹೊಂದಿರುವ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುವರೆಂಬ ವಿಶ್ವಾಸ ನನಗಿದೆ.ಆ ಮೂಲಕ ಸಕಲರಿಗೂ ಜೀವನಾಧಾರ, ಆರೋಗ್ಯ, ಶಿಕ್ಷಣ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ನೀಡುವ ಸಮಾಜದ ಅಸ್ತಿತ್ವಕ್ಕೆ ಭಾರತೀಯರು ಕೊಡುಗೆ ನೀಡುವರೆಂಬ ನಂಬಿಕೆ ಇದೆ. ನಮ್ಮ ಸಂವಿಧಾನದ ರಚನಾಕಾರರು ಕನಸು ಕಂಡದ್ದು ಮತ್ತು ಸ್ವಾತಂತ್ರ್ಯೋತ್ತರ 70 ವರ್ಷಗಳ ಬಳಿಕ ನಾವು ಎದುರುನೋಡುತ್ತಿರುವುದು ಇಂತಹ ಭಾರತಕ್ಕಾಗಿಯೇ. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ತಮ್ಮ **ಇ–ಮೇಲ್, ಫೋನ್ ನಂಬರ್ ಸೇರಿದಂತೆ, ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಒಳಗೊಂಡ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು**. ಚಂದಾದಾರರು, ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ**. ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ–ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

# ರೈತರ ಕಲ್ಯಾಣ : ಯಶಸ್ಸಿನ ಕೀಲಿ ಕೈ

* ಡಾ. ಜಗದೀಪ್ ಸಕ್ಸೇನ



**ಆಧುನಿಕ ಕೃಷಿ ಮತ್ತು ರೈತ ಸಮುದಾಯದ ಸಮೃದ್ಧಿ, ಏಳ್ಗೆಗಾಗಿ ಆದ್ಯಗಮನ ಹರಿಸಿರುವ ಕೇಂದ್ರ ಕೃಷಿ ಸಚಿವಾಲಯ, ನವಭಾರತ ನಿರ್ಮಾಣ ಮಾಡುವ ಮುನ್ನೋಟವನ್ನು ವಾಸ್ತವ ರೂಪಕ್ಕೆ ತರಲು ಏಳು ಅಂಶಗಳನ್ನು ಒಳಗೊಂಡ ಕಾರ್ಯತಂತ್ರ ಯೋಜನೆಯೊಂದನ್ನು ರೂಪಿಸಿದೆ.**

ನವಭಾರತ ನಿರ್ಮಾಣ, ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ ಗುರಿಯಾಗಿದೆ. ಸಮೃದ್ಧ, ಆರೋಗ್ಯಪೂರ್ಣ, ಸುಶಿಕ್ಷಿತ, ಸ್ವಚ್ಛ ಮತ್ತು ಹಸಿರು ತುಂಬಿದ ದೇಶವಾಗಿ ಪರಿವರ್ತಿಸಬೇಕು ಎಂಬುದೇ ಸರ್ಕಾರದ ದೂರದೃಷ್ಟಿಯಾಗಿದೆ. ಕೃಷಿ ಆಧರಿತ ಅರ್ಥ ವ್ಯವಸ್ಥೆ ಹೊಂದಿರುವ ಈ ದೇಶವನ್ನು ಈ ಗುರಿಯೆಡೆಗೆ ಕೊಂಡೊಯ್ಯಬೇಕಾದರೆ, ಕೃಷಿ ಕ್ಷೇತ್ರದಲ್ಲಿರುವ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲೇಬೇಕು. ಏಕೆಂದರೆ, ಕೃಷಿ ರಂಗವು ದೇಶದ 55% ಜನರಿಗೆ ಜೀವನ ಬೆಂಬಲ ನೀಡುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ, ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಕ್ಕೆ 14% ಕೊಡುಗೆ ನೀಡುತ್ತಾ ಬಂದಿದೆ. ಈ ವಾಸ್ತವವನ್ನು ಮನಗಂಡ ಕೇಂದ್ರ ಸರ್ಕಾರ, ಕೃಷಿ ವಲಯಕ್ಕೆ ಆದ್ಯತೆಯ ಗಮನ ನೀಡಿದೆ. ಈ ನಿಟ್ಟಿನಲ್ಲಿ ಅದು, ಕಳೆದ ಮೂರು ವರ್ಷಗಳಿಂದ ಅನೇಕ ಸುಧಾರಣೆಗಳನ್ನು ಅನುಷ್ಠಾನಕ್ಕೆ ತಂದಿದೆ.

ಎಲ್ಲಕ್ಕಿಂತ ವಿಶೇಷವಾಗಿ, 2022ರ ವೇಳೆಗೆ ಕೃಷಿಕರ ವರಮಾನವನ್ನು ದುಪ್ಪಟ್ಟುಗೊಳಿಸುವ ದೃಢ ಬದ್ಧತೆಯನ್ನು 75ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಸಂದರ್ಭದಲ್ಲಿ ಪ್ರಕಟಿಸಲಾಗಿದೆ. ಹೊಸ ಕೃಷಿ ಯೋಜನೆಗಳು ಮತ್ತು ಉಪಕ್ರಮಗಳಿಗೆ ಸಾಕಷ್ಟು ಬೆಂಬಲ ಮತ್ತು ಆರ್ಥಿಕ ನೆರವು ಒದಗಿಸುವ ನಿಟ್ಟಿನಲ್ಲಿ ಭಾರತ ಸರ್ಕಾರವು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ವಲಯದ ಬಜೆಟ್ ಅನುದಾನ ಹಂಚಿಕೆಯಲ್ಲಿ ಏರಿಕೆ ಮಾಡಿದೆ. ಈ ವಲಯದ ಬಜೆಟ್ ಅನುದಾನವನ್ನು 2017–18ನೇ ಸಾಲಿನಲ್ಲಿ 1.87 ಲಕ್ಷ ಕೋಟಿ ರೂಪಾಯಿಗೆ ಹೆಚ್ಚಳ ಮಾಡಿದೆ. ಕಳೆದ ವರ್ಷದ ಬಜೆಟ್‌ಗೆ ಹೋಲಿಸಿದರೆ, ಈ ಬಾರಿ 24% ಅನುದಾನ ಹಂಚಿಕೆಯಲ್ಲಿ ಏರಿಕೆ ಕಂಡಿದೆ. 2016–17ನೇ ಸಾಲಿನಲ್ಲಿ 274 ದಶಲಕ್ಷ ಟನ್ ಆಹಾರ ಉತ್ಪಾದನೆ ಆಗಿದೆ. ಇದು ಹಿಂದೆಂದೂ ಕಾಣದ ದಾಖಲೆ. ಸರ್ಕಾರದ ಹೊಸ ಕಾರ್ಯಕ್ರಮಗಳು ಮತ್ತು ನೀತಿಗಳ ಯಶಸ್ಸು ಮತ್ತು ಪರಿಣಾಮ ಹಾಗೂ ನಮ್ಮ ರೈತಾಪಿ ವರ್ಗ, ವಿಜ್ಞಾನಿಗಳು ಮತ್ತು ಇತರೆ ಪಾಲುದಾರರು ತೋರುತ್ತಿರುವ ಬೆಂಬಲ ಮತ್ತು ಪ್ರೋತ್ಸಾಹದ ಫಲವಾಗಿ ಹಿಂದೆಂದೂ ಕಾಣದಷ್ಟು ಆಹಾರ ಉತ್ಪಾದನೆಯಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ, 2011–14ರ ಅವಧಿಗೆ ಹೋಲಿಕೆ ಮಾಡಿದರೆ, 2014–17ರ ಅವಧಿಯಲ್ಲಿ ಮೀನುಗಳು ಮತ್ತು ಹಾಲಿನ ಉತ್ಪಾದನೆ ಕ್ರಮವಾಗಿ 20% ಮತ್ತು 17% ಹೆಚ್ಚಳವಾಗಿದೆ. ಇದು ಸಹ ದಾಖಲೆಯೇ. ಒಟ್ಟಾರೆಯಾಗಿ, 2016–17ರಲ್ಲಿ ಕೃಷಿ ವಲಯದ ಪ್ರಗತಿ ದರ 4.4% ಹೆಚ್ಚಳವಾಗಿದೆ. 2022 ವೇಳೆಗೆ ರೈತರ ವರಮಾನವನ್ನು ದುಪ್ಪಟ್ಟುಗೊಳಿಸುವ ಗುರಿ ಸಾಧಿಸಬೇಕಾದರೆ, ಕೃಷಿ ಕ್ಷೇತ್ರದ ಪ್ರಗತಿ ದರ 10.4% ಏರಿಕೆ ಆಗಬೇಕಾದ ಅಗತ್ಯವಿದೆ.

### ಉದಾತ್ತ ಯೋಜನೆಗಳ ಮೂಲಕ ಕಾರ್ಯತಂತ್ರ ನಡೆಗಳು

ಆಧುನಿಕ ಕೃಷಿ ಮತ್ತು ರೈತ ಸಮುದಾಯದ ಸಮೃದ್ಧಿ, ಏಳ್ಗೆಗಾಗಿ ಆದ್ಯತೆಯ ಗಮನ ಹರಿಸಿರುವ ಕೇಂದ್ರ ಕೃಷಿ ಸಚಿವಾಲಯ, ನವಭಾರತ ನಿರ್ಮಾಣ ಮಾಡುವ ಮುನ್ನೋಟವನ್ನು ವಾಸ್ತವ ರೂಪಕ್ಕೆ ತರಲು ಏಳು ಅಂಶಗಳನ್ನು ಒಳಗೊಂಡ ಕಾರ್ಯತಂತ್ರ

* ಮಾಜಿ ಮುಖ್ಯ ಸಂಪಾದಕರು, ಭಾರತೀಯ ಕೃಷಿ ಸಂ.ಶೋಧನಾ ಮಂಡಳಿ, ನವದೆಹಲಿ. E-mail : jgdsaxena@gmail.com



ಯೋಜನೆಯೊಂದನ್ನು ರೂಪಿಸಿದೆ. ರೈತರ ಆದಾಯವನ್ನು ದುಪ್ಪಟ್ಟುಗೊಳಿಸುವ ಕೇಂದ್ರ ಸರ್ಕಾರದ ಚಿಂತನೆಗೆ ಪೂರಕವಾಗಿ, ತಜ್ಞರ ಸಮಿತಿಯೊಂದು ಸಲ್ಲಿಸಿರುವ ನಾಲ್ಕು ಸಂಪುಟಗಳ ವರದಿಯ ಭಾಗವೇ ಕಾರ್ಯತಂತ್ರ ಯೋಜನೆಯಾಗಿದೆ.

2015–16ರಲ್ಲಿ ದೇಶದ ಪ್ರತಿ ರೈತ ಗಳಿಸುತ್ತಿರುವ ಸರಾಸರಿ ವಾರ್ಷಿಕ ಆದಾಯ 96,703 ರೂಪಾಯಿಯನ್ನು 2022–23ರ ಹೊತ್ತಿಗೆ 1,93,400 ರೂಪಾಯಿಗೆ ಏರಿಕೆ ಮಾಡುವುದು ಕಾರ್ಯತಂತ್ರ ಯೋಜನೆಯ ಮಹತ್ವದ ಗುರಿಯಾಗಿದೆ. ವರದಿಯ ಪ್ರಕಾರ, 2004–05ರ ಸಾಲಿನಲ್ಲಿ ಇದ್ದ ದರಗಳನ್ನು ಪರಿಗಣಿಸಿ ಹೇಳುವುದಾದರೆ, ದೇಶದ ಕೃಷಿಕರ ವರಮಾನವನ್ನು ದುಪ್ಪಟ್ಟುಗೊಳಿಸುವ ಗುರಿ ಸಾಧಿಸಬೇಕಾದರೆ, ಭಾರತಕ್ಕೆ 1.486 ಲಕ್ಷ ಕೋಟಿ ರೂ. ಮೊತ್ತದ ಖಾಸಗಿ ಮತ್ತು ಸಾರ್ವಜನಿಕ ಹೂಡಿಕೆಯ ಅಗತ್ಯವಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಕೃಷಿ ಬೆಳೆಗಳ ಉತ್ಪಾದನೆ ಹೆಚ್ಚಳ, ಕೃಷಿ ಉತ್ಪಾದನೆ ವೆಚ್ಚ ಕಡಿತ ಮತ್ತು ಬೆಳೆಗಳ ಉತ್ಪಾದನೆ ನಂತರ ಉಂಟಾಗುವ ನಷ್ಟ ನಿಯಂತ್ರಣ ಮತ್ತು ಕೃಷಿ ಮಾರುಕಟ್ಟೆಗಳ ಸುಧಾರಣೆಗೆ ಕಾರ್ಯತಂತ್ರ ಯೋಜನೆಯಲ್ಲಿ ವಿಶೇಷ ಗಮನ ಹರಿಸಲಾಗಿದೆ. ಕೃಷಿ ಸಂಸ್ಕರಣಾ ಸೌಲಭ್ಯಗಳು, ಬೆಳೆ ವಿಮೆ ಮೂಲಕ ಗಂಡಾಂತರಗಳ ನಿಯಂತ್ರಣ, ವಿಪತ್ತುಗಳ ಪರಿಹಾರ, ತೋಟಗಾರಿಕೆ ಮತ್ತು ಹೈನುಗಾರಿಕೆ ಉತ್ಪಾದನೆ ಹೆಚ್ಚಳ ಮಾಡುವ ಮೂಲಕ ಕೃಷಿ ವಲಯದ ಮೌಲ್ಯವರ್ಧನೆಗೆ ಒತ್ತು ನೀಡಬೇಕಾದ ಅಗತ್ಯವಿದೆ ಎಂದು ವರದಿ ತಿಳಿಸಿದೆ.

ಪ್ರತಿ ಹನಿ ನೀರಿನಿಂದ ಹೆಚ್ಚಿನ ಬೆಳೆ ತೆಗೆಯುವ ಕಾರ್ಯಕ್ರಮದ ಅಡಿ, ನೀರಿನ ಬಳಕೆ ಸಾಮರ್ಥ್ಯ ಹೆಚ್ಚಿಸಲು ಹಾಗೂ ನೀರಾವರಿ ಸೌಲಭ್ಯಗಳನ್ನು ಕೇಂದ್ರ ಸರ್ಕಾರ ಪ್ರಯತ್ನ ಮುಂದುವರಿಸಿದೆ. ಸಣ್ಣ ನೀರಾವರಿ ತಾಂತ್ರಿಕತೆ ಬಳಸಿ ನೀರಾವರಿ ಪ್ರದೇಶವನ್ನು ವಿಸ್ತರಿಸುವುದು ಈ ಕಾರ್ಯಕ್ರಮದ ಗುರಿಯಾಗಿದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿಎಂಕೆಎಸ್‌ವೈ) ಯಲ್ಲಿ ನೀರಾವರಿ ಪ್ರದೇಶವನ್ನು ಗಣನೀಯವಾಗಿ ಹೆಚ್ಚಿಸಲು ನಡೆಸಿರುವ ಪ್ರಯತ್ನದಿಂದಾಗಿ 2013–14ರಲ್ಲಿ ಇದ್ದ ನೀರಾವರಿ ಪ್ರದೇಶವು 4.3 ಲಕ್ಷ ಹೆಕ್ಟೇರ್‌ನಿಂದ 2016–17ರ ಹೊತ್ತಿಗೆ 8.3 ಲಕ್ಷ ಹೆಕ್ಟೇರ್‌ಗೆ ಗಣನೀಯವಾಗಿ ಏರಿಕೆ ಕಂಡಿದೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ತಮ್ಮ 2017ರ ಸ್ವಾತಂತ್ರ್ಯೋತ್ಸವ ದಿನಾಚರಣೆ ಭಾಷಣದಲ್ಲಿ, ಪಿಎಂಕೆಎಸ್‌ವೈ ಯೋಜನೆ ಅಡಿ 30 ಕೃಷಿ ಯೋಜನೆಗಳು ಪೂರ್ಣಗೊಂಡಿವೆ ಎಂದು ಘೋಷಿಸಿದ್ದಾರೆ. ಕೇಂದ್ರ ಸರ್ಕಾರದ ಅನನ್ಯವಾದ ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆಯು ರೈತರಿಗೆ ವರದಾನವಾಗಿದೆ. ಇದು ಕೃಷಿ ವೆಚ್ಚವನ್ನು ಗಣನೀಯವಾಗಿ ತಗ್ಗಿಸಿದೆ.

ಎಲ್ಲಕ್ಕಿಂತ ಮುಖ್ಯವಾಗಿ, ರಸಾಯನಿಕ ಗೊಬ್ಬರಗಳ ಸಮತೋಲಿತ ಬಳಕೆಯನ್ನು ಖಾತ್ರಿಪಡಿಸಿದೆ. ಜತೆಗೆ, ಮಣ್ಣಿನ ಫಲವತ್ತತೆ ಮತ್ತು ಉತ್ಪಾದಕತೆಯನ್ನು ಸುಸ್ಥಿರವಾಗಿ ಹೆಚ್ಚಿಸಿದೆ. ಈವರೆಗೆ, ದೇಶಾದ್ಯಂತ ಒಟ್ಟಾರೆ 7.1 ಕೋಟಿ ರೈತರಿಗೆ ಮಣ್ಣು, ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಮಣ್ಣಿನ ಫಲವತ್ತತೆ ಪರೀಕ್ಷಿಸಿ, ಕಾರ್ಡ್‌ಗಳನ್ನು ವಿತರಿಸಿರುವುದು ವಿಶೇಷ. ಪರಂಪರಾನುಗತವಾದ ಕೃಷಿ ವಿಕಾಸ್ ಯೋಜನೆಯು ಸಾವಯವ ಕೃಷಿ ಪ್ರದೇಶವನ್ನು ವಿಸ್ತರಿಸುವ ಮಹತ್ತರ ಗುರಿಯನ್ನು ಹೊಂದಿದೆ. ಕೃಷಿ ವೆಚ್ಚ ತಗ್ಗಿಸಿ, ರೈತರಿಗೆ ಹೆಚ್ಚಿನ ವರಮಾನ ತಂದು ಕೊಡುವುದು ಮತ್ತು ಸಾವಯವ ಕೃಷಿ ಉತ್ಪನ್ನಗಳಿಗೆ ಉತ್ಕೃಷ್ಟ ದರ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯ ಅಡಿಯಲ್ಲಿ ದೇಶದ ರೈತ ಸಮುದಾಯವನ್ನು ಒಂದುಗೂಡಿಸಿ, ಸಾವಯವ ಕೃಷಿ ಬಗ್ಗೆ ಜಾಗೃತಿ ಮೂಡಿಸುವ ಹಾಗೂ ಅವರನ್ನು ಈ ಕೃಷಿಗೆ ಹಚ್ಚುವ ಕೆಲಸ ನಡೆಯುತ್ತಿದೆ. ಅವರಿಗೆ ಇದರಲ್ಲಿ ಇರುವ ವಾಣಿಜ್ಯ ಲಾಭಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ದೇಶಾದ್ಯಂತ ಈವರೆಗೆ 9,100 ರೈತರ ಗುಂಪುಗಳನ್ನು ರಚನೆ ಮಾಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಸರ್ಕಾರಗಳು ಆರ್ಥಿಕ ನೆರವು ಒದಗಿಸುತ್ತಿವೆ. ಸಾವಯವ ಕೃಷಿ ಉತ್ಪನ್ನಗಳನ್ನು ಬೇಡಿಕೆಯ ಮಾರುಕಟ್ಟೆಗಳಿಗೆ ಸಾಗಣೆ ಮಾಡಲು ಆರ್ಥಿಕ ನೆರವು ಸಿಗುತ್ತಿದೆ.

ರೈತರ ಜೀವನೋಪಾಯ ಮತ್ತು ಸುಸ್ಥಿರ ಆದಾಯ ದೃಢಪಡಿಸುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (ಪಿಎಂಎಫ್‌ಬಿವೈ)ಯು ಕೇಂದ್ರ ಸರ್ಕಾರದ ಮುಂಚೂಣಿ ಕಾರ್ಯಕ್ರಮವಾಗಿದೆ. ಇದು ಕೃಷಿಕರು ಬೆಳೆಯುವ ಎಲ್ಲಾ ಆಹಾರ ಧಾನ್ಯಗಳು, ತೈಲಬೀಜಗಳು ಮತ್ತು ಒಂದು ಋತುವಿಗೆ ಒಂದು ದರ ಆಧಾರದಲ್ಲಿ ವಾರ್ಷಿಕ ವಾಣಿಜ್ಯ ಬೆಳೆಗಳಿಗೆ ವಿಮಾ ರಕ್ಷಣೆ ಒದಗಿಸುತ್ತದೆ. ಈ ವಿಮೆಗೆ ಅತಿ ಕಡಿಮೆ ದರದ ಕಂತು ನಿಗದಿ ಮಾಡಲಾಗಿದೆ. ವಿವಿಧ ಬೆಳೆಗಳಿಗೆ ಎದುರಾಗುವ ಎಲ್ಲ ರೀತಿಯ ಗಂಡಾಂತರಗಳು ವಿಮೆಗೆ ಒಳಪಡುತ್ತವೆ. ಬಿತ್ತನೆಯಿಂದ ಹಿಡಿದು ಕೊಯಿಲಿನ ನಂತರ ಎದುರಾಗುವ ಎಲ್ಲಾ ಗಂಡಾಂತರಗಳಿಗೂ ಇದು ವಿಮಾ ರಕ್ಷಣೆ ಒದಗಿಸುತ್ತದೆ.

ಈವರೆಗೆ, ದೇಶಾದ್ಯಂತ 5.75 ಕೋಟಿ ರೈತರನ್ನು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗೆ ಒಳಪಡಿಸಲಾಗಿದೆ. ಇನ್ನೂ ಹೆಚ್ಚಿನ ರೈತರನ್ನು ಈ ಯೋಜನೆಗೆ ಒಳಪಡಿಸಲು ಸರ್ಕಾರ ಉದ್ದೇಶಿಸಿದೆ. 2016–17ರಲ್ಲಿ ಸರ್ಕಾರ 30% ಕೃಷಿ ಪ್ರದೇಶವನ್ನು ವಿಮೆಗೆ ಒಳಪಡಿಸಿದ್ದು, 2017–18ರ ಸಾಲಿಗೆ 40% ಪ್ರದೇಶವನ್ನು ವಿಮೆಗೆ ಒಳಪಡಿಸುವುದು ಸರ್ಕಾರದ ಗುರಿಯಾಗಿದೆ. ಎಲ್ಲಕ್ಕಿಂತ ವಿಶೇಷವಾಗಿ, ಈ ಯೋಜನೆಯು ಕೃಷಿ ವಲಯಕ್ಕೆ ಹೂಡಿಕೆಯನ್ನು ಪ್ರೋತ್ಸಾಹಿಸುತ್ತಿದೆ ಮತ್ತು ಆಕರ್ಷಿಸುತ್ತಿದೆ. ರೈತರ ಆದಾಯವನ್ನು ಹೆಚ್ಚಿಸಬೇಕಾದರೆ




ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳಿಗೆ ಇರುವ ನೈಜ ಬೇಡಿಕೆ ಆಧರಿತ ಉತ್ತಮ ಬೆಲೆಯನ್ನು ಮನಗಾಣುವುದು ಅತಿಮುಖ್ಯವಾದ ಪೂರ್ವಾಪೇಕ್ಷಿತ ಅಂಶ. ವಿದ್ಯುನ್ಮಾನ–ರಾಷ್ಟ್ರೀಯ ಕೃಷಿ ಮಾರುಕಟ್ಟೆ ಉಪಕ್ರಮವು ದೇಶದ 13 ರಾಜ್ಯಗಳ 410 ಮಂಡಿಗಳನ್ನು ಐಕ್ಯಗೊಳಿಸಿ, ಎಲ್ಲವನ್ನೂ ಏಕ ವಿದ್ಯುನ್ಮಾನ ವೇದಿಕೆಗೆ ತಂದಿದೆ. ಇದರಿಂದ ನಾನಾ

**2022ರ ವೇಳೆಗೆ ರೈತರ ವರಮಾನವನ್ನು ದುಪ್ಪಟ್ಟುಗೊಳಿಸುವ ಕೃಷಿ ಮತ್ತು ರೈತರ ಕ್ಷೇಮಾಭಿವೃದ್ಧಿ ಸಚಿವಾಲಯದ ಮೂರು ವರ್ಷಗಳ ಮಾರ್ಗಸೂಚಿ (2017-19)ಯ ಪ್ರಮುಖ ಅಂಶಗಳು**

- ಬೀಜ ಗ್ರಾಮ ಕಾರ್ಯಕ್ರಮವನ್ನು 30 ಸಾವಿರ ಗ್ರಾಮಗಳಿಂದ 60 ಸಾವಿರ ಗ್ರಾಮಗಳಿಗೆ ವಿಸ್ತರಿಸಲಾಗುವುದು ಬೀಜಗಳ ತಯಾರಿಕೆ ಮತ್ತು ಸಂಸ್ಕರಣೆ ಘಟಕಗಳನ್ನು ಪಂಚಯತ್ ಮಟ್ಟದಲ್ಲಿ ಸ್ಥಾಪಿಸಲಾಗುವುದು.
- ಸ್ಥಳೀಯ ಉದ್ಯಮಶೀಲರನ್ನು ಬಳಸಿಕೊಂಡು ಮಣ್ಣು ಪರೀಕ್ಷೆಗಾಗಿ ದೇಶಾದ್ಯಂತ ಒಂದು ಸಾವಿರ ಮಿನಿ ಪ್ರಯೋಗಾಲಯಗಳನ್ನು ಉತ್ತೇಜಿಸಲಾಗುವುದು.
- ಕೃಷಿ ಕ್ಷೇತ್ರಕ್ಕಾಗಿ ನಬಾರ್ಡ್ ಮೂಲಕ ಐದು ಸಾವಿರ ಕೋಟಿ ರೂ. ನಿಧಿಯನ್ನು ಸ್ಥಾಪಿಸಲಾಗುವುದು. 4.8 ದಶಲಕ್ಷ ಹೆಕ್ಟೇರ್ ಕೃಷಿ ಭೂಮಿಯನ್ನು ಸಣ್ಣ ನೀರಾವರಿಗೆ ಒಳಪಡಿಸಲಾಗುವುದು.
- ಬೆಳೆ ತೀವ್ರತೆಯನ್ನು ಪ್ರತಿವರ್ಷ ಒಂದು ದಶಲಕ್ಷ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಲಾಗುವುದು. 2020ರ ವೇಳೆಗೆ ಇದನ್ನು ಮೂರು ದಶಲಕ್ಷ ಹೆಕ್ಟೇರ್‌ಗೆ ವಿಸ್ತರಿಸಲಾಗುವುದು.
- ಐದು ಲಕ್ಷ ಮೆಟ್ರಿಕ್ ಟನ್ ಶೀಥಲೀಕರಣ ಘಟಕಗಳು, ಒಂದು ಸಾವಿರ ಸಂಗ್ರಹಾಗಾರಗಳು ಮತ್ತು 150 ಮಾಗಿಸುವ ಕೋಣೆಗಳನ್ನು ಸ್ಥಾಪಿಸಿ, ಕೃಷಿ ಉತ್ಪಾದನೆ ನಂತರದ ಮೂಲಸೌಕರ್ಯ ಬಲಪಡಿಸಲಾಗುವುದು.
- ಸಾವಯವ ಕೃಷಿಯನ್ನು 2.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಉತ್ತೇಜಿಸಲಾಗುವುದು. ಇದಕ್ಕಾಗಿ ವಿದ್ಯುನ್ಮಾನ ವೇದಿಕೆಗೆ 350 ಕೃಷಿ ಉತ್ಪಾದಕರ ಸಂಘಟನೆಗಳು ಮತ್ತು 585 ಕೃಷಿ ಮಾರುಕಟ್ಟೆಗಳನ್ನು ತರಲಾಗುವುದು.
- ಸಣ್ಣ ಮತ್ತು ಅತಿಸಣ್ಣ ರೈತರಿಗೆ ಅಲ್ಪಾವಧಿ ಸಾಲ ಸೌಲಭ್ಯ ಪ್ರಮಾಣವನ್ನು ಹೆಚ್ಚಿಸಲಾಗುವುದು. ಈಗಿರುವ 43% ಪ್ರಮಾಣವನ್ನು 2018-19ರ ಹೊತ್ತಿಗೆ 50%ಗೆ ಹೆಚ್ಚಿಸಲು ಗುರಿ ಹಾಕಿಕೊಳ್ಳಲಾಗಿದೆ.
- ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಅಡಿ ಬೆಳೆ ಪ್ರದೇಶ ವಿಸ್ತರಣೆ ಮತ್ತು ಹವಾಮಾನ ಆಧರಿತ ಬೆಳೆ ವಿಮಾ ಯೋಜನೆಯನ್ನು ಈಗಿರುವ 30%ನಿಂದ 2017-18ಕ್ಕೆ 40% ಹಾಗೂ 2018-19ರ ಹೊತ್ತಿಗೆ 50%ಗೆ ಹೆಚ್ಚಿಸುವ ಉದ್ದೇಶ.
- 2018 ಮಾರ್ಚ್ ಹೊತ್ತಿಗೆ ಹಾಲು ಸಂಗ್ರಹವನ್ನು 16 ಸಾವಿರ ಹಳ್ಳಿಗಳಿಂದ 50 ಸಾವಿರ ಹಳ್ಳಿಗಳಿಗೆ ವಿಸ್ತರಿಸಿ, ಹಾಲು ಖರೀದಿ ಮೂಲಸೌಕರ್ಯ ಬಲಪಡಿಸಲಾಗುವುದು
- ನೀಲಿ ಕ್ರಾಂತಿಯನ್ನು ಸುಸ್ಥಿರವಾಗಿಸಲು ಮೀನುಗಾರಿಕೆ ಉತ್ತೇಜನ.
- ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳ ಮದರಿಯಲ್ಲಿ ರಾಷ್ಟ್ರೀಯ ಜಾನುವಾರು ಅಭಿವೃದ್ಧಿ ಸಂಸ್ಥೆ ಸ್ಥಾಪನೆ.
- ಜೀನ್‌ಗಳ ಸಂಶೋಧನೆ ಮತ್ತು ಅಭಿವೃದ್ಧಿ, ತಂತ್ರಜ್ಞಾನಕ್ಕೆ ಒತ್ತು.
- ಪೌಷ್ಟಿಕಾಂಶ ಶ್ರೀಮಂತ ಆಹಾರಗಳಿಗೆ ಜೈವಿಕ ಭದ್ರತೆ ಕಾಪಾಡಲು ಸಂಶೋಧನೆ ಮತ್ತು ಆಭಿವೃದ್ಧಿಗೆ ಆದ್ಯತೆ
- ಜಾನುವಾರುಗಳಿಗೆ ಉಷ್ಣಾಂಶ ನಿರೋಧಕ ಲಸಿಕೆಗಳ ಅಭಿವೃದ್ಧಿಗೆ ಒತ್ತು.

ಮಾರುಕಟ್ಟೆಗಳ ಹಲವಾರು ಸಮಸ್ಯೆಗಳು ಬಗೆಹರಿದು, ವ್ಯಾಪಾರ, ವಹಿವಾಟು ಇದೀಗ ಸರಾಗ ಮತ್ತು ಸುಗಮವಾಗಿದೆ. ವಿದ್ಯುನ್ಮಾನ ಮಾರುಕಟ್ಟೆ ವೇದಿಕೆಗೆ ಈವರೆಗೆ ದೇಶಾದ್ಯಂತ 45 ಲಕ್ಷ ರೈತರು ಸ್ವಯಂ ಆಗಿ ನೊಂದಣಿಯಾಗಿದ್ದಾರೆ. ಸರ್ಕಾರದ ಈ ಸುಧಾರಣೆಯು ಯಶಸ್ವಿಪೂರ್ಣವಾಗಿ ರೈತರ ಆದಾಯವನ್ನು ಹೆಚ್ಚಿದೆ. ಜತೆಗೆ, ಅಕ್ರಮ ಮಾರಾಟ ಮತ್ತು ಮಧ್ಯವರ್ತಿಗಳ ಹಾವಳಿಯನ್ನು ತಡೆಯುತ್ತಿದೆ. ಇದರ ಹೆಚ್ಚುವರಿ ಪರಿಣಾಮ ಎಂಬಂತೆ, ಆಹಾರ ಪದಾರ್ಥಗಳ ಸಗಟು ದರ ಹೆಚ್ಚಾಗುತ್ತಿದೆ. ಕೃಷಿ ತಜ್ಞರ ಲೆಕ್ಕಾಚಾರಗಳ ಪ್ರಕಾರ, ಕೃಷಿ ಉತ್ಪನ್ನಗಳ ದರದಲ್ಲಿ 13% ಏರಿಕೆಯಾಗಿ ಇದರಿಂದ ಕೃಷಿಕರ ವರಮಾನದಲ್ಲಿ 9.1% ಹೆಚ್ಚಳ ಆಗಿದೆ. ಆದಾಗ್ಯೂ, ಕೃಷಿ ಉತ್ಪನ್ನಗಳ ಬೆಲೆ ಮತ್ತು ಕೃಷಿಕರ ಆದಾಯ ಮತ್ತಷ್ಟು ಏರಿಕೆ ಕಾಣಲು ಎಲ್ಲಾ ಅವಕಾಶ ಮತ್ತು ಸಾಧ್ಯತೆಗಳು ಇವೆ. ಈ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳಿಂದ



ರೈತರಿಗೆ ಇಚ್ಛಿತ ಫಲಿತಾಂಶ ಮತ್ತು ಪ್ರಯೋಜನ ದೊರಕಿಸಬೇಕಾದರೆ, ಈ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಕಾಲಮಿತಿಯಲ್ಲಿ ಜಾರಿ ಮಾಡುವುದು ಅಗತ್ಯ.

### ಆದಾಯ ಹೆಚ್ಚಳಕ್ಕೆ ಉತ್ಪಾದಕತೆ ಹೆಚ್ಚಿಸುವುದು ಅಗತ್ಯ

ರೈತರ ಆದಾಯವನ್ನು ದುಪ್ಪಟ್ಟುಗೊಳಿಸುವ ವಿಷಯವನ್ನೇ ಗುರಿಯಾಗಿಸಿಕೊಂಡು ನೀತಿ ಆಯೋಗವು ಇತ್ತೀಚೆಗೆ ನೀತಿ ಪತ್ರವೊಂದನ್ನು ಹೊರತಂದಿದೆ. ಈ ನೀತಿ ಪತ್ರದಲ್ಲಿ ರೂಪಿಸಿರುವ ಕ್ರಿಯಾಯೋಜನೆಯಲ್ಲಿ

ಕೆಳಮಟ್ಟದಿಂದ ಜಾರಿಗೆ ತರಬಹುದಾದ ಹಲವು ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಕೃಷಿ ಉತ್ಪಾದಕತೆ ಹೆಚ್ಚಿಸುವಲ್ಲಿ ನೀರಾವರಿ ಯೋಜನೆಗಳ ನಿರ್ಣಾಯಕ ಪಾತ್ರ ಮತ್ತು ಹೊಸ ಹೊಸ ತಂತ್ರಜ್ಞಾನಗಳ ಬಳಕೆಗೆ ನೀತಿ ಪತ್ರದಲ್ಲಿ ಒತ್ತು ನೀಡಲಾಗಿದೆ. ಅಧಿಕ ಇಳುವರಿ ನೀಡುವ ಹೊಸ ಮತ್ತು ಸುಧಾರಿತ ತಳಿಗಳನ್ನು ರೈತರು ಹೆಚ್ಚಾಗಿ ಬಳಸುತ್ತಿರುವ ಪ್ರವೃತ್ತಿ ಹೆಚ್ಚುತ್ತಿದೆ. ಇದಕ್ಕೆ ಬಿತ್ತನೆ ಬೀಜ ಕೈಗೆಟಕುವ ದರಕ್ಕೆ ಪೂರೈಕೆ ಆಗುವ ವ್ಯವಸ್ಥೆ ರೂಪಿತವಾಗಿರುವುದೇ ಕಾರಣ.

ಕೃಷಿ ವಲಯದ ಸರ್ವೋನ್ನತ ಸಂಶೋಧನಾ ಸಂಸ್ಥೆ ಎನಿಸಿರುವ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಕಳೆದ ಮೂರು ವರ್ಷಗಳಿಂದ ಸುಮಾರು 600 ಸುಧಾರಿತ ತಳಿಗಳನ್ನು ಅಭಿವೃದ್ಧಿಪಡಿಸಿ, ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ದೇಶದ ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೊಸ



ಎತ್ತರಕ್ಕೆ ಕೊಂಡೊಯ್ಯುವುದೇ ಇದರ ಹಿಂದಿನ ಉದ್ದೇಶ. ಇದಲ್ಲದೆ, ಹಲವಾರು ನೂತನ ಕೃಷಿ ತಂತ್ರಜ್ಞಾನಗಳನ್ನು ರೈತರ ಹೊಲಗಳಿಗೆ ನೇರವಾಗಿ ಮತ್ತು ವಿಸ್ತೃತವಾಗಿ ಪರಿಚಯಿಸುವ ಅಗತ್ಯವಿದೆ.

ನಿಖರ ಮತ್ತು ಸಮಗ್ರ ಕೃಷಿ ಚಟುವಟಿಕೆ, ಸಂಪನ್ಮೂಲಗಳ ಸಂರಕ್ಷಣಾ ತಂತ್ರಜ್ಞಾನಗಳು ಮತ್ತು ಸಂರಕ್ಷಿತ ಬೇಸಾಯ ಪದ್ಧತಿಯ ಅನುಸರಣೆಯು ಮಹತ್ವದ ಭರವಸೆ ಮತ್ತು ಸಾಮರ್ಥ್ಯವನ್ನು ಎತ್ತಿ ಹಿಡಿಯುವ ಕೆಲವು ಉದಾಹರಣೆಗಳಷ್ಟೆ. ಅಂತೆಯೇ, ಲೇಸರ್ ಭೂಮಿ ಸಮತಟ್ಟು ಮಾಡುವ ಹೊಸ ವ್ಯವಸ್ಥೆ, ನಿಖರ ಬೀಜ ಮತ್ತು ತೋಟಗಾರಿಕೆ, ಆಧುನಿಕ ಕೃಷಿ ವ್ಯವಸ್ಥೆ ಅಳವಡಿಕೆ ಮತ್ತಿತರ ಅಧುನಿಕ ಪದ್ಧತಿಯಿಂದ ಭರವಸೆಯ ಕೃಷಿ ವರಮಾನ ದೊರೆಯುವ ಜತೆಗೆ ರೈತನ ಆದಾಯವೂ ಏರಿಕೆ ಆಗಲಿದೆ.

ಪ್ರತಿ ತುಂಡಿನ ಭೂಮಿಯಲ್ಲಿ ಬೆಳೆಯ ತೀವ್ರತೆ ಹೆಚ್ಚಿಸುವುದು ತಾಂತ್ರಿಕವಾಗಿ ಬಲಿಷ್ಠವಾಗಿರುವ ಮತ್ತೊಂದು ಆಯ್ಕೆ. ಲಭ್ಯವಿರುವ ನೀರಾವರಿ ಸೌಲಭ್ಯ ಮತ್ತು ಅಧುನಿಕ ತಂತ್ರಜ್ಞಾನ ಬಳಸಿಕೊಂಡು, ರೈತರು ಪ್ರಮುಖ ಮುಂಗಾರು ಮತ್ತು ಹಿಂಗಾರು ಬೆಳೆಯ ನಂತರ ಅಲ್ಪಾವಧಿ ಬೆಳೆಗಳನ್ನು ಬೆಳೆಯಲು ಸಾಧ್ಯವಿದೆ. ಅಂತೆಯೇ, ಸಮಗ್ರ ಕೃಷಿ ವ್ಯವಸ್ಥೆ ಮಾದರಿಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಇದರಿಂದ ಹೆಚ್ಚಿನ ಲಾಭ ಪಡೆಯಲು ಸಾಧ್ಯವಿದೆ. ಇಂತಹ ಮಾದರಿಗಳಿಂದ ಪ್ರತಿಕೂಲ ಹವಾಮಾನದಲ್ಲೂ ಸ್ಥಿರ ಆದಾಯ ಗಳಿಸುವುದು ಸಾಧ್ಯವಿದೆ. ಮೌಲ್ಯಯುತ ಬೆಳೆಗಳೆನಿಸಿರುವ ತೋಟಗಾರಿಕೆ ಬೆಳೆಗಳ ಕಡೆಗೆ ಆಸಕ್ತಿ ಬೆಳೆಸಿಕೊಳ್ಳುವುದರಿಂದ (ಉದಾಹರಣೆಗೆ ಹಣ್ಣುಗಳು, ತರಕಾರಿಗಳು, ಫೈಬರ್, ಮಸಾಲ ಪದಾರ್ಥಗಳು, ಔಷಧೀಯ ಗಿಡಮೂಲಿಕೆಗಳನ್ನು ಬೆಳೆಯುವುದರಿಂದ) ರೈತರ ಆದಾಯವನ್ನು ಹೆಚ್ಚಿಸಿಕೊಳ್ಳಲು ಖಂಡಿತಾ ಸಾಧ್ಯವಿದೆ.

ಜತೆಗೆ, ಅರಣ್ಯ, ಕೃಷಿ ಉತ್ಪನ್ನಗಳ ಸಂಸ್ಕರಣೆ ಇತ್ಯಾದಿ ಮೂಲಗಳಿಂದಲೂ ಆದಾಯ ಹೆಚ್ಚಿಸಿಕೊಳ್ಳಬಹುದು. ಕೃಷಿ ರಂಗದಲ್ಲಿರುವ ಕಾರ್ಮಿಕ ಪಡೆಯನ್ನು ಅಲ್ಲಿಂದ ಹೊರಗೆ ತರುವ ಅಗತ್ಯವಿದೆ. ಹೀಗೆ ಮಾಡುವುದರಿಂದ ಅವರ ಜೀವನಾಧಾರ ಮತ್ತು ಆದಾಯ ಪ್ರಮಾಣವನ್ನು ಉತ್ತಮಗೊಳಿಸಲು ಸಾಧ್ಯವಿದೆ ಎಂದು ನೀತಿ ಆಯೋಗ ತನ್ನ ನೀತಿ ಪತ್ರದಲ್ಲಿ ಶಿಫಾರಸು ಮಾಡಿದೆ. ಕೇಂದ್ರ ಸರ್ಕಾರದ ಇತ್ತೀಚಿನ



ಉಪಕ್ರಮವಾದ ಕೌಶಲ್ಯಾಭಿವೃದ್ಧಿಯು ರೈತ ಸಮುದಾಯದ ಕೌಶಲ್ಯ ಸುಧಾರಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಕೃಷಿಯೇತರ ರಂಗದಲ್ಲಿ ಕೃಷಿ ಕಾರ್ಮಿಕರ ಆದಾಯ ಉತ್ತಮವಾಗಿಸಲು ಇದು ಮಹತ್ವದ ಪಾತ್ರ ವಹಿಸುತ್ತಿದೆ.

**ಹೊಸ ನೋಟ**


ಈ ಹಿಂದೆ ಆಹಾರ ಭದ್ರತೆ ಉದ್ದೇಶಕ್ಕಾಗಿ ಕೃಷಿ ಉತ್ಪನ್ನಗಳ ಉತ್ಪಾದಕತೆ ಹೆಚ್ಚಿಸುವುದು ಸರ್ಕಾರದ ಗುರಿಯಾಗಿತ್ತು. ಇದೇ ಕಾರಣಕ್ಕಾಗಿ ಸರ್ಕಾರ ವಿಶೇಷ ಗಮನ ಹರಿಸಿತ್ತು. ನಂತರದ ದಿನಗಳಲ್ಲಿ ನೀತಿ ನಿರೂಪಕರು, ರೈತರ ಆದಾಯವನ್ನು ಹೆಚ್ಚಿಸುವುದು ಅಗತ್ಯವಿದೆ ಎಂಬ ವಾಸ್ತವವನ್ನು ಮನಗಂಡು, ಕೃಷಿಕರ ಅಭ್ಯುದಯಕ್ಕೆ ಒತ್ತು ನೀಡಿದರು.

ಈ ನಿಟ್ಟಿನಲ್ಲಿ ಮೊದಲ ಕ್ರಮವಾಗಿ ಕೇಂದ್ರ ಸರ್ಕಾರ 2015ರಲ್ಲಿ, ಕೃಷಿ ಸಚಿವಾಲಯವನ್ನು ಕೃಷಿ ಮತ್ತು ರೈತರ ಕ್ಷೇಮಾಭಿವೃದ್ಧಿ ಸಚಿವಾಲಯ ಎಂದು ಮರುನಾಮಕರಣ ಮಾಡಿದೆ. ಅಲ್ಲಿಂದ ಸರ್ಕಾರ ರೈತರ ವರಮಾನವನ್ನು ದುಪ್ಪಟ್ಟುಗೊಳಿಸುವ ನಿರಂತರ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ.

2022ರ ವೇಳೆಗೆ ಗುರಿ ಸಾಧಿಸಲು ಅದು ನಾನಾ ಸುಧಾರಣೆಗಳು, ನೀತಿಗಳು ಮತ್ತು ಉಪಕ್ರಮಗಳನ್ನು ಜಾರಿ ಮಾಡುತ್ತಾ ಬಂದಿದೆ. ಸರ್ಕಾರದ ಚಿಂತನೆಯ ಪ್ರಕಾರ, ಕೃಷಿ ವಲಯದ ನಾನಾ ಸಮಸ್ಯೆಗಳನ್ನು ನೀಗಿಸಿ, ಕೃಷಿಯೇತರ ವೃತ್ತಿಗಳಿಗೆ ಇರುವ ಆದಾಯ ಪ್ರಮಾಣಕ್ಕೆ ರೈತರ ಆದಾಯವನ್ನು ಹೆಚ್ಚಿಸಲು ಗುರಿ ಹಾಕಿಕೊಂಡಿದೆ. ಒಟ್ಟಾರೆ, ಭಾರತೀಯ ಕೃಷಿ ರಂಗ ಹೊಸ ಅವತಾರದಲ್ಲಿ ನವಭಾರತದ ಕನಸಿನ ಸಾಕಾರಕ್ಕೆ ಸಂಪೂರ್ಣ ಸಜ್ಜಾಗಿದೆ. ❑

# ಆವಿಷ್ಕಾರ ಆಧರಿತ ಬದಲಾವಣೆ

* ಡಾ. ಉನ್ನತ್ ಪಂಡಿತ್




ಯುವ ಜನಾಂಗದ ಮನಸ್ಸಿನಲ್ಲಿ ಕುತೂಹಲ, ಸೃಜನಶೀಲತೆ ಮತ್ತು ಕಲ್ಪನೆಯನ್ನು ಸೃಷ್ಟಿಸುವುದು ಎಟಿಎಲ್‌ನ ಪ್ರಮುಖ ಉದ್ದೇಶ. ನಮ್ಮ ದೇಶವನ್ನು ಕಟ್ಟುವ ಪ್ರತಿಭೆಗಳಿಗೆ ಸ್ಪಷ್ಟವಾಗಿ ಮತ್ತು ಮನಃಪೂರ್ವಕವಾಗಿ ತಮ್ಮ ಚಿಂತನೆಗಳನ್ನು ತಿಳಿಸಲು ಮತ್ತು ಕಠಿಣವಾದ ಪ್ರಮುಖ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪರಿಕಲ್ಪನೆಯನ್ನು ಸಿದ್ಧಪಡಿಸಲು ಎಟಿಎಲ್ ವೇದಿಕೆಯಾಗಿದೆ.

ಭಾರತ ಮಾತೆಯು 2022ರಲ್ಲಿ ತನ್ನ 75ನೇ ಸ್ವಾತಂತ್ರ್ಯೋತ್ಸವ ಆಚರಿಸಿಕೊಳ್ಳುವ ಹಿನ್ನೆಲೆಯಲ್ಲಿ ಭಾರತ ಮತ್ತೆ ಶಕ್ತಿವಂತವಾಗಬೇಕು ಮತ್ತು ಇದು ನವ ಭಾರತ ನಿರ್ಮಾಣ ಮತ್ತು ಬದಲಾವಣೆ ತರುವುದಕ್ಕಾಗಿ ಸೂಕ್ತವಾದ ಕಾಲ.

'ನವ ಭಾರತ'ವು ಸ್ಫೂರ್ತಿ ನೀಡುವ, ಪ್ರೇರಣೆ ಒದಗಿಸುವ, ಆಡಳಿತದಲ್ಲಿ ಒಳಗೊಳ್ಳುವ, ಸರ್ಕಾರದ ಜೊತೆ ಪಾಲುದಾರಿಕೆಯ ಸಬಲೀಕರಣ ಮಾಡುವ ಮತ್ತು ಎಲ್ಲರನ್ನೂ ಒಳಗೊಂಡ ದೇಶದ ಸಮಗ್ರ ಅಭಿವೃದ್ಧಿಯಾಗಿದೆ.

*"ದೇಶದ ಪ್ರಗತಿಯ ಪಯಣದಲ್ಲಿ ಪ್ರತಿಯೊಬ್ಬ ನಾಗರಿಕನು ಒಂದಲ್ಲ ಒಂದು ರೀತಿಯಲ್ಲಿ ಕೊಡುಗೆ ನೀಡಬೇಕು" : ಪ್ರಧಾನ ಮಂತ್ರಿ.*

ನವ ಭಾರತವು ಪ್ರತಿಯೊಬ್ಬರಿಗೂ ಸಹಭಾಗಿಯಾಗಲು ಮತ್ತು ದೇಶಕ್ಕಾಗಿ ಸೇವೆ ಮಾಡಲು ಅವಕಾಶ ನೀಡುತ್ತದೆ. ಇದು ನವ ಭಾರತ ನಿರ್ಮಾಣದ ನಿಟ್ಟಿನಲ್ಲಿ ನೈಜ ಸ್ವಾತಂತ್ರ್ಯ, ಐಕ್ಯ ಸಾಧಿಸುವ ಅವಿಸ್ಮರಣೀಯ ಅವಕಾಶವಾಗಿದೆ. ಕೇಂದ್ರ ಸರ್ಕಾರದ ಚಿಂತನ–ಮಂಥನ ಭಾಗವಾದ ನೀತಿ (ಎನ್‌ಐಟಿಐ) ಆಯೋಗದಲ್ಲಿ ಸರ್ಕಾರದ ಹಿರಿಯ ನಾಯಕರು 'ಚಾಂಪಿಯನ್ಸ್ ಆಫ್ ಚೇಂಜ್' ಮೂಲಕ ಇದನ್ನು ವಾಸ್ತವ ನೆಲೆಗಟ್ಟಿನಲ್ಲಿ ಜಾರಿಗೆ ತರುವುದಕ್ಕಾಗಿ ಇದೇ ಮೊದಲ ಬಾರಿಗೆ ನಾನಾ ಕ್ಷೇತ್ರಗಳ ಉದ್ಯಮಿಗಳೊಂದಿಗೆ ನೇರ ಮಾತುಕತೆ ನಡೆಸಿ ಈ ಮೂಲಕ ಅವರ ಕನಸಿನ ನವ ಭಾರತ ಹೇಗಿರಬೇಕು ಎಂಬ ಅನಿಸಿಕೆಗಳನ್ನು ಹಂಚಿಕೊಂಡರು. ಸರ್ಕಾರದ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಈ ತಂಡ ಅವರ ಪ್ರಸ್ತಾವನೆಗಳನ್ನು ಆಲಿಸಿ, ದೇಶದ ಪರಿಣಾಮಕಾರಿ ನೀತಿ ನಿರೂಪಣೆಯಲ್ಲಿ ಅವುಗಳು ಖಚಿತವಾಗಿ ಲಾಭದಾಯಕವಾಗಿರುತ್ತವೆ ಹಾಗೂ ಸುಧಾರಣೆಯ ಪ್ರಕ್ರಿಯೆಯ ಸಂದರ್ಭದಲ್ಲಿ ಪ್ರತಿಯೊಂದು ವಿಷಯ / ಸವಾಲುಗಳ ಕುರಿತಂತೆ ಸಂಪೂರ್ಣ ನೋಟವನ್ನು ಇವು ಒದಗಿಸುತ್ತವೆ ಎಂದು ಮನದಟ್ಟು ಮಾಡಿಕೊಳ್ಳಲಾಯಿತು. ಈ ಕ್ರಮವು ಇನ್ನಷ್ಟು ಹೆಚ್ಚು ಸೃಜನಾತ್ಮಕ ಮತ್ತು ಆವಿಷ್ಕಾರಾತ್ಮಕ ತಂತ್ರಜ್ಞಾನಕ್ಕೆ ಅವಕಾಶ ಮಾಡಿಕೊಡುವುದರ ಜೊತೆಗೆ ತಮ್ಮ ಇಚ್ಛೆಯ ಕನಸಿನ ನವಭಾರತ ನಿರ್ಮಾಣವನ್ನು ಸಾಧಿಸುವ ನಿಟ್ಟಿನಲ್ಲಿ ಯುವ ಜನಾಂಗದಲ್ಲಿ ಕುತೂಹಲ, ಸೃಜನಶೀಲತೆ ಮತ್ತು ಊಹನೆಯ ಮೂಲಕ ವ್ಯವಸ್ಥಿತ ಸುಧಾರಣೆಯನ್ನು ಪೋಷಿಸಲು ನೆರವಾಗಲಿದೆ.

**ಆವಿಷ್ಕಾರಾತ್ಮಕ ಆಡಳಿತ ಮಾದರಿ:** ನಮ್ಮ ದೇಶದ ಸಮಗ್ರ ಸಾಮಾಜಿಕ ಪ್ರಗತಿಗಾಗಿ ಸರ್ಕಾರವು ಕ್ರಮವನ್ನು ಕೈಗೊಂಡಿದೆ. ದೇಶದ ಎಲ್ಲಾ ನಾಗರಿಕರಿಗೆ ಪರಿಣಾಮಕಾರಿ ಆಡಳಿತ ಸಿಗುವಂತೆ ಮಾಡುವ ನಿಟ್ಟಿನಲ್ಲಿ ಜಾರಿಯಲ್ಲಿರುವ ಆದರೆ ಪರಿಣಾಮಕಾರಿಯಲ್ಲದ 1,200ಕ್ಕೂ ಹೆಚ್ಚು ಕಾನೂನುಗಳ ರದ್ದತಿ ಪ್ರಧಾನ ಮಂತ್ರಿ ಜನ್‌ಧನ್ ಯೋಜನಾ ಮೂಲಕ ಸಮಾಜದ ಕಟ್ಟ ಕೊನೆಯ ವ್ಯಕ್ತಿಗೂ ಬ್ಯಾಂಕಿಂಗ್ ಮತ್ತು ಹಣಕಾಸು ವಲಯವು ಕೈಗೆಟಕುವಂತೆ ಮಾಡುವ, ಕೆಂಪು ಪಟ್ಟಿಯ ಸರ್ಕಾರಿ ಪ್ರಕ್ರಿಯೆಗಳನ್ನು ತೆಗೆದು ಹಾಕುವ ಮೂಲಕ ಸುಧಾರಣೆ ಕ್ರಮವನ್ನು ಸರ್ಕಾರ ಕೈಗೊಂಡಿದೆ. ಇದಲ್ಲದೆ ಪಾರದರ್ಶಕ ಪ್ರಗತಿ,

* ಅಟಲ್ ಆವಿಷ್ಕಾರ ಮಿಷನ್, ನೀತಿ ಆಯೋಗ, ಭಾರತ ಸರ್ಕಾರ. E-mail : pandit.unnat@nic.in




ಪಾಲುದಾರಿಕೆಯ ಅವಕಾಶ ನೀಡಿಕೆ ಮತ್ತು ಗವರ್ನಮೆಂಟ್ ಇ–ಮಾರ್ಕೆಟ್‌ಪ್ಲೇಸ್ (ಜಿಇಎಂ) ಮೂಲಕ ವ್ಯಾಪಾರ ನಡೆಸಲು ಅವಕಾಶ ಒದಗಿಸಿದೆ. ಪರಿಣಾಮಕಾರಿ ಆಡಳಿತವು ಪ್ರಗತಿಗೆ ಇನ್ನಷ್ಟು ಶಕ್ತಿ ತುಂಬಲಿದ್ದು, ಎಲ್ಲಾ ರಾಜ್ಯಗಳ ಮೇಲೂ ಸಕಾರಾತ್ಮಕ ಪರಿಣಾಮ ಬೀರಲಿವೆ. ಸಮಾಜಕ್ಕೆ ತಮ್ಮಿಂದ ಆಗುವ ಗರಿಷ್ಠ ಸೇವೆಯನ್ನು ಒದಗಿಸಲು ರಾಜ್ಯಗಳನ್ನು ಪ್ರೇರೇಪಿಸಲಾಗಿದೆ. ಲಿಂಗ ಅಸಮಾನತೆ ತೊಡೆಯುವಿಕೆ, ಕೃಷಿ ಕ್ಷೇತ್ರದ ಅಭಿವೃದ್ಧಿ, ಹವಾಮಾನ ವೈಪರೀತ್ಯ, ಪುನರ್‌ಬಳಕೆ ಮಾಡಬಹುದಾದ ಇಂಧನ, ಸಂಚಾರ ಅಥವಾ ಚಲನಶೀಲತೆ, ಸಂವಹನ, ಹಣಕಾಸು ಕ್ಷೇತ್ರದಲ್ಲಿ ಡಿಜಿಟಲ್ ಸ್ಥಿತ್ಯಂತರ ಮತ್ತು ಹಲವಾರು ಕ್ರಮಗಳು ನವ ಭಾರತ ನಿರ್ಮಾಣಕ್ಕೆ ಹಾದಿ ಮಾಡಿಕೊಟ್ಟಿವೆ. ನವ ಭಾರತವು ಯುವ ಜನಾಂಗದ ಕನಸು ಮತ್ತು ಮಹತ್ವಾಕಾಂಕ್ಷೆಯನ್ನು ಪೂರ್ಣಗೊಳಿಸಲಿದೆ.

'ಒಂದು ದಶ ಲಕ್ಷ ಮಕ್ಕಳು ಮತ್ತು ಯುವ ಜನಾಂಗವನ್ನು ನಾಳಿನ ದಿನಗಳಲ್ಲಿ ಹೊಸತನ ತರುವವರನ್ನಾಗಿ ರೂಪಿಸುವ' ಗುರಿಯನ್ನು ಭಾರತವು ಹೊಂದಿದೆ. ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ಯಾವ ರೀತಿ ಕಾರ್ಯೋನ್ಮುಖರಾಗಿದ್ದರೊ ಅದೇ ರೀತಿಯ ಸ್ಫೂರ್ತಿದಾಯಕ ಆವಿಷ್ಕಾರವು ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲಿದೆ. ದೇಶವು ವಿಶೇಷ ಭಾವನೆಯನ್ನು ಹೊಂದುವಂತೆ ಮಾಡಲು ಪ್ರತಿಯೊಬ್ಬರೂ ಕೆಲಸ ಮಾಡುವಂತೆ ಅವರು ಮಾಡಿದ್ದರು. ಅವರು ಸ್ವಾತಂತ್ರ್ಯ ಹೋರಾಟವನ್ನು ಸಾಮೂಹಿಕ ಆಂದೋಳನವನ್ನಾಗಿ ಮಾಡಿದ್ದರು ಹಾಗೂ ಅದರ ಫಲಿತಾಂಶವನ್ನು ನಾವು ಕಂಡಿದ್ದೇವೆ. ಅದೇ ರೀತಿ ಭಾರತದ ಅಭಿವೃದ್ಧಿಯನ್ನು ಸಾಮೂಹಿಕ ಆಂದೋಳನವನ್ನಾಗಿ ನಾವು ಮಾಡಬೇಕಾದುದು ಅವಶ್ಯಕವಾಗಿದೆ. ನಾವು ಒಟ್ಟಾಗಿ ಕೆಲಸ ಮಾಡಿದಾಗ ನಮ್ಮ ದೇಶ ಎದುರಿಸುತ್ತಿರುವ ಪ್ರತಿಯೊಂದು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ. ನವ ಭಾರತ ನಿರ್ಮಾಣದ ನಿಟ್ಟಿನಲ್ಲಿ ಎದುರಾಗುವ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಲು ನಾವು ಸಮಾಜದ ಭಾಗವಾಗಿ ನಮ್ಮ ಸಾಮರ್ಥ್ಯವನ್ನು ಉಪಯೋಗಿಸುವ ಜವಾಬ್ದಾರಿಯನ್ನು ಹೊಂದಿದ್ದೇವೆ. ಅಟಲ್ ಇನ್ನೋವೇಶನ್ ಮಿಶನ್, ರಾಷ್ಟ್ರೀಯ ಐಪಿಆರ್ ನೀತಿ, ಸ್ಟಾರ್ಟ್ ಅಪ್ ಇಂಡಿಯಾ (ನವೋದ್ಯಮ ಭಾರತ), ನೀತಿ ಆಯೋಗದ ಚಾಂಪಿಯನ್ಸ್ ಆಫ್ ಚೇಂಜ್ ಮತ್ತು ಡಿಜಿಟಲ್ ಆರ್ಥಿಕತೆ ಮೊದಲಾದ ಪ್ರಮುಖ ಯೋಜನೆಗಳು ಅಭಿವೃದ್ಧಿಯನ್ನು ಇನ್ನಷ್ಟು ಎತ್ತರಕ್ಕೆ ಒಯ್ಯಲಿದೆ.

### ಅಟಲ್ ಇನ್ನೋವೇಶನ್ ಮಿಶನ್ (ಎಐಎಂ)

ಆವಿಷ್ಕಾರ, ಉದ್ಯಮಶೀಲತೆ, ಶಿಕ್ಷಣ ವ್ಯವಸ್ಥೆಯ ಸುಧಾರಣೆಯ ಮೂಲಕ ದೇಶದ ಪ್ರಗತಿಯನ್ನು ಉತ್ತೇಜಿಸುವ ಗುರಿಯೊಂದಿಗೆ ಎಐಎಂ ಸ್ಥಾಪನೆಯಾಗಿದೆ.

'ಮಕ್ಕಳಿಗಾಗಿ ಯಾವ ರೀತಿ ಯೋಚನೆ ಮಾಡಬೇಕು ಮತ್ತು ಯೋಚನೆ ಮಾಡಲು ಈಗ ಏನು ಮಾಡಬೇಕು ಎಂಬುದನ್ನು ಕಲಿಸಲೇಬೇಕು'. ಆದರೆ ಬದಲಾಗಿ "ಎಚ್ಚರವಾಗಿರು, ಹೊರಗಡೆ ಹೋಗಬೇಡ, ಅದನ್ನು ಹತ್ತಬೇಡ, ಕೊಳೆ ಮಾಡಿಕೊಳ್ಳಬೇಡ, ಅದನ್ನು ಮಾಡಬೇಡ, ಇದನ್ನು ಮಾಡಬೇಡಿ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ...' ಎನ್ನುವುದರಲ್ಲಿ ನಾವು ಮುಗಿಸಿ ಬಿಡುತ್ತಿದ್ದೇವೆ. ಈ ಬೇಕು–ಬೇಡಗಳ ಪಟ್ಟಿ ಮುಂದುವರಿಯುತ್ತಲೇ ಹೋಗುತ್ತದೆ. ಈ ನಿರ್ದೇಶನಗಳು ನಮ್ಮ ಅನುಭವವನ್ನು ಆಧರಿಸಿವೆ. ನಿಧಾನವಾಗಿ ಇದು ಮಕ್ಕಳ ಚಿಂತನೆಯ ಮೇಲೆ ಪ್ರಭಾವ ಬೀರಿ ಅವರು ಭಯ, ತಾರತಮ್ಯ ಮತ್ತು ಕುತೂಹಲ ಮತ್ತು ಆತ್ಮವಿಶ್ವಾಸವನ್ನು ಕಳೆದುಕೊಳ್ಳುವ ನಡವಳಿಕೆಯನ್ನು ರೂಪಿಸಿಕೊಳ್ಳುವಂತೆ ಮಾಡುತ್ತದೆ. ಇದರ ಫಲಿತಾಂಶವಾಗಿ ಕಡಿಮೆ ಸಂಖ್ಯೆಯ ಗೆಳೆಯರು, ಸಾಮಾಜಿಕ ಗುಂಪುಗಳಲ್ಲಿ ಮಿಳಿತವಾಗುವ ಪ್ರಮಾಣ ಕಡಿಮೆಯಾಗುವುದು, ಪುಸ್ತಕಗಳನ್ನು ಕಡಿಮೆ ಓದುವುದು ಮೊದಲಾದ ಅಂಶಗಳಿಗೆ ಕಾರಣವಾಗುತ್ತವೆ. ಇಂತಹ ಮಕ್ಕಳಲ್ಲಿ ಸ್ಫೂರ್ತಿ, ಉತ್ಸಾಹದ ಕೊರತೆ ಉಂಟಾಗಿ ಅವರು ಕಡಿಮೆ ಪ್ರೇರಣೆ ಪಡೆಯುವಂತಾಗಬಹುದು.

ಆವಿಷ್ಕಾರ ಇಲ್ಲದಿದ್ದರೆ ಚಲನಶೀಲತೆ ಇರುವುದಿಲ್ಲ : ಅತ್ಯುತ್ತಮ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಸಂಶೋಧನೆ ಮತ್ತು ವಾಂಶಿಕ ಕೌಶಲ್ಯಗಳ ಕುರಿತಾದ ಮೂರು ಬಹು ಅವಶ್ಯಕವಾದ ಮನಸ್ಥಿತಿಯನ್ನು ಒದಗಿಸುತ್ತಾರೆ. ಅವುಗಳೆಂದರೆ 1) ವಿಶ್ಲೇಷಣಾತ್ಮಕವಾಗಿ ಯೋಚನೆ ಮಾಡುವ ಸಾಮರ್ಥ್ಯ, 2) ಸುರಕ್ಷತೆಯ ಭಾವನೆ, 3) ಪ್ರತಿಯೊಂದು ಸನ್ನಿವೇಶದಲ್ಲಿ ಶಾಂತವಾಗಿ ಯೋಚನೆ ಮಾಡುವ ಸಾಮರ್ಥ್ಯ. ಅವರ ಹವ್ಯಾಸ ಮತ್ತು ಆಸಕ್ತಿಯ ಹೊರತಾಗಿಯೂ ಮಕ್ಕಳಿಗೆ ಹೆತ್ತವರು ಮತ್ತು ಶಿಕ್ಷಕರಿಬ್ಬರೂ ಸರಿಯಾದ ಅಂಶವನ್ನು ಸರಿಯಾದ ರೀತಿಯಲ್ಲಿ ಗಮನಿಸುವುದನ್ನು ಕಲಿಸಲೇಬೇಕು.

'ಸಾಮಾನ್ಯವಾಗಿ ಮಕ್ಕಳು ಹಲವಾರು ಸರಳ ಮತ್ತು ಮೂರ್ಖತನದ ಪ್ರಶ್ನೆಗಳನ್ನು ದಿನ ನಿತ್ಯ ಕೇಳುತ್ತಿರುತ್ತಾರೆ. ಆದರೆ 10 ಅಥವಾ 12 ವರ್ಷ ವಯಸ್ಸಾಗುವಾಗ ಆಕೆ ಅಥವಾ ಆತ ಚಿಂತನೆಗೆ ಗ್ರಾಸವಾಗುವ ಪ್ರಶ್ನೆಗಳನ್ನು ಕೇಳುವುದರ ಬದಲಾಗಿ ಪ್ರಮುಖವಾಗಿ ಸರಿಯಾದ ಉತ್ತರ ಪಡೆಯಲು ಬಯಸುತ್ತಾರೆ'

### ಚಿಕ್ಕ ತಲೆಯಲ್ಲಿ ದೊಡ್ಡ ಯೋಚನೆ ಬೆಳೆಸುವುದು

ಹುದುಗಿಸಲಾಗಿರುವ ನೆಲ ಬಾಂಬುಗಳನ್ನು ಕೈಯಿಂದ ತೆಗೆಯುವುದು, ಅಂತಹ ಪ್ರದೇಶಗಳನ್ನು ಇಂಚು ಇಂಚಾಗಿ ಶೋಧಿಸುವುದು ತುಂಬಾ ನಿಧಾನ ಪ್ರಕ್ರಿಯೆ ಮಾತ್ರವಲ್ಲ, ಕಠಿಣ, ಅಪಾಯಕಾರಿ ಮತ್ತು ಹೆಚ್ಚು ಮಾನವ ಸಂಪನ್ಮೂಲವನ್ನು ಬೇಡುವ ಪ್ರಕ್ರಿಯೆ. ನೆಲ ಬಾಂಬು ಹುದುಗಿಸಿರುವ ಪ್ರದೇಶ ಗಿಡ ಮರಗಳಿಂದ ಕೂಡಿರುತ್ತದೆ ಮತ್ತು ಅದನ್ನು ಲೋಹ ಶೋಧಕಗಳಿಂದ ಪರೀಕ್ಷಿಸಬೇಕು. ಅಪಾಯಕಾರಿ ವಸ್ತು ಕಂಡು ಬಂದರೆ ಅದನ್ನು ತುಂಬಾ ಎಚ್ಚರದಿಂದ ನಿಷ್ಕ್ರಿಯಗೊಳಿಸಬೇಕು.

ಛತ್ತೀಸ್‌ಗಢದ ಹಾಥ್‌ಬಂದ್ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಗೆ ಈ ಸಮಸ್ಯೆಯನ್ನು ಎದುರಿಸಲು ಬೇಕಾದ ಕೌಶಲ್ಯವನ್ನು ಕಲಿಸಲು ನಿರ್ಧರಿಸಲಾಯಿತು ಮತ್ತು ಶಬ್ದ ತಂತ್ರಜ್ಞಾನವನ್ನು ಬಳಕೆ ಮಾಡುವ ನೆಲ ಬಾಂಬು ಶೋಧಕ ಉಪಕರಣವನ್ನು ಕಂಡು ಹಿಡಿಯಲಾಯಿತು. ಇದರಲ್ಲಿ ಸೆನ್ಸಾರ್ ತಂತ್ರಜ್ಞಾನವನ್ನು ಬಳಕೆ ಮಾಡಲಾಗುತ್ತಿದ್ದು, ಇದು ಶಬ್ದದ ಅಲೆಗಳ ತರಂಗಾಂತರದಲ್ಲಿ

ಆಗುವ ಬದಲಾವಣೆಯನ್ನು ಕಂಡು ಹಿಡಿದು ಕರೆಗಂಟೆಯೊಂದರ ಮೂಲಕ ನೆಲ ಬಾಂಬು ಹುದುಗಿರುವ ಸ್ಥಳವನ್ನು ತೋರಿಸುತ್ತದೆ. ಈ ಉಪಕರಣವನ್ನು ಸ್ಮಾರ್ಟ್‌ಫೋನ್ ಅಥವಾ ಬ್ಲೂ ಟೂತ್ ಮೂಲಕ ದೂರ ನಿಯಂತ್ರಕದ ಮೂಲಕ ನಿಯಂತ್ರಿಸಬಹುದಾಗಿದೆ, ಇದರಿಂದ ಇವುಗಳ ಪತ್ತೆ ಈಗಿರುವ ವ್ಯವಸ್ಥೆಗಿಂತ ತುಂಬಾ ಹೆಚ್ಚು ವೇಗವಾಗಿ ಸಾಧ್ಯವಾಗುತ್ತಿದೆ. ಈ ಪ್ರಾಯೋಗಿಕ ಮಾದರಿಯ ಉಪಕರಣಗಳು 9 ವೋಲ್ಟ್ ಬ್ಯಾಟರಿಯನ್ನು ಹೊಂದಿದ್ದು, 5 ನಿಮಿಷಗಳಿಗಿಂತಲೂ ಕಡಿಮೆ ಅವಧಿಯಲ್ಲಿ ಇದನ್ನು ಜೋಡಿಸಲು ಸಾಧ್ಯವಿದೆ.

ವಿಶ್ವದೆಲ್ಲಡೆ ದೃಷ್ಟಿ ವಿಕಲಚೇತನರು ಅವಘಡಗಳಿಂದ ಪಾರಾಗಲು ಒಂದು ಕೋಲನ್ನು ಬಳಸುತ್ತಾರೆ. ಆದಾಗ್ಯೂ, ಇದು ಸಂಪೂರ್ಣ ದೋಷ ರಹಿತವಲ್ಲ. ಈ ಕೋಲು ಹಿಡಿದುಕೊಂಡು ನಡೆದಾಡಿದರೂ ಆಕಸ್ಮಿಕಗಳನ್ನು ತಪ್ಪಿಸಿಕೊಳ್ಳುವುದು ಪ್ರತಿ ಭಾರಿಯೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಂದು ಸರಳ ಆದರೆ ಪರಿಣಾಮಕಾರಿಯಾದ ತಂತ್ರಜ್ಞಾನ ಆಧಾರಿತ ಪರಿಹಾರವೊಂದು ಇಂತಹ ಜನರಿಗೆ ಪರಿಣಾಮಕಾರಿಯಾಗಿ ಮಾರ್ಗದರ್ಶನ ನೀಡಲು ಅವಶ್ಯಕವಾಗಿದೆ.



ಬೆಂಗಳೂರಿನ ಉತ್ತರ ಹಳ್ಳಿಯ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಅಟಲ್ ಚಿಂತನಾ ವೇದಿಕೆಯನ್ನು ಬಳಸಿಕೊಂಡು ಇಂತಹ ಜನರಿಗಾಗಿ ಧರಿಸಬಹುದಾದ ಉಪಕರಣವನ್ನು ಸೃಷ್ಟಿಸಿದೆ. ಈ ಉಪಕರಣವು ಅಲ್ಟ್ರಾಸಾನಿಕ್ ಅಲೆಗಳನ್ನು (ಶಬ್ದಾತೀತ) ಉಪಯೋಗಿಸಿಕೊಂಡು ಮುಂದಿರುವ ಅಡೆತಡೆಯನ್ನು ಗುರುತಿಸುತ್ತದೆ. ಇದನ್ನು ಕಂಪನ ಮತ್ತು ಶಬ್ದಗಳ ಮೂಲಕ ಬಳಕೆದಾರರ ಗಮನಕ್ಕೆ ತಂದು ಈ ಮೂಲಕ ಅವಘಡಗಳನ್ನು ತಪ್ಪಿಸಲು ನೆರವಾಗುತ್ತದೆ.

ಸರಳ ಆದರೆ ಪರಿಣಾಮಕಾರಿಯಾದ ಪರಿಹಾರವನ್ನು ದೃಷ್ಟಿ ವಿಕಲಚೇತನರಿಗೆ ಒದಗಿಸಲು ಸಾಧ್ಯವಾಗಿರುವ ಇಂತಹ ಒಂದು ಉಪಕರಣ ಸಿದ್ಧಪಡಿಸಿದ ಬಗ್ಗೆ ಎಟಿಎಲ್ ವಿದ್ಯಾರ್ಥಿಗಳಿಗೆ ಅತೀವ ಹೆಮ್ಮೆಯಿದೆ.

ಪ್ರಸಕ್ತ ಎಲ್ಲಾ ಕಚೇರಿಗಳಲ್ಲಿ ಮತ್ತು ಮಲ್ಟಿಪ್ಲೆಕ್ಸ್ ಕಟ್ಟಡಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅಗ್ನಿಶಾಮಕ ಉಪಕರಣಗಳು ಇವೆ. ಇವುಗಳು ಸಂಚಾರ ದಟ್ಟಣೆ, ಕಿರಿದಾದ ರಸ್ತೆಗಳ ಹಿನ್ನೆಲೆಯಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿಯ ಅಲಭ್ಯತೆಯ ಸಂದರ್ಭದಲ್ಲಿ ನೆರವಿಗೆ ಬರುತ್ತದೆ. ಅಗ್ನಿ ಅನಾಹುತದಂತಹ ಸವಾಲನ್ನು ಎದುರಿಸಲು ಕಡಿಮೆ ವೆಚ್ಚದ ಮತ್ತು ಪರಿಣಾಮಕಾರಿ ಶಾಶ್ವತ ಪರಿಹಾರ ಅವಶ್ಯಕವಿದೆ.

ಚಂಡೀಗಢದ 37 ಬಿ ವಲಯದ ಸರ್ಕಾರಿ ಹಿರಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು, ಅಟಲ್ ಚಿಂತನಾ ಪ್ರಯೋಗಾಲಯದ ಮೂಲಕ ಶಬ್ದದ ತರಂಗವನ್ನು ಆಧರಿಸಿದ ದೂರ ನಿಯಂತ್ರಕದ ಮೂಲಕ ಅಗ್ನಿಶಮನ ಮಾಡುವ ಉಪಕರಣವನ್ನು ಅಭಿವೃದ್ಧಿ ಪಡಿಸಲು ಯತ್ನಿಸಿದ್ದಾರೆ.

ಈ ವಿದ್ಯಾರ್ಥಿಗಳು ಶಬ್ದ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಅಗ್ನಿಯನ್ನು ಶಮನಗೊಳಿಸಲು ನೆರವು ನೀಡುವ ಯಂತ್ರ ಮಾನವನನ್ನು ವಿನ್ಯಾಸಗೊಳಿಸಿದ್ದಾರೆ. ಈ ಯಂತ್ರ ಮಾನವನನ್ನು ಅಗ್ನಿ ಅವಘಡ ಸಂಭವಿಸಿದ ಸ್ಥಳದಿಂದ ಸಾಕಷ್ಟು ದೂರದಿಂದಲೇ ದೂರ ನಿಯಂತ್ರಕದ ಮೂಲಕ ನಿಯಂತ್ರಿಸಬಹುದಾಗಿದೆ. ಈ ವಿನೂತನ ತಂತ್ರಜ್ಞಾನ ಆಧರಿತ ಉಪಕರಣವು ಕಡಿಮೆ ಭಾರದ್ದಾಗಿದ್ದು, ಕೊಂಡೊಯ್ಯಲು ತುಂಬಾ ಸುಲಭವಾಗಿದೆ.

ನಗರಗಳ ರಸ್ತೆಗಳಲ್ಲಿ ನೀರು ಕಟ್ಟಿಕೊಳ್ಳುವುದು ಇತ್ತೀಚೆಗೆ ತುಂಬಾ ದೊಡ್ಡ ಸಮಸ್ಯೆಯಾಗಿದೆ. ಅಹಮದಾಬಾದ್‌ನ ಬೆಸ್ಟ್ ಹೈಸ್ಕೂಲ್ ವಿದ್ಯಾರ್ಥಿಗಳು ಅತಿಯಾದ ಮಳೆಯಾಗಲೆಲ್ಲ ಇಂತಹ ಸಮಸ್ಯೆಯನ್ನು ಪದೇ ಪದೇ ಅನುಭವಿಸಿದ್ದರು. ಶಾಲೆಗೆ ಸಂಪರ್ಕ ಕಲ್ಪಿಸುವ ರಸ್ತೆಯು ನೆಲದ ಸಾಮಾನ್ಯ ಮಟ್ಟಕ್ಕಿಂತ ಕೆಳಗಿದ್ದು, ಮಳೆ ಬಂದಾಗ ರಸ್ತೆಯಲ್ಲಿ ನೀರು




ತುಂಬಿಕೊಳ್ಳುತ್ತಿತ್ತು. ಇದರಿಂದ ಕೆಲವೊಮ್ಮೆ ಜನರ ಓಡಾಟ ಕೂಡ ಕಷ್ಟವಾಗುತ್ತಿತ್ತು, ನೀರಿನ ಜೊತೆಗೆ ಸಂಚಾರ ದಟ್ಟಣೆ ಅವರ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸುತ್ತಿತ್ತು.

ಅಟಲ್ ಚಿಂತನಾ ಪ್ರಯೋಗಾಲಯದಲ್ಲಿ ಈ ಕುರಿತು ಕೆಲಸ ಮಾಡಿದ ವಿದ್ಯಾರ್ಥಿಗಳು ಯಾವ ಯಾವ ರಸ್ತೆಯಲ್ಲಿ ಎಷ್ಟು ಪ್ರಮಾಣದ ನೀರು ಮಳೆ ಬಂದಾಗ ನಿಂತಿದೆ ಎಂಬುದನ್ನು ಮಹಾನಗರ ಪಾಲಿಕೆಯ ನಿಯಂತ್ರಣ ಕೊಠಡಿ, ಪ್ರದೇಶದ ಉಸ್ತುವಾರಿ ಅಧಿಕಾರಿಗೆ ಮಾಹಿತಿ ನೀಡುವ ಪ್ರಯೋಗಾತ್ಮಕ ಮಾದರಿಯ ಉಪಕರಣವನ್ನು ತಯಾರು ಮಾಡಿದರು. ಇದರಿಂದ ತಡವಾಗುವ ಮೊದಲೇ ಸಂಬಂಧಪಟ್ಟವರು ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿದೆ.

ಇದೇ ರೀತಿ ಪ್ರಯತ್ನವನ್ನು ಅಸ್ಸಾಂನ ರೈಲ್ವೇಸ್ ಮಾಲಿಗಾಂನ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳು ಕೂಡ ಮಾಡಿದ್ದಾರೆ. ರಸ್ತೆಯಲ್ಲಿ ನಿಂತಿರುವ ನೀರಿನ ಮಟ್ಟವನ್ನು ಅಳೆಯುವ ಸ್ಮಾರ್ಟ್ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿರುವ ಅವರು, ನಗರದ ಯಾವ ಪ್ರದೇಶದಲ್ಲಿ ನೀರಿನ ಪ್ರಮಾಣ ಎಷ್ಟಿದೆ ಎಂಬ ಮಾಹಿತಿಯನ್ನು ಸಾರ್ವಜನಿಕರಿಗೆ ಮೊಬೈಲ್ ಫೋನ್ ಸಂಪರ್ಕದ ಮೂಲಕ ಅಥವ ಫೋನ್ ಸಂದೇಶ ರವಾನೆಯ ಮೂಲಕ ಕಳುಹಿಸಿ ಸಂಚಾರ ದಟ್ಟಣೆ ತಪ್ಪುವಂತೆ ಮಾಡಿದ್ದಾರೆ. ಇದೇ ರೀತಿಯಲ್ಲಿ ಸಮೀಪದ ಅರಣ್ಯ ಪ್ರದೇಶಗಳಿಂದ ಚಿರತೆಗಳು ನಗರಕ್ಕೆ ಬರುವ ಪ್ರದೇಶಗಳನ್ನು ಪತ್ತೆ ಹಚ್ಚುವ ಉಪಕರಣವನ್ನು ಕೂಡ ಅಭಿವೃದ್ಧಿ ಪಡಿಸಿದ್ದಾರೆ. ಯಾವ ಭಾಗದಿಂದ ಚಿರತೆಗಳು ಪ್ರವೇಶಿಸುತ್ತಿವೆ ಎನ್ನುವುದನ್ನು ಪತ್ತೆ ಹಚ್ಚಲು ಅರಣ್ಯ ಇಲಾಖೆ ಸಿಬ್ಬಂದಿಗೆ ಎಚ್ಚರಿಕೆ ಗಂಟೆಯ ಮೂಲಕ ಇದು ನೆರವಾಗುತ್ತದೆ. ಈ ಮೂಲಕ ನಾಗರಿಕರಿಗೆ ಚಿರತೆಗಳಿಂದ ಆಗಬಹುದಾದ ಅಪಾಯವನ್ನು ತಪ್ಪಿಸುವ ನಿಟ್ಟಿನಲ್ಲಿ ಬೇಕಾದ ಕ್ರಮವನ್ನು ಅರಣ್ಯ ಅಧಿಕಾರಿಗಳು ಕೈಗೊಳ್ಳಲು ಸಾಧ್ಯವಾಗುತ್ತಿದೆ.

ಈ ಪರಿಹಾರಗಳೆಲ್ಲೂ ಚಿಕ್ಕದು ಎಂದೆನಿಸಿದರೂ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಗಣನೀಯವಾಗಿದೆ. ಡಾ. ಎಪಿಜೆ ಅಬ್ದುಲ್ ಕಲಾಂ ಅವರು ಸಮಾಜವನ್ನು ತಂತ್ರಜ್ಞಾನ ಪೂರಕವಾಗಿ ಮಾಡಲು ತಮ್ಮ ಜೀವನವನ್ನು ಮುಡಿಪಿಟ್ಟರು. ಜೊತೆಗೆ ನಮ್ಮ ದೇಶದ ವಿದ್ಯಾರ್ಥಿಗಳು ಮತ್ತು ಯುವ ಜನಾಂಗಕ್ಕೆ ಪ್ರೇರಣೆ ಹಾಗೂ ಸ್ಫೂರ್ತಿ ನೀಡುವುದರಲ್ಲಿ ನಂಬಿಕೆ ಇಟ್ಟಿದ್ದರು.

ಪ್ರತಿಯೊಬ್ಬರೂ ತಮ್ಮ ಸೃಷ್ಟಿ ಮತ್ತು ಸಂಶೋಧನೆಯನ್ನು ತಮ್ಮ ಸಹದ್ಯೋಗಿ, ಸಹಪಾಠಿ ಅಥವಾ ಶಿಕ್ಷಕರ ಜೊತೆ ಹಂಚಿಕೊಂಡು ಮಗುವಿನ ರೀತಿ ಖುಷಿ ಪಡಬೇಕು. ಇದು ಅತಿ ದೊಡ್ಡ ಪ್ರೇರಣಾ ಶಕ್ತಿ. ಸಮಾಜ ಜೀವಿಯಾಗಿ ನಾವು ಯಾವಾಗಲೂ ಸಕಾರಾತ್ಮಕ ಸ್ಫೂರ್ತಿ ಮತ್ತು ಮಾನ್ಯತೆಯನ್ನು ಪಡೆಯಲು ಹವಣಿಸುತ್ತೇವೆ. ಇದು ಮಕ್ಕಳಿಗೆ ನೀಡುವ ಅತಿ ದೊಡ್ಡ ಪ್ರಶಸ್ತಿ. ಶಿಕ್ಷಕರು ಮತ್ತು ಹೆತ್ತವರು ಕೆಲಸವನ್ನು ಸಕಾರಾತ್ಮಕ ಅಭಿಪ್ರಾಯ, ಬೆಂಬಲದೊಂದಿಗೆ ಅಭಿಮಾನದಿಂದ ನೋಡಿದರೆ ಆಗ ಮಕ್ಕಳು ಎಸ್‌ಟಿಇಎಂ ಕುರಿತು ಪ್ರೀತಿ ಮತ್ತು ಗೌರವ ಬೆಳೆಸಿಕೊಳ್ಳುತ್ತಾರೆ. ಅಭಿಪ್ರಾಯ ವ್ಯಕ್ತಪಡಿಸುವಿಕೆ ಅಥವಾ ಶಾಲಾ ಕೊಠಡಿಯಲ್ಲಿ ಒಂದು ಶ್ಲಾಘನೆಯ ಮಾತಿನ ಮೂಲಕ ಈ ಉತ್ತೇಜನ ನೀಡಬಹುದು. ಇಂತಹ ಪ್ರೋತ್ಸಾಹಗಳು ಭವಿಷ್ಯದಲ್ಲಿ ವಿದ್ಯಾರ್ಥಿಗಳಿಗೆ ಶಕ್ತಿ, ಉತ್ತೇಜನ ಮತ್ತು ಹೆಮ್ಮೆಯನ್ನು ಇನ್ನಷ್ಟು ಹೆಚ್ಚಿಸಲು ನೆರವಾಗಿ ಹೊಸ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುವಂತೆ ಮಾಡುತ್ತದೆ. ಇದು ತಮ್ಮ ವೃತ್ತಿ ಜೀವನದಲ್ಲಿ ಉನ್ನತ ಮಟ್ಟಕ್ಕೆ ಏರಲು ವೃತ್ತಿಪರರಿಗೆ ಕೂಡ ನೆರವಾಗುತ್ತವೆ.

ಸ್ಟೀವ್ ಜಾಬ್ಸ್, ಬಿಲ್ ಗೇಟ್ಸ್, ಮೈಕಲ್ ಡೆಲ್ ಮತ್ತು ಇತರ ಹಲವು ಉದ್ಯಮಪತಿಗಳು ರಾತ್ರಿ–ಬೆಳಗಾಗುವುದರೊಳಗೆ ಅಷ್ಟು ಎತ್ತರಕ್ಕೆ ಬೆಳೆದು ನಿಂತವರಲ್ಲ. ವಿದ್ಯಾರ್ಥಿಗಳು ಅನುಭವದಿಂದ ಕಲಿಯಬೇಕು. ಇದು ಅವರನ್ನು ಕಲಿಕೆಯ ಹಂತದಲ್ಲಿ ಆರಂಭಿಕರಾಗಿ ಮುಂದೆ ತಜ್ಞರಾಗುವಂತೆ ರೂಪಿಸುತ್ತದೆ. ಪ್ರತಿಯೊಬ್ಬರಿಗೂ ವ್ಯಕ್ತಿ ರೂಪಿಸಿಕೊಳ್ಳಲು ವರ್ಷಗಳ ಕಾಲಾವಕಾಶ ಬೇಕಾಗುತ್ತದೆ. ತಮ್ಮ ಉತ್ತಮ ತಪ್ಪುಗಳನ್ನು ವ್ಯರ್ಥ ಮಾಡದೆ ಅದರಿಂದ ಪಾಠವನ್ನು ಕಲಿತುಕೊಳ್ಳಬೇಕು.

ಯುವ ಜನಾಂಗದ ಮನಸ್ಸಿನಲ್ಲಿ ಕುತೂಹಲ, ಸೃಜನಶೀಲತೆ ಮತ್ತು ಕಲ್ಪನೆಯನ್ನು ಸೃಷ್ಟಿಸುವುದು ಎಟಿಎಲ್‌ನ ಪ್ರಮುಖ ಉದ್ದೇಶ. ನಮ್ಮ ದೇಶವನ್ನು ಕಟ್ಟುವ ಪ್ರತಿಭೆಗಳಿಗೆ ಸ್ಪಷ್ಟವಾಗಿ ಮತ್ತು ಮನಃಪೂರ್ವಕವಾಗಿ ತಮ್ಮ ಚಿಂತನೆಗಳನ್ನು ತಿಳಿಸಲು ಮತ್ತು ಕಠಿಣವಾದ ಪ್ರಮುಖ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪರಿಕಲ್ಪನೆಯನ್ನು ಸಿದ್ಧಪಡಿಸಲು ಎಟಿಎಲ್ ವೇದಿಕೆಯಾಗಿದೆ. ಎಸ್‌ಟಿಇಎಂ ಶಿಕ್ಷಣದ ಸಾಮಗ್ರಿಗಳು, ಸಂವಹನ, ರೊಬೋಟಿಕ್ ಮತ್ತು ಇತರ ಪ್ರಯೋಗಾತ್ಮಕ ಸಾಮಗ್ರಿಗಳಿಂದ ಸಜ್ಜಿತವಾದ ಇದರ ಪ್ರಯೋಗಶಾಲೆ ಯುವ ವಿದ್ಯಾರ್ಥಿಗಳಿಗೆ ಸೃಜನಶೀಲಾತ್ಮಕ ವೇದಿಕೆಯನ್ನು ಒದಗಿಸಿ ಅವರು ಆಟ ಮತ್ತು ಪಾಠ ಎರಡನ್ನೂ ಕಲಿಯಲು ನೆರವಾಗುತ್ತದೆ. ದಿನ ನಿತ್ಯದ ಸಮಸ್ಯೆಗಳಿಗೆ ತಂತ್ರಜ್ಞಾನದಿಂದ ಕೂಡಿದ ಪರಿಹಾರವನ್ನು ಒದಗಿಸಲು ಎಟಿಎಲ್ ವಿದ್ಯಾರ್ಥಿಗಳಿಗೆ ವೇದಿಕೆಯಾಗಿದೆ ಮತ್ತು ದೊಡ್ಡ ಪ್ರಮಾಣದಲ್ಲಿ ಸಂಶೋಧನೆ ಹಾಗೂ ಆವಿಷ್ಕಾರದಲ್ಲಿ ತೊಡಗುವಂತೆ ಅವರನ್ನು ಉತ್ತೇಜಿಸುತ್ತದೆ.

ಉದ್ಯಮಶೀಲತೆಯ ಕಡೆಗೆ ಬೆಳೆಯಲು ಅವಶ್ಯಕವಾದ ಅವಕಾಶಗಳ ಮಹಾಪೂರವನ್ನೇ ಅವರೆದುರು ಇಟ್ಟು ಹಾಗೂ ಅವರ ವ್ಯಕ್ತಿತ್ವವನ್ನು ಆ ನಿಟ್ಟಿನಲ್ಲಿ ಬೆಳೆಸಲು ವಿಕಸನದ ಪೆಟ್ಟಿಗೆಯ ರೂಪದಲ್ಲಿ ಸಹಾಯ ಮಾಡುತ್ತದೆ. ವೈಜ್ಞಾನಿಕ ಉಪಕರಣಗಳು ಮತ್ತು ಸಾಮಗ್ರಿಗಳನ್ನು ಒದಗಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಮತ್ತು ಆವಿಷ್ಕಾರದ ಉತ್ಸಾಹದ ಕಿಡಿಯು ಜ್ವಲಿಸುವಂತೆ ಮಾಡುವ ನಿಟ್ಟಿನಲ್ಲಿ ಪ್ರಯೋಗಾತ್ಮಕ ಕಲಿಕೆಯನ್ನು ಈ ಪ್ರಯೋಗಾಲಯ ಬಳಸುತ್ತಿದೆ.

ಪ್ರಸಕ್ತ 33 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಟಿಎಲ್ ಸ್ಥಾಪನೆಯಾಗಿದ್ದು, ಒಟ್ಟು 941 ಮಾನ್ಯತೆ ಪಡೆದ ಶಾಲೆಗಳೊಂದಿಗೆ ಭಾರತದ ಶೇ. 55 ಜಿಲ್ಲೆಗಳಲ್ಲಿ ಇದು ವಿಸ್ತರಿಸಿದೆ. ಪ್ರಸಕ್ತ ವರ್ಷ ಇನ್ನೂ 1300 ಹೊಸ ಎಟಿಎಲ್‌ಗಳೊಂದಿಗೆ ದೇಶದ ಎಲ್ಲಾ ಜಿಲ್ಲೆಗಳು ಮತ್ತು ಎಲ್ಲಾ ಚಿಕ್ಕ ನಗರಗಳಿಗೆ ವಿಸ್ತರಿಸುವ ಗುರಿ




ಹೊಂದಲಾಗಿದೆ. ಇಷ್ಟೇ ಅಲ್ಲ ಮಹಾ ನಗರಗಳು, ಪಟ್ಟಣ ಅಥವಾ ಗ್ರಾಮಗಳು ಎಂಬ ಬೇಧವಿಲ್ಲದೆ ಮುಂದಿನ ಪೀಳಿಗೆಯ ಎಲ್ಲರಿಗೂ ಎಟಿಎಲ್ ತಲುಪುವಂತೆ ಮಾಡುವ ಯೋಜನೆ ಮಾಡಲಾಗಿದೆ.

ಈ ಯೋಜನೆಯು ದೊಡ್ಡ ಪ್ರಮಾಣದಲ್ಲಿ ಪರಿಣಾಮಕಾರಿಯಾಗುವಂತೆ ಮಾಡಲು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇಬ್ಬರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿದೆ. 'ಭಾರತ ಸೃಷ್ಟಿ – ಆವಿಷ್ಕಾರಯುತ ಭಾರತ' ಕನಸಿನ ದೀರ್ಘ ಪ್ರಯಾಣದಲ್ಲಿ ಇದು ಕೇವಲ ಆರಂಭ ಮಾತ್ರವಾಗಿದ್ದು, ಅಂತಿಮವಾಗಿ ಸೃಜನಶೀಲತೆ ಮತ್ತು ಆವಿಷ್ಕಾರವನ್ನು ವಾಸ್ತವ ನೆಲೆಗಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಬೆಳೆಸುವ ಮೂಲಕ ಉದ್ಯಮ ಶೀಲತೆ ಮತ್ತು ಸಾಮಾಜಿಕ–ಆರ್ಥಿಕ ಸಮತೋಲನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಯನ್ನು ಸಾಧಿಸುವುದು ಇದರ ಗುರಿ.

ಈ ಮೂಲಕ ದೇಶದೆಲ್ಲೆಡೆ ಅಭಿವೃದ್ಧಿಯಾಗುವಂತೆ ಮಾಡಬೇಕು. ಮೂಲಭೂತ ರಚನಾತ್ಮಕ ಸುಧಾರಣೆ ಮತ್ತು ದೀರ್ಘಾವಧಿ ಅಭಿವೃದ್ಧಿಗಾಗಿ ಇದುವರೆಗೆ ಅಳವಡಿಸಿಕೊಳ್ಳದ ಆವಿಷ್ಕಾರಿಕ ಗುಣವನ್ನು ಉತ್ತೇಜಿಸಿ ಪರಿವರ್ತನೆಯನ್ನು ಸಾಧಿಸುವ ನಿಟ್ಟಿನಲ್ಲಿ ಭವಿಷ್ಯದ ವಿದ್ಯಾರ್ಥಿಗಳು, ಪ್ರತಿಯೊಬ್ಬ ಭಾರತೀಯನಿಗೆ ಹೆಮ್ಮೆ ಮತ್ತು ಶ್ರೇಷ್ಠತೆಯ ಕೇಂದ್ರವಾಗಿ ಭಾರತವನ್ನು ರೂಪಿಸಬೇಕು. ❑

# ತ್ರಿವಳಿ ತಲಾಖ್ ತೀರ್ಪು : ಮುಸ್ಲಿಂ ಮಹಿಳೆಯರಿಗೆ ಜಯ

* ಆರ್. ಕೆ. ಸಿನ್ಹಾ




**ಹಲವಾರು ಇಸ್ಲಾಂ ದೇಶಗಳೂ ಕೂಡ ತ್ರಿವಳಿ ತಲಾಖನ್ನು ಅನುಮತಿಸುವುದಿಲ್ಲ ಎಂಬ ಅಂಶವನ್ನು ಉಲ್ಲೇಖಿಸುತ್ತಾ ನ್ಯಾಯಾಲಯವು ಭಾರತದಲ್ಲೇಕೆ ಇದನ್ನು ನಿಷೇಧಿಸಬಾರದೆಂಬ ಪ್ರಶ್ನೆಯನ್ನು ಎತ್ತಿತು.**

ಮುಸ್ಲಿಂ ಮಹಿಳೆಯರನ್ನು ತ್ರಿವಳಿ ತಲಾಖ್ (ಒಮ್ಮೆಲೇ ಮೂರು ಬಾರಿ ತಲಾಖ್ ಎಂದು ಹೇಳಿ ಮುಸ್ಲಿಂ ಗಂಡಸರು ತಮ್ಮ ಪತ್ನಿಯರಿಗೆ ವಿಚ್ಛೇದನ ನೀಡುವ ಆಚರಣೆ) ಎಂಬ ಬರ್ಬರ ಆಚರಣೆಯಿಂದ ಬಿಡುಗಡೆ ಮಾಡುವ ಐತಿಹಾಸಿಕ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯವು ನೀಡಿದೆ. ಸಂಸತ್ತಿನಲ್ಲಿ 6 ತಿಂಗಳೊಳಗೆ ತ್ರಿವಳಿ ತಲಾಖ್‌ನ ಕುರಿತಾಗಿ ಒಂದು ಕಾನೂನನ್ನು ರೂಪಿಸಬೇಕೆಂದು ಕೂಡ ಸರ್ವೋಚ್ಚ ನ್ಯಾಯಾಲಯ ಆದೇಶಿಸಿದ್ದು ಈ ಅವಧಿಯಲ್ಲಿ ತಲಾಖ್ ಆಚರಣೆಗೆ ನಿಷೇಧ ವಿಧಿಸಿದೆ. ಒಂದೊಮ್ಮೆ ಈ ಅವಧಿಯಲ್ಲಿ ಕಾನೂನು ಬರದಿದ್ದರೂ ತ್ರಿವಳಿ ತಲಾಖ್ ಕುರಿತ ನಿಷೇಧ ತೀರ್ಪು ಚಾಲ್ತಿಯಲ್ಲಿರುತ್ತದೆ. ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಜೆ ಎಸ್ ಖೇಹರ್ (ಈಗ ನಿವೃತ್ತ) ನೇತೃತ್ವದ ಐವರು ನ್ಯಾಯಾಧೀಶರ ಪೀಠವು 3–2 ಬಹುಮತದಿಂದ ತ್ರಿವಳಿ ತಲಾಖನ್ನು ತೆಗೆದುಹಾಕಿದೆ. 1986ರಲ್ಲಿ ಶಾ ಬಾನೂ ಪ್ರಕರಣದಲ್ಲಿ ಅಂತಿಮ ತೀರ್ಪನ್ನು ನೀಡುವ ಬದಲು ಅರ್ಜಿದಾರರ ಮನವಿಯನ್ನು ಒಪ್ಪಿ ತ್ರಿವಳಿ ತಲಾಖಿಗೆ ಸಂಬಂಧಿಸಿದಂತೆ ವಿಷಯವನ್ನು ಸಂಸತ್ತಿಗೆ ಒಪ್ಪಿಸಿದ ಅಂಶದಿಂದ ಐತಿಹಾಸಿಕ ಪಾಠವನ್ನು ಕಲಿಯಲಾಗಿದೆ. ಆದರೆ ಸರ್ವೋಚ್ಚ ನ್ಯಾಯಾಲಯವು ತನ್ನ ಇಂಗಿತವನ್ನು ಸ್ಪಷ್ಟಪಡಿಸಿತ್ತು. ಒಟ್ಟಾರೆ, ದೇಶವು ತ್ರಿವಳಿ ತಲಾಖಿನಂತಹ ಆಚರಣೆಯಿಂದ ಮುಕ್ತವೆಂದು ಇದು ಸ್ಪಷ್ಟಪಡಿಸಿದೆ. ಸ್ವಾತಂತ್ರ್ಯ ದಿನದ ಹಿಂದಿನ ವರ್ಷದ ತಮ್ಮ ಭಾಷಣದಲ್ಲಿ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಐತಿಹಾಸಿಕ ಕೆಂಪು ಕೋಟೆಯ ವೇದಿಕೆಯಿಂದ ತ್ರಿವಳಿ ತಲಾಖಿನ ಅಮಾನವೀಯ ಆಚರಣೆಯನ್ನು ನಿಲ್ಲಿಸಲು ಕಾನೂನನ್ನು ತರುವುದಾಗಿ ಆಶ್ವಾಸನೆ ನೀಡಿದ್ದರು.

**ಮಾನವೀಯತೆಗೆ ಜಯ**

ತ್ರಿವಳಿ ತಲಾಖ್ ಮುಂದುವರೆಯಬೇಕೆಂದು ಹಲವಾರು ಮತಾಂಧ ಮುಸ್ಲಿಂ ಸಂಘಟನೆಗಳು ತೀವ್ರವಾಗಿ ಪ್ರತಿಪಾದಿಸಿದ್ದರೂ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಿಂದ ಮುಸ್ಲಿಂ ಮಹಿಳೆಯರಿಗೆ ಹೊಸ ಬದುಕನ್ನು ನೀಡಿದೆ. ಈ ತೀರ್ಪಿಗೆ ಮುಂಚೆ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಮಾನವೀಯತೆ ಜಯವನ್ನು ಖಚಿತಗೊಳಿಸುತ್ತದೋ ಅಥವಾ ಮೂಲಭೂತವಾದ ಮತ್ತು ಬರ್ಬರತೆ ಉಳಿಯುತ್ತದೋ ಎಂಬುದನ್ನು ನಿರ್ಧರಿಸುತ್ತದೆ ಎನ್ನುವಂತಹ ಪರಿಸ್ಥಿತಿ ಉಂಟಾಗಿತ್ತು. ಸಂವಿಧಾನ ಪೀಠದ ಐವರು ನ್ಯಾಯಾಧೀಶರಲ್ಲಿ ಮೂವರಾದ ನ್ಯಾಯಮೂರ್ತಿ ಕುರಿಯನ್ ಜೋಸೆಫ್, ನ್ಯಾಯಮೂರ್ತಿ ಆರ್ ಎಫ್ ನಾರಿಮನ್ ಮತ್ತು ನ್ಯಾಯಮೂರ್ತಿ ಯು.ಯು. ಲಲಿತ್ ತ್ರಿವಳಿ ತಲಾಖನ್ನು ಅಸಂವಿಧಾನಾತ್ಮಕ ಎಂದು ಎತ್ತಿಹಿಡಿದರು. ಇನ್ನೊಂದೆಡೆ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಜೆ.ಎಸ್. ಖೇಹರ್ ಮತ್ತು ನ್ಯಾಯಾಧೀಶ ನ್ಯಾಯಮೂರ್ತಿ ಅಬ್ದುಲ್ ನಜೀರ್ ಈ ಆಚರಣೆಯು ಮುಸ್ಲಿಂ ವೈಯಕ್ತಿಕ ಕಾನೂನಿನ ಭಾಗವಾದ್ದರಿಂದ ನ್ಯಾಯಾಲಯವು

* ರಾಜ್ಯಸಭಾ ಸದಸ್ಯರು, ಅಧ್ಯಕ್ಷರು ಹಿಂದೂಸ್ಥಾನ ಸಮಾಚಾರ ಸುದ್ದಿ ಸಂಸ್ಥೆ. E-mail : rkishore.sinha@sansad.nic.in



ಮಧ್ಯಪ್ರವೇಶ ಮಾಡತಕ್ಕದ್ದಲ್ಲ ಎಂದು ಅಭಿಪ್ರಾಯಪಟ್ಟರು. ಆದರೆ ನ್ಯಾಯಮೂರ್ತಿ ಜೆ.ಎಸ್. ಖೇಹರ್ ಮತ್ತು ನ್ಯಾಯಮೂರ್ತಿ ಅಬ್ದುಲ್ ನಜೀರ್‌ರವರ ಅಭಿಪ್ರಾಯವನ್ನು ಉಳಿದ ಮೂವರು ನ್ಯಾಯಾಧೀಶರು ಒಪ್ಪಲಿಲ್ಲ. ಮೂವರು ನ್ಯಾಯಾಧೀಶರು ತ್ರಿವಳಿ ತಲಾಖನ್ನು ಸಂವಿಧಾನದ ವಿಧಿ 14ರ (ಸಮಾನತೆಯ ಹಕ್ಕು) ಸಾರದ ಉಲ್ಲಂಘನೆ ಎಂದು ಹೇಳಿದರು. ತ್ರಿವಳಿ ತಲಾಕಿನ ಆಚರಣೆಯನ್ನು ಅಸಂವಿಧಾನಾತ್ಮಕವೆಂದು ಎತ್ತಿಹಿಡಿದು ನ್ಯಾಯಾಲಯವು ಬಹುಮತದಿಂದ ಅದನ್ನು ತೊಡೆದುಹಾಕಿದೆಯೆಂದು ಈ ನಿರ್ಧಾರವು ಸೂಚಿಸುತ್ತದೆ. ಹಲವಾರು ಇಸ್ಲಾಂ ದೇಶಗಳೂ ಕೂಡ ತ್ರಿವಳಿ ತಲಾಖನ್ನು ಅನುಮತಿಸುವುದಿಲ್ಲ ಎಂಬ ಅಂಶವನ್ನು ಉಲ್ಲೇಖಿಸುತ್ತಾ ನ್ಯಾಯಾಲಯವು ಭಾರತದಲ್ಲೇಕೆ ಇದನ್ನು ನಿಷೇಧಿಸಬಾರದೆಂಬ ಪ್ರಶ್ನೆಯನ್ನು ಎತ್ತಿತು. ನ್ಯಾಯಾಲಯವು ಸಂಸತ್ತಿಗೆ 6 ತಿಂಗಳೊಳಗೆ ಈ ವಿಷಯದ ಕುರಿತು ಕಾನೂನನ್ನು ರೂಪಿಸಲೂ ಕೂಡ ಹೇಳಿದೆ.

### ತ್ರಿವಳಿ ತಲಾಖ್ ಒಂದು 'ಪಾಪ'

ತ್ರಿವಳಿ ತಲಾಖನ್ನು ಮುಸ್ಲಿಮರ ಮೂಲಭೂತ ಹಕ್ಕೆಂದು ಹೇಳುತ್ತಾ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಜೆ.ಎಸ್. ಖೇಹರ್ ಮತ್ತು ನ್ಯಾಯಾಧೀಶ ನ್ಯಾಯಮೂರ್ತಿ ಅಬ್ದುಲ್ ನಜೀರ್ ನ್ಯಾಯಾಂಗವು ಈ ಕುರಿತು ಮಧ್ಯಪ್ರವೇಶ ಮಾಡಬಾರದೆಂದು ಹೇಳಿದರು. ಆದರೆ ಈ ಇಬ್ಬರೂ ನ್ಯಾಯಾಧೀಶರು ತ್ರಿವಳಿ ತಲಾಖ್ ಒಂದು ಪಾಪ ಕೃತ್ಯವೆಂದರು ಮತ್ತು ಸರ್ಕಾರವು ಈ ಕುರಿತು ಆಲೋಚಿಸಿ ಒಂದು ಕಾನೂನು ರೂಪಿಸಬೇಕೆಂಬ ಅಭಿಪ್ರಾಯ ಪಟ್ಟರು. ಅಂತಲೇ ನಿಸ್ಸಂಶಯಾತೀತವಾಗಿ ಈಗ ಕೇಂದ್ರ ಸರ್ಕಾರವು ಮುಸ್ಲಿಂ ಮಹಿಳೆಯನ್ನು ಸಶಕ್ತೀಕರಿಸುವ ಒಂದು ಬಲಿಷ್ಠವಾದ ಕಾನೂನನ್ನು ತರಲಿದೆ.

ಅಬ್ದುಲ್ಲಾ ಬಿಸ್ಮಿಲ್ಲರವರು ಬರೆದ ಜಿನಿಜಿನಿಬಿನಿಚಾದರಿಯ ಎಂಬ ಕಾದಂಬರಿಯನ್ನು ಓದಿದರೆ ಭಾರತದ ಮುಸ್ಲಿಂ ಮಹಿಳೆಯರ ಸ್ಥಾನಮಾನವನ್ನು ನಾವು ತಿಳಿಯಬಹುದು. ಈ ಕಾದಂಬರಿಯು ಮುಸ್ಲಿಂ ಮಹಿಳೆಯರನ್ನು ಕೀಳು ಅಥವಾ ಮೂರನೆಯ ದರ್ಜೆ ವ್ಯಕ್ತಿಗಳೆಂದು ಪರಿಗಣಿಸುವ ಕೆಲವು ಮುಸ್ಲಿಂ ಕುಟುಂಬಗಳ ಚಿತ್ರಣ ನೀಡುತ್ತದೆ.

### ಶತ್ರುಗಳು ಯಾರು?

ಮುಸ್ಲಿಂ ಮಹಿಳೆಯರನ್ನು ಬರ್ಬರತೆಯಿಂದ ಮುಕ್ತಗೊಳಿಸಲು ತ್ರಿವಳಿ ತಲಾಖ್ ವಿರೋಧದ ಪ್ರಚಾರ ನಡೆದಾಗ ತಮ್ಮನ್ನು ಮುಸ್ಲಿಂರ ಹಿತೈಷಿಗಳೆಂದು ಘೋಷಿಸಿಕೊಂಡ ಹಲವಾರು ಮುಸ್ಲಿಂ ರಾಜಕಾರಣಿಗಳು ಇದನ್ನು ವಿರೋಧಿಸಲಾರಂಭಿಸಿದರು. ಇದಲ್ಲದೆ ಈ ರಾಜಕಾರಣಿಗಳು ಹಲವಾರು ಮಾಧ್ಯಮ ಚರ್ಚೆಗಳು ಮತ್ತು ಸಂವಾದಗಳಲ್ಲಿ ಸರ್ಕಾರದ ವಿರುದ್ಧ ತ್ರಿವಳಿ ತಲಾಖನ್ನು ವಿರೋಧಿಸಿ ಒಂದು ಸಮರವನ್ನೇ ಸಾರುವುದಾಗಿ ಬೆದರಿಕೆ ಒಡ್ಡಿದರು. ಈ ಚರ್ಚೆಗಳಲ್ಲಿ ಹಲವಾರು ಮುಲ್ಲಾಗಳು ಮತ್ತು ಉಲೆಮಾಗಳಿದ್ದರೂ ಒಬ್ಬ ಮಹಿಳೆಯೂ ಕೂಡ ಇದರಲ್ಲಿರಲಿಲ್ಲ.

ಈ ಶತಮಾನದಲ್ಲೂ ಕೂಡ ಅವರು (ಸ್ವಯಂ ಘೋಷಿತ ಮುಸ್ಲಿಂ ನಾಯಕರು) ಮಧ್ಯಯುಗದ ಆಚರಣೆಗಳು ಮತ್ತು ಸಂಪ್ರದಾಯಗಳನ್ನು ಮುಸ್ಲಿಂ ಮಹಿಳೆಯರು ಪಾಲಿಸಬೇಕೆಂದು ಬಯಸುತ್ತಾರೆ. ಇಂತಹ ರಾಜಕಾರಣಿಗಳು ಸರ್ಕಾರದ ಪ್ರಗತಿಪರ ಧೋರಣೆಯನ್ನು ವಿರೋಧಿಸುತ್ತಿದ್ದರು. ಎರಡನೆಯದಾಗಿ, ತ್ರಿವಳಿ ತಲಾಖನ್ನು ನಿಷೇಧಿಸಿರುವ ಎಲ್ಲ ಮುಸ್ಲಿಂ ದೇಶಗಳಲ್ಲಿ ಇಸ್ಲಾಮಿನ ಉಲ್ಲಂಘನೆಯಾಗಿಲ್ಲವೆಂದ ಪಕ್ಷದಲ್ಲಿ ಇಂತಹ ಹಳೆಯ ಮತ್ತು ಕೆಟ್ಟ ಆಚರಣೆಯನ್ನು ಇಲ್ಲಿ (ಭಾರತ) ನಿಷೇಧಿಸುವುದರಿಂದ ಇಸ್ಲಾಮಿಗೇಕೆ ಅಪಾಯ ಆಗುತ್ತದೆ ಅಥವಾ ಮುಸ್ಲಿಂರ ಹಕ್ಕುಗಳನ್ನು ಕಸಿದುಕೊಂಡಂತಾಗುತ್ತದೆ? ಇನ್ನೂ ಕೂಡ ಕರಾಳ ಯುಗದಲ್ಲಿ ಈ ಸಮುದಾಯವು ಉಳಿದಿದೆಯೆಂದರೆ ಆ ಸ್ವಘೋಷಿತ ನಾಯಕರೇ ಇದಕ್ಕೆ ಕಾರಣರು. ಗಮನಾರ್ಹ ವಿಷಯವೆಂದರೆ ಕುರಾನಿನಲ್ಲಿ ಅಥವಾ ಹದೀಸಿನಲ್ಲಿ ತಲಾಖಿಗೆ ಯಾವುದೇ ಅವಕಾಶವಿಲ್ಲ. ಅಲ್ಲಾ ಇಷ್ಟಪಡದ ಹಲವಾರು ವಿಷಯಗಳಲ್ಲಿ ತಲಾಖ್ ಅಗ್ರಗಣ್ಯ ಸ್ಥಾನ ಪಡೆಯುತ್ತದೆ ಎಂದು ಕುರಾನಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ರಸೂಲ್ ಅಥವಾ ಯಾವುದೇ ನಬಿಯವರು ತಮ್ಮ ಹೆಂಡತಿಯರಿಗೆ ವಿಚ್ಛೇದನೆ ನೀಡಿರಲಿಲ್ಲ. ಹೌದು, ಅವರಲ್ಲಿ ಕೆಲವರಿಗೆ ಯಾವುದೇ ವಿಷಯದಲ್ಲಿ ಅಭಿಪ್ರಾಯ ಭೇದವಿದ್ದಾಗ ತಮ್ಮ ಹೆಂಡತಿಯರನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಿ ಅಲ್ಲಿ ಅವರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಿ ಅವರ ಸಂಪೂರ್ಣ ಮೇಲ್ವಿಚಾರಣೆ ಮಾಡುತ್ತಿದ್ದರು. ಅವರ ಆರೈಕೆಯನ್ನು ಚೆನ್ನಾಗಿ ಮಾಡುತ್ತಿದ್ದರು. ವಿವಾಹ ಸಂಬಂಧದಲ್ಲಿ ಸದೃಢ ಅವಕಾಶಗಳ ಕೊರತೆ ವಿಚ್ಛೇದನೆ ಮತ್ತು ಜೀವನಾಂಶಗಳ ಅವಕಾಶವಿಲ್ಲದ ಕಾರಣ ಬಹುತೇಕ ಮುಸ್ಲಿಂ ಮಹಿಳೆಯರು ಬಹಳ ದುರ್ಬರವಾದ ಬದುಕನ್ನು ಸಾಗಿಸುತ್ತಿದ್ದಾರೆ. ಆದರೆ ಈ ಸ್ಥಿತಿಯು ಈಗ ಖಂಡಿತ ಬದಲಾಗುತ್ತದೆ. ಮೂಲಭೂತವಾದಿ ಗಂಡಸರು ತ್ರಿವಳಿ ತಲಾಖ್ ಪರವಾಗಿದ್ದರೆ ಮಹಿಳೆಯರು ಸಂಪೂರ್ಣವಾಗಿ ಇದನ್ನು ವಿರೋಧಿಸಿದರು.

ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ್ (BMMA) ನಡೆಸಿದ ಸಮೀಕ್ಷೆ ಶೇಕಡ 92.1ರಷ್ಟು ಭಾರತದ ಮುಸ್ಲಿಂ ಮಹಿಳೆಯರು ಮೌಖಿಕ ಮತ್ತು ದಿಢೀರ್ ತಲಾಖನ್ನು ಕೊನೆಗೊಳಿಸಲು ಬಹಳ ಪ್ರಯತ್ನ ಮಾಡುತ್ತಿದ್ದಾರೆ ಎಂಬುದನ್ನು ಬಹಿರಂಗಗೊಳಿಸಿತು.

ಸರ್ವೋಚ್ಚ ನ್ಯಾಯಾಲಯವು ಈ ಐತಿಹಾಸಿಕ ತೀರ್ಪು ನೀಡಿದ ನಂತರ ಅವರ ಇಚ್ಛೆಯು ಪೂರೈಸಿದಂತಾಗಿದೆ. ಆದರೆ ಈ ಕುರಿತು ಸ್ಪಷ್ಟವಾಗಿ ಕಾನೂನು ಬರುವವರೆಗೆ ಅವರು ಕಾಯಬೇಕು. ಈಗ ಸರ್ಕಾರವು ನ್ಯಾಯಾಲಯದ ಆದೇಶಗಳನ್ನು ಪಾಲಿಸುತ್ತಾ ಅವರ ಬದುಕನ್ನು ಉತ್ತಮಗೊಳಿಸಲು ಕಾರಣವಾಗುವ ಅವರ ಹಕ್ಕುಗಳನ್ನು ಸಂರಕ್ಷಿಸಲು ಒಂದು ಕಠಿಣ ಕಾನೂನನ್ನು ತರಬೇಕು. ಮತ್ತು ಇದಕ್ಕಾಗಿ ಆರು ತಿಂಗಳ ಅವಧಿಗಾಗಿ ಏಕೆ ಕಾಯಬೇಕು? ಸರ್ಕಾರವು ಮಹಿಳೆಯರಿಗೆ ಸಮಾನ ಹಕ್ಕುಗಳು ಮತ್ತು ಸ್ಥಾನಮಾನಗಳನ್ನು ಒದಗಿಸಲು ನಿರ್ಧರಿಸಿದೆಯೆಂದು ಸಾಬೀತುಗೊಳಿಸಲು ನವೆಂಬರಿನಲ್ಲಿ ಆರಂಭವಾಗುವ ಮುಂದಿನ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರವು ಒಂದು ಮಸೂದೆಯನ್ನು ಮಂಡಿಸಬೇಕು. ❑

# ಬುಲೆಟ್ ರೈಲು ಯೋಜನೆಗೆ ಶಂಕು ಸ್ಥಾಪನೆ




ಮುಂಬಯಿ ಅಹಮದಾಬಾದ್ ನಡುವಿನ ಪ್ರತಿಷ್ಠಿತ ಹೈಸ್ಪೀಡ್ ಬುಲೆಟ್ ಟ್ರೇನ್ ಯೋಜನೆಗೆ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಶ್ರೀ ಶಿಂಜೆ ಅಬೆ ಚಾಲನೆ ನೀಡಿದ್ದಾರೆ. ಜಪಾನ್ ನೆರವಿನ ಆಧುನಿಕ ತಂತ್ರಜ್ಞಾನದ ರೈಲ್ವೆ ಕಾಮಗಾರಿಗೆ ಅಹಮದಾಬಾದಿನಲ್ಲಿ ಸೆ. 14 ರಂದು ಗುಂಡಿಯೊತ್ತಿ ಶಿಲಾನ್ಯಾಸಕ್ಕೆ ಸಾಕ್ಷಿಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನ ಮಂತ್ರಿ ಶ್ರೀ ಮೋದಿ ಅವರು, ಉಭಯ ದೇಶಗಳ ದಶಕಗಳ ಸ್ನೇಹಕ್ಕೆ ಸಂದ ಗೌರವವಿದು.

### ಯೋಜನೆಯ ಪಕ್ಷಿ ನೋಟ

1.10 ಲಕ್ಷ ಕೋಟಿ ರೂಪಾಯಿ ಅಂದಾಜು ವೆಚ್ಚದ ಈ ಯೋಜನೆಗೆ ಜಪಾನ್, ತಂತ್ರಜ್ಞಾನ ನೆರವಿನ ಜೊತೆಗೆ 88,000 ಕೋಟಿ ರೂಪಾಯಿ ಸಾಲ ನೆರವು ಒದಗಿಸಲಿದೆ. ಸಾಲಕ್ಕೆ ಶೇ. 0.1 ರ ಸಾಂಕೇತಿಕ ಬಡ್ಡಿ ದರವಿರಲಿದ್ದು ವಾರ್ಷಿಕ 7–8 ಕೋಟಿ ರೂ. ಗಳಾಗುತ್ತದೆ. ಸಾಲ ಪೂರೈಕೆಯಾದ 15 ವರ್ಷಗಳ ನಂತರ ಮರುಪಾವತಿ ಅವಧಿ ಆರಂಭವಾಗುತ್ತದೆ. ಸಾಲ ಮರುಪಾವತಿ ಅವಧಿ 50 ವರ್ಷಗಳು. ಅಹಮದಾಬಾದ್–ಮುಂಬೈ ನಡುವಿನ ದೂರ 509 ಕಿ.ಮೀ. ಗಳು. ಬುಲೆಟ್ ಟ್ರೇನ್ ಕೇವಲ 2.58 ಗಂಟೆಗಳಲ್ಲಿ ಈ ದೂರ ಕ್ರಮಿಸುತ್ತದೆ. 2022ರ ವೇಳೆಗೆ ಸಂಚಾರ ಆರಂಭ ಸಾಧ್ಯತೆ. ಬುಲೆಟ್ ರೈಲು ತಂತ್ರಜ್ಞಾನ ಜಪಾನ್‌ನಲ್ಲಿ ಸಿದ್ಧವಾದರೂ ಅದರ ಉತ್ಪನ್ನ ಭಾರತದಲ್ಲೇ ತಯಾರಾಗುತ್ತದೆ. ಈ ಯೋಜನೆಯಿಂದ 20 ಸಾವಿರ ಭಾರತೀಯರಿಗೆ ಉದ್ಯೋಗ ದೊರಕಲಿದೆ.

ಈ ಯೋಜನೆಯಲ್ಲಿ ಜಪಾನ್ ಆಸಕ್ತಿ ವಹಿಸಿದ್ದು ನಿಗದಿತ ಕಾಲಮಿತಿಯೊಳಗೆ ಕಾಮಗಾರಿ ಪೂರ್ತಿಗೊಳ್ಳುವ ವಿಶ್ವಾಸವಿದೆ. ಭಾರತದ ಮೇಲೆ ವಿಶ್ವಾಸವಿರಿಸಿ ಬೃಹತ್ ಮೊತ್ತದ ಸಾಲ ಮತ್ತು ತಂತ್ರಜ್ಞಾನ ನೀಡುತ್ತಿರುವುದಕ್ಕೆ ಧನ್ಯವಾದ ಅರ್ಪಿಸುತ್ತೇವೆ ಎಂದರು.

ಜಪಾನ್ ಪ್ರಧಾನಿ ಶ್ರೀ ಶಿಂಜೆ ಅಬೆ ಮಾತನಾಡಿ ಬುಲೆಟ್ ರೈಲು ಯೋಜನೆಯಿಂದ ವಿಶ್ವದ ಭೂಪಟದಲ್ಲಿ ಭಾರತದ ವರ್ಚಸ್ಸು ಬದಲಾಗುವುದರ ಜೊತೆಗೆ ಅಪಾರ ಉದ್ಯೋಗಾವಕಾಶ ಸೃಷ್ಟಿಯಾಗಲಿದೆ ಎಂದರು. ❑

# ಗಾಂಧೀ ಗ್ರಾಮೀಣ ಗುರುಕುಲ

* ಪ್ರಕಾಶ ಜೋಶಿ



ಶಿಕ್ಷಣ ಕ್ಷೇತ್ರ ಉದ್ಯಮವಾಗಿ ಮಾರ್ಪಾಡಾಗುತ್ತಿರುವ ಇಂದಿನ ದಿನಗಳಲ್ಲಿ ಗಾಂಧೀಜಿಯವರ ತತ್ವಾದರ್ಶ ಪಾಲನೆಯ ಚಿಂತನೆಯಲ್ಲಿ ಅಭಿವೃದ್ಧಿ ಪಥದತ್ತ ನಡೆಯುತ್ತಿರುವ ಹೊಸರಿತ್ತಿಯ ಗಾಂಧೀ ಗ್ರಾಮೀಣ ಗುರುಕುಲ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಜೀವನ ನಿಜವಾಗಿ ಧನ್ಯ ಎಂದರೆ ತಪ್ಪಾಗಲಾರದು ಈ ಶಾಲೆ ಒಂದು ಬಗೆಯಲ್ಲಿ ಗಾಂಧಿ ಸೇವಾ ಗ್ರಾಮ, ಶಾಂತಿನಿಕೇತನ, ಸಹಜೀವನ, ಸಹಬಾಳ್ವೆಯ ಮಾರ್ಗದರ್ಶನ ಕೇಂದ್ರ.

**ಗಾಂಧೀ ಜಯಂತಿ ವಿಶೇಷ**

**ಹಾ**ವೇರಿ ಜಿಲ್ಲೆ, ಸ್ವಾತಂತ್ರ್ಯ ಸಂಗ್ರಾಮಕ್ಕೆ ದೊಡ್ಡ ಕಾಣಿಕೆಯನ್ನೇ ನೀಡಿದೆ. ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಅವರ ಕಟ್ಟಾ ಅನುಯಾಯಿಗಳಾಗಿ ಚಳವಳಿಯಲ್ಲಿ ಪಾಲ್ಗೊಂಡು ಅರ್ಪಣಾ ಭಾವದ ಸೇವೆ ಸಲ್ಲಿಸಿದವರ ದೊಡ್ಡ ಸಾಲೇ ಇಲ್ಲಿದೆ. ಹಾವೇರಿ ತಾಲ್ಲೂಕಿನ ಹೊಸರಿತ್ತಿ ಗ್ರಾಮ ಸ್ವಾತಂತ್ರ್ಯ ಸೇನಾನಿಗಳ ಕೇಂದ್ರಸ್ಥಾನ. ಇಲ್ಲಿಯೇ ಸೇರಿ ಚರ್ಚೆ ನಡೆಸಿ ಚಳವಳಿಯ ರೂಪ ರೇಷೆಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಇದರ ಮುಖಂಡತ್ವ ವಹಿಸುತ್ತಿದ್ದವರು ಮೈಲಾರ ಮಹದೇವಪ್ಪ, ಹಳ್ಳಿಕೇರಿ ಗುದ್ಲೆಪ್ಪ ಮುಂತಾದವರು. ಮೈಲಾರ ಮಹದೇವಪ್ಪ ಬ್ರಿಟಿಷರ ಕುತಂತ್ರಕ್ಕೆ ಬಲಿಯಾಗಿ ಪ್ರಾಣ ಸಮರ್ಪಣೆ ಮಾಡಿದರು.

ಸ್ವಾತಂತ್ರ್ಯ ಯೋಧ ಗುದ್ಲೆಪ್ಪನವರು ಹೊಸರಿತ್ತಿ ಗ್ರಾಮದವರಾಗಿ ಅಲ್ಲಿಯೇ ಗಾಂಧೀ ಆಶ್ರಮ ಸ್ಥಾಪಿಸಿ ಮಹಾತ್ಮಾ ಗಾಂಧೀಜಿವರ ಕಟ್ಟಾ ಅನುಯಾಯಿಯಾಗಿ ಅವರ ತತ್ವಾದರ್ಶಗಳನ್ನು ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದರು. ತಮ್ಮ ಸ್ವ ಗ್ರಾಮದ ಗಾಂಧೀಜಿಯವರ ಆದರ್ಶಗಳನ್ನು ಪ್ರತಿಬಿಂಬಿಸಬಲ್ಲ ಹಾಗೂ ಗ್ರಾಮಾಂತರ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಗುರುಕುಲ ಮಾದರಿಯ ಶಾಲೆ ಪ್ರಾರಂಭಿಸಬೇಕೆಂಬ ಆಲೋಚನೆ ಬಂದಿತು, ಅದನ್ನು ಸಾಕಾರಗೊಳಿಸುವಲ್ಲಿ ಸಹ ಸಫಲರಾದರು. ಇದಕ್ಕಾಗಿ ರೂಪರೇಷೆ ತಯಾರಿಸಿ ಶಿಕ್ಷಣ ಕ್ಷೇತ್ರದಲ್ಲಿ ದುಡಿದ ಮ.ಗು ಹಂದ್ರಾಳರ ಸೇವೆಯನ್ನು ಪಡೆದರು. 60 ನೇ ವರ್ಷದ ಹುಟ್ಟುಹಬ್ಬದ ಕಾಲಕ್ಕೆ ಸಾರ್ವಜನಿಕರು ಅರ್ಪಿಸಿದ್ದ ಹಮ್ಮಿಣಿಯನ್ನು ಕೆಲಸಕ್ಕಾಗಿ ಉಪಯೋಗಿಸಲು 32 ಎಕರೆ ಭೂಮಿ ಪಡೆಯಲು ಮುಂದಾದರು. 1984 ರಲ್ಲಿ ಗಾಂಧೀ ಗ್ರಾಮೀಣ ಗುರುಕುಲ ಎಂಬ ಹೆಸರಿನಲ್ಲಿ ಶಾಲೆಯನ್ನು ಪ್ರಾರಂಭಿಸಿದರು. ಸಂಪೂರ್ಣವಾಗಿ ಗಾಂಧೀಜಿಯವರ ಆದರ್ಶ ಪಾಲನೆ ಮಾಡುತ್ತಿರುವ ಏಕೈಕ ವಸತಿ ಶಾಲೆ ಎಂಬ ಹೆಗ್ಗಳಿಕೆಗೆ ಈ ಶಾಲೆ ಪಾತ್ರವಾಗಿದೆ.

### ಸ್ವಾವಲಂಬನೆಯ ಪಾಠ

ಗುರುಕುಲ ವಸತಿ ಶಾಲೆಯ ವಿಶೇಷತೆ ಎಂದರೆ ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನ ಮೂಡಿಸುವುದು. ತಾನೇ ನೂಲನ್ನು ಸಿದ್ಧಪಡಿಸಿ ಅದನ್ನು ನೇಯ್ದು ಬಟ್ಟೆ ಸಿದ್ಧಪಡಿಸಿ ಸಮವಸ್ತ್ರಗಳನ್ನಾಗಿ ಮಾರ್ಪಡಿಸಿ ಧರಿಸುವುದು. ತೋಟಗಾರಿಕೆ, ಹೈನುಗಾರಿಕೆ ನಡೆಸಿ ಅ ಮೂಲಕ ತಾನು

**ಮಹಾತ್ಮಾಜಿ ಅವರ ತತ್ವಗಳನ್ನು, ಬದುಕನ್ನು ದೇಶಾಭಿಮಾನವನ್ನು ಬಾಲ್ಯದಲ್ಲಿಯೇ ಬೆಳೆಸಿಕೊಂಡು ಮಾದರಿಯ ಪ್ರಜೆಗಳಾಗಿ ಬದುಕಲಿ ಎಂಬ ಉದಾತ್ತ ಉದ್ದೇಶ ಹೊಂದಿ ದಿ. ಗುದ್ಲೆಪ್ಪ ಹಳ್ಳೀಕೇರಿ ಸ್ಥಾಪಿಸಿದ ಗ್ರಾಮೀಣ ಗುರುಕುಲ ವಸತಿ ಶಾಲೆ ರಾಜ್ಯದಲ್ಲಿಯೇ ಮಾದರಿಯ ಎನ್ನಬಹುದು. ಅಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ನಿಜವಾಗಿಯೂ ಭಾಗ್ಯವಂತರಾಗಿದ್ದಾರೆ.**

**ನಾರಾಯಣರಾವ ಕರ್ಪೂರ**
**ಹಿರಿಯ ಸ್ವಾತಂತ್ರ್ಯ ಯೋಧರು.**

* ಹಿರಿಯ ಪತ್ರಕರ್ತರು.

# ಗಾಂಧೀ ಸೇವಾ ಪುರಸ್ಕಾರ ಪ್ರದಾನ



ಹಿರಿಯ ಸ್ವಾತಂತ್ರ್ಯಯೋಧ, ಗಾಂಧೀವಾದಿ ಶ್ರೀ ಹೆಚ್ ಎಸ್ ದೊರೆಸ್ವಾಮಿ ಅವರಿಗೆ 2017ನೇ ಸಾಲಿನ ಗಾಂಧೀ ಸೇವಾ ಪುರಸ್ಕಾರ ಪ್ರದಾನ ಮಾಡಲಾಗಿದೆ.

ಗಾಂಧೀ ಜಯಂತಿಯಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು 99 ವರ್ಷದ ಶ್ರೀ ದೊರೆಸ್ವಾಮಿ ಅವರಿಗೆ ಪುರಸ್ಕಾರ ನೀಡಿ ಗೌರವಿಸಿದರು.

ಬೆಳೆದ ಆಹಾರವನ್ನೇ ಉಣ್ಣುವುದು ಕೃಷಿ ಕ್ಷೇತ್ರ ಪರಿಚಯಿಸಿಕೊಳ್ಳುವುದು. ಒಟ್ಟಾರೆ ಸ್ವಾವಲಂಬನೆ ಮೂಲಕ ಸಾರ್ಥಕ ಜೀವನ ನಡೆಸಲು ಸಹಕಾರಿಯಾಗುವ ಶಿಕ್ಷಣವನ್ನು ಇಲ್ಲಿ ನೀಡಲಾಗುತ್ತದೆ. ಇಲ್ಲಿ ರಾಜ್ಯ ಸರ್ಕಾರದ ಪಠ್ಯಕ್ರಮ ಅನುಸರಿಸಲಾಗುತ್ತದೆ. ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ಮಕ್ಕಳಿಗೆ ಪ್ರಾಶಸ್ತ್ಯ ನೀಡಿ ಪ್ರವೇಶ ನೀಡಲಾಗುತ್ತದೆ. 5 ನೇ ತರಗತಿಗೆ ಪ್ರವೇಶ ಪಡೆದ ವಿದ್ಯಾರ್ಥಿ ಎಸ್ ಎಸ್ ಎಲ್ ಸಿ ವರೆಗೆ ಇಲ್ಲಿ ಅಧ್ಯಯನ ಮಾಡಲು ಅವಕಾಶವಿದೆ. ಪ್ರತಿ ವರ್ಗದಲ್ಲೂ 40 ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದಾರೆ. ಇಲ್ಲಿ ಓದುವ ವಿದ್ಯಾರ್ಥಿ ಟೋಪಿ ಧರಿಸುವುದು ಕಡ್ಡಾಯ. ಕೇವಲ ಬಾಲಕರಿಗೆ ಮಾತ್ರ ಇಲ್ಲಿ ಪ್ರವೇಶ.

### ದಿನಚರಿ

ವಿದ್ಯಾರ್ಥಿ ಪ್ರತಿ ನಿತ್ಯ ಐದು ಗಂಟೆಗೆ ಏಳುವುದು ಕಡ್ಡಾಯ ಆರು



ಗಂಟೆಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವುದು ಸ್ವಧ್ಯಾಯ, ಸಂಜೆ ಕ್ರೀಡೆ, ವಾಚನಾಲಯ, ಶಾಲಾ ಅವಧಿಯಲ್ಲಿ ಕೃಷಿ, ಹೈನುಗಾರಿಕೆ, ನೂಲು ನೇಯ್ಗೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಸಂಜೆ ಪುನಃ ಪ್ರಾರ್ಥನೆ ನಡೆಯುತ್ತದೆ ಒಟ್ಟಾರೆ ರಾತ್ರಿ 10 ಗಂಟೆವರೆಗೆ ಬಿಡುವಿಲ್ಲದ ಚಟುವಟಿಕೆ ಇರುತ್ತದೆ.

ಇಲ್ಲಿನ ವಿದ್ಯಾರ್ಥಿಗಳು ವಿಜ್ಞಾನ ವಿಭಾಗದಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸ್ಕೌಟ್ಸ ವಿಭಾಗದಲ್ಲಿ ರಾಷ್ಟ್ರ ಮಟ್ಟದ ಪುರಸ್ಕಾರ ಪಡೆದಿದ್ದಾರೆ. ರಾಜ್ಯ ಮಟ್ಟದ ವಿಜ್ಞಾನ ಸಮಾವೇಶ ಸಂಘಟಿಸಿದ ಶ್ರೇಯಸ್ಸು ಈ ಸಂಸ್ಥೆಗಿದೆ. ವಿದ್ಯಾರ್ಥಿಗಳಿಗೆ ಭಾರತ ಸೇವಾದಳ ತರಬೇತಿ ನೀಡಲಾಗುತ್ತದೆ. ಎಸ್.ಎಸ್. ಎಲ್.ಸಿ. ಪರೀಕ್ಷೆಯಲ್ಲಿ 10–15 ಬಾರಿ ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದ ಕೀರ್ತಿ ವಸತಿ ಶಾಲೆಗಿದೆ. ಹಿರಿಯ ಸ್ವಾತಂತ್ರ್ಯ ಯೋಧ ಶ್ರೀ ದೊರೆಸ್ವಾಮಿ ಅಯ್ಯಂಗಾರ, ವಿಜ್ಞಾನಿಯಾದ ಹೆಚ್ ವಿ ಸುಬ್ರಮಣ್ಯ, ಎಮ್ ಐ ಸವದತ್ತಿ, ಡಾ. ಎಸ್ ಜಿ ನಾಗಲೋಟಿಮಠ. ಮುಂತಾದವರು ಈ ಶಾಲೆಗೆ ಭೇಟಿ ನೀಡಿ ಇಲ್ಲಿನ ಕಾರ್ಯ ಚಟುವಟಿಕೆಯನ್ನು ಬಹಳ ಮೆಚ್ಚುಗೆ ಸೂಚಿಸಿದ್ದಾರೆ. ಆಡಳಿತ ಮಂಡಳಿಯ



ಮುಖ್ಯಸ್ಥರಾಗಿ ದಿ.ಗುದ್ಲೆಪ್ಪ ಹಳ್ಳಿಕೇರಿ ಸ್ವಾತಂತ್ರ್ಯ ಯೋಧರಾದ ಎಚ್ ಎಫ್ ಕಟ್ಟಿಮನಿ, ವಿ ಟಿ ಮಾಗಡಿ, ಆರ್ ಬಿ ಮಾಮಲೆದೇಸಾಯಿ, ಡಾ.ದೀನಬಂಧು ಹಳ್ಳಿಕೇರಿ ಮುಂತಾದವರು ಕಾರ್ಯ ನಿರ್ವಹಿಸಿ ಸಂಸ್ಥೆಯ ಅಭಿವೃದ್ಧಿಗೆ ಕಾರಣರೆನಿಸಿದ್ದಾರೆ.

ಶಿಕ್ಷಣ ಕ್ಷೇತ್ರ ಉದ್ಯಮವಾಗಿ ಮಾರ್ಪಾಡಾಗುತ್ತಿರುವ ಇಂದಿನ ದಿನಗಳಲ್ಲಿ ಗಾಂಧೀಜಿಯವರ ತತ್ವಾದರ್ಶ ಪಾಲನೆಯ ಚಿಂತನೆಯಲ್ಲಿ ಅಭಿವೃದ್ಧಿ ಪಥದತ್ತ ನಡೆಯುತ್ತಿರುವ ಹೊಸರಿತ್ತಿಯ ಗಾಂಧಿ ಗ್ರಾಮೀಣ ಗುರುಕುಲ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಜೀವನ ನಿಜವಾಗಿ ಧನ್ಯ ಎಂದರೆ ತಪ್ಪಾಗಲಾರದು ಈ ಶಾಲೆ ಒಂದು ಬಗೆಯಲ್ಲಿ ಗಾಂಧಿ ಸೇವಾ ಗ್ರಾಮ, ಶಾಂತಿನಿಕೇತನ, ಸಹಜೀವನ, ಸಹಬಾಳ್ವೆಯ ಮಾರ್ಗದರ್ಶನ ಕೇಂದ್ರ.

# ಶೌಚಾಲಯಕ್ಕಾಗಿ ಸಮರ



"ಸ್ವಚ್ಛ ಭಾರತ ಪರಿಕಲ್ಪನೆಯ ಸಾಕಾರಕ್ಕೆ ಶ್ರಮಿಸುವಂತೆ ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಜನತೆಗೆ ಕರೆ ನೀಡಿದ್ದಾರೆ. ಗದಗ್ ಜಿಲ್ಲೆಯ ನರಗುಂದ ತಾಲೂಕಿನ ಕೊಣ್ಣೂರು ಗ್ರಾಮದಲ್ಲಿ ಆಯೋಜಿಸಿದ್ದ, 'ಶೌಚಾಲಯಕ್ಕಾಗಿ ಸಮರ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, "ಗ್ರಾಮೀಣ ಪ್ರದೇಶದ ರೂಢಿಗತ ಸಂಪ್ರದಾಯವನ್ನು ಅಳಿಸಿ ಹಾಕಿ ಸ್ವಚ್ಛ ಗ್ರಾಮಗಳನ್ನು ನಿರ್ಮಿಸುವ ಈ ಕಾರ್ಯಕ್ರಮದ ಯಶಸ್ಸಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಂಬಂಧಿತ ಗ್ರಾಮ ಪಂಚಾಯತ್ ಮತ್ತು ಗ್ರಾಮಸ್ಥರಿಗೆ ಅಭಿನಂದಿಸುವುದಾಗಿ ಅವರು ನುಡಿದರು. "ಜನರ ಆರೋಗ್ಯ ಕಾಪಾಡುವ ಹಾಗೂ ಮಹಾತ್ಮಾ ಗಾಂಧೀಜಿಯವರ ಆಗ್ರಹ ಪೂರ್ವಕ ನುಡಿಯಾದ 'ಸ್ವಾತಂತ್ರ್ಯಕ್ಕಿಂತಲೂ ಸ್ವಚ್ಛತೆಯೇ ಮುಖ್ಯ; ದೈವತ್ವಕ್ಕೆ ಸ್ವಚ್ಛತೆಯೇ ಒಂದು ಮೆಟ್ಟಿಲು' ಎನ್ನುವ ಅವರ ವಿಚಾರ ಧಾರೆಗಳನ್ನು, ಸಾಕಾರಗೊಳಿಸುವ ನಿಟ್ಟಿನಲ್ಲಿ, ಭಾರತ ದೇಶ ಇಂದು ಮಹತ್ವದ ಹೆಜ್ಜೆ ಇಟ್ಟಿದೆ" ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ರಾಜ್ಯಪಾಲ ಶ್ರೀ ವಜೂಭಾಯ್ ವಾಲಾ, "ಎಲ್ಲವನ್ನೂ ಸರ್ಕಾರವೇ ಮಾಡಬೇಕೆನ್ನುವ ಇಂದಿನ ಸಾಮಾನ್ಯ ಅಭಿಪ್ರಾಯ ತೊಲಗಿಸಿ ಸ್ವಚ್ಛತೆ ನಮ್ಮ ವೈಯಕ್ತಿಕ ಜವಾಬ್ದಾರಿಯಾಗಿದೆ ಎನ್ನುವುದನ್ನು ನಾವು ಅರಿಯಬೇಕು" ಎಂದರು. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಖಾತೆ ಸಚಿವ ಎಚ್.ಕೆ.ಪಾಟೀಲ್ "ಮಾರ್ಚ 2018ರ ಒಳಗಾಗಿ, ಇಡೀ ರಾಜ್ಯ ಬಯಲು ಶೌಚ ಮುಕ್ತವಾಗಿಸಲು ಪ್ರಯತ್ನಿಸಲಾಗುವುದು" ಎಂದರು.

ಕೇಂದ್ರದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ರಾಜ್ಯ ಸಚಿವ ಶ್ರೀ ರಮೇಶ ಜಿಗಜಣಗಿ, "ಪ್ರತಿಯೊಂದು ಗ್ರಾಮವು ಶೌಚಾಲಯ ವ್ಯವಸ್ಥೆ, ಶುದ್ಧ ನೀರಿನ ಘಟಕ ಹೊಂದಿದಾಗ ಮಾತ್ರ ಗಾಂಧೀಜಿ ಆಶಯವಾದ 'ಗ್ರಾಮ ಸ್ವರಾಜ್ಯ' ಸಾಧ್ಯ" ಎಂದರು. ❑

# ಭ್ರಷ್ಟಾಚಾರದ ವಿರುದ್ಧ ಭಾರತದ ಸಮರ

* ವಿ. ಶ್ರೀನಿವಾಸ




ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ, ವಸ್ತುನಿಷ್ಠತೆ ಮತ್ತು ಉತ್ತರದಾಯಿತ್ವವನ್ನು ಸ್ಥಿರಗೊಳಿಸಲು ಕೇಂದ್ರ ವಿಚಕ್ಷಣಾ ಆಯೋಗ ಪ್ರಯತ್ನಗಳನ್ನು ನಡೆಸಿದೆ. ಹಲವಾರು ನಿಯಂತ್ರಕ ಕ್ರಮಗಳನ್ನು ಕೇಂದ್ರ ವಿಚಕ್ಷಣಾ ಆಯೋಗ ಜಾರಿಗೊಳಿಸಿದೆ. ಸರ್ಕಾರದ ಇ – ಮಾರುಕಟ್ಟೆ, (ಜೆಮ್) ನಂತಹ ಕ್ರಮಗಳು ಇ–ಟೆಂಡರ್ ಹಾಗೂ ಇ–ಖರೀದಿ ಪ್ರಕ್ರಿಯೆಯನ್ನು ಪ್ರೋತ್ಸಾಹಿಸುವ ಮೂಲಕ ಸಾರ್ವಜನಿಕ ಖರೀದಿಯಲ್ಲಿ ಉತ್ತರದಾಯಿತ್ವ ಹಾಗೂ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ನೆರವು ನೀಡುತ್ತಿದೆ.

ಪ್ರಧಾನಿ ಮಂತ್ರಿಯವರು ಇತ್ತೀಚೆಗೆ ಜಾರ್ಖಂಡಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಹೇಳಿದ್ದರು 'ಭ್ರಷ್ಟಾಚಾರ ಹಾಗೂ ಕಪ್ಪುಹಣ ಭಾರತೀಯ ಪ್ರಜಾಸತ್ತೆಯನ್ನು ಹಾಳುಗೆಡವಿ ಬಿಟ್ಟಿವೆ. ಭ್ರಷ್ಟಾಚಾರ ಮತ್ತು ಕಾಳಧನದ ವಿರುದ್ಧದ ಹೋರಾಟ ಮುಂದುವರೆಯುತ್ತದೆ". ಜಾರ್ಖಂಡದ ಸಖೀಮಂಡಲ ಅಂದರೆ ಕೆಲ ಸ್ತ್ರೀಶಕ್ತಿ ಗುಂಪುಗಳ ಸದಸ್ಯರಿಗೆ ಸ್ಮಾರ್ಟ್ ಫೋನ್‌ಗಳನ್ನು ವಿತರಣೆ ಮಾಡಿ ಮಾತನಾಡಿದ ಪ್ರಧಾನಮಂತ್ರಿಯವರು ಸ್ಮಾರ್ಟ್ ಫೋನ್‌ಗಳ ಬಳಕೆಯ ಬಗ್ಗೆ ಅಲ್ಲಿನ ಗ್ರಾಮವಾಸಿಗಳು ಕೊಟ್ಟ ಉತ್ತರವನ್ನು ಕೇಳಿ ತಮಗೆ ಆಶ್ಚರ್ಯವಾಯಿತು ಎಂದು ತಿಳಿಸಿದರು. ವಿದ್ಯುನ್ಮಾನ ಆಡಳಿತ ಎನ್ನುವುದು ಭ್ರಷ್ಟಾಚಾರದ ವಿರುದ್ಧದ ಭಾರತದ ಹೋರಾಟಕ್ಕೆ ಮಾರ್ಗನಕ್ಷೆ ಒದಗಿಸಿದೆ ಎಂದು ಅಭಿಪ್ರಾಯಪಟ್ಟರು.

### ಭ್ರಷ್ಟಾಚಾರದ ವಿಷಯದಲ್ಲಿ ಶೂನ್ಯ ಸಹಿಷ್ಣುತೆಯ ಮಾರ್ಗ

ಇತ್ತೀಚಿನ ವರ್ಷಗಳಲ್ಲಿ ಭಾರತದ ಆಡಳಿತ ಮಾದರಿಯಲ್ಲಿ 'ಭ್ರಷ್ಟಾಚಾರಕ್ಕೆ ಶೂನ್ಯ ಸಹಿಷ್ಣುತೆಯ ಮಾರ್ಗ' ಜೊತೆಗೆ 'ಕನಿಷ್ಠ ಸರ್ಕಾರ ಗರಿಷ್ಠ ಆಡಳಿತ'ವಿಧಾನ ಸರಳತೆಯನ್ನು ತಂದುಕೊಟ್ಟಿದೆ.ಇವುಗಳಲ್ಲಿ ಕೆಲವು ಹೆಜ್ಜೆಗಳು ಎಂದರೆ ಸರ್ಕಾರಿ ನೌಕರರು ಪ್ರಮಾಣಪತ್ರಗಳನ್ನು ಸಲ್ಲಿಸುವಾಗ ಅನುಸರಿಸಬೇಕಾಗಿದ್ದ ಪ್ರಮಾಣೀಕರಣ/ ದೃಢೀಕರಣ ಪದ್ಧತಿಯ ರದ್ದತಿ, ಕೆಳ ವರ್ಗದ ಹುದ್ದೆಗಳನೇಮಕಾತಿ ಪ್ರಕ್ರಿಯೆಯಲ್ಲಿ ವೈಯಕ್ತಿಕ ಸಂದರ್ಶನಗಳ ರದ್ದತಿ, 50 ವರ್ಷ ದಾಟಿದ, ಶಂಕಾಸ್ಪದ ವರ್ತನೆ ತೋರುವ,ಅದಕ್ಷ ಸಿಬ್ಬಂದಿಯನ್ನು ಸಾರ್ವಜನಿಕ ಸೇವೆಯಿಂದ ನಿಗದಿಪೂರ್ವವಾಗಿಯೇ ತೆಗೆದುಹಾಕುವುದು, ಇತ್ಯಾದಿ. ಇದಲ್ಲದೆ, ಕಾಳಧನ ಹಾಗೂ ಭ್ರಷ್ಟಾಚಾರ ನಿರ್ಮೂಲನೆಯ ದೃಷ್ಟಿಯಿಂದ ಅಧಿಕ ಮೌಲ್ಯದ ನೋಟುಗಳನ್ನು ಸರ್ಕಾರ ಅಮಾನ್ಯಗೊಳಿಸಿತು. ಕಪ್ಪುಹಣ ದಂಧೆಯನ್ನು ಹತ್ತಿಕ್ಕಲು ಒಂದು ವಿಶೇಷ ತನಿಖಾ ತಂಡವನ್ನೂ ರಚಿಸಲಾಯಿತು. ಕಲ್ಲಿದ್ದಲಿನ ವಹಿವಾಟಿನಲ್ಲಿ ವಿದ್ಯುನ್ಮಾನ ಹರಾಜನ್ನೂ ನಡೆಸಿತು, ಸರ್ಕಾರ. ಯೂರೋಪ್ ಮತ್ತಿತರ ದೇಶಗಳಲ್ಲಿ ತೆರಿಗೆ ವಿಧಾನವನ್ನು ಕೊನೆಗೊಳಿಸಲು ನೆರವು ನೀಡಬೇಕೆಂದು ಜಿ–20 ಸಭೆಗಳಲ್ಲಿ ಅಂತಾರಾಷ್ಟ್ರೀಯ ಸಹಕಾರವನ್ನು ಸರ್ಕಾರ ಕೋರಿತು. ಸ್ವಿಸ್ ರಾಷ್ಟ್ರಾಧಿಕಾರದೊಂದಿಗಿನ ದ್ವಿಪಕ್ಷೀಯ ಮಾತುಕತೆಗಳ ಸಂದರ್ಭದಲ್ಲಿ ಭಾರತ, ಕಪ್ಪು ಹಣದ ಪಿಡುಗು ಹಾಗೂ ತೆರಿಗೆ ವಂಚನೆಯನ್ನು ತಡೆಯುವುದೇ ಎರಡೂ ರಾಷ್ಟ್ರಗಳ 'ಸಮಪಾಲಿನ ಆದ್ಯತೆ' ಆಗಿರಬೇಕೆಂದು ಹೇಳಿತು.

### ಸಾಂಸ್ಥಿಕ ಹಾಗೂ ಶಾಸನೀಯ ಸಿದ್ಧಸೂತ್ರ

ಭಾರತದ ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ಒಂದು ಸದೃಢ ಹಾಗೂ ಪುರಾತನ ಸಾಂಸ್ಥಿಕ ಹಾಗೂ ಶಾಸನೀಯ ಸಿದ್ಧಸೂತ್ರ ಮುನ್ನಡೆಸುತ್ತಿದೆ. ಇದರಲ್ಲಿ ಅಪರಾಧೀಕರಣ ಹಾಗೂ ಲಂಚಬಾಕತನದ ಹಲವು ವಲಯಗಳಿಗೆ ವ್ಯಾಪಿಸುವ, ಭ್ರಷ್ಟಾಚಾರ ತಡೆ ಕಾಯ್ದೆ, ಕೇಂದ್ರದ ಸ್ವತಂತ್ರ ಗುಪ್ತದಳ ಆಯೋಗ, ಮಹಾಲೇಖಪಾಲರು, ನ್ಯಾಯಾಧೀಶರ (ವಿಚಾರಣಾ) ಕಾಯ್ದೆ, ಲೋಕಪಾಲ್ ಮತ್ತು ಲೋಕ ಆಯುಕ್ತ ಕಾಯ್ದೆ 2013, ವಿಸಲ್ ಬ್ಲೋಯರ್ಸ್ ರಕ್ಷಣಾ ಕಾಯ್ದೆ 2011, ಹಣಕಾಸಿನ ಲೇವಾದೇವಿ ತಡೆ ಕಾಯ್ದೆ, ಬೇನಾಮಿ

* ಅಧ್ಯಕ್ಷರು, ರಾಜಸ್ಥಾನ ತೆರಿಗೆ ಮಂಡಳಿ. E-mail : vsrinivas@nic.in

ವ್ಯವಹಾರಗಳ (ನಿಷೇಧ) ಕಾಯ್ದೆ ಸೇರಿವೆ. ಎಲ್ಲಾ ಸಾರ್ವಜನಿಕ ಉದ್ಯೋಗಿಗಳೂ ತಮ್ಮ ಆಸ್ತಿವಿವರವನ್ನು ಪ್ರತಿವರ್ಷವೂ ಕಡ್ಡಾಯವಾಗಿ ಘೋಷಿಸಿಕೊಳ್ಳಲೇಬೇಕಾದ ಅಗತ್ಯವಿದೆ. ಪ್ರತಿ ಚುನಾವಣಾ ಆವರ್ತದಲ್ಲಿ ಪ್ರತಿಯೊಬ್ಬ ಜನಪ್ರತಿನಿಧಿಯೂ ತಮ್ಮ ಆಸ್ತಿ ವಿವರ ಘೋಷಿಸಿಕೊಳ್ಳಬೇಕು.

### ಆಡಳಿತವನ್ನು 'ಸ್ಮಾರ್ಟ್'ಗೊಳಿಸುವತ್ತ

ಪ್ರಧಾನಮಂತ್ರಿಯವರು ಆಗಸ್ಟ್ 2014ರಂದು ಮಾಡಿದ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ, ದೇಶದ ಪ್ರತಿಯೊಬ್ಬ ನಾಗರಿಕರನ್ನೂ ಆರ್ಥಿಕ ವರ್ತುಲದೊಳಗೆ ಒಗ್ಗೂಡಿಸುವ ಪ್ರಯತ್ನವಾಗಿ ಪ್ರಧಾನಮಂತ್ರಿ ಜನಧನ ಯೋಜನೆಯನ್ನು ರಾಷ್ಟ್ರೀಯ ಮಿಷನ್ ಅನ್ನಾಗಿ ಘೋಷಿಸಿದರು. 'ದೇಶದ ಆರ್ಥಿಕ ಸಂಪನ್ಮೂಲವನ್ನು ಬಡವರ ಕಲ್ಯಾಣಕ್ಕಾಗಿ ಬಳಕೆ ಮಾಡಬೇಕು' ಎಂದವರು ಹೇಳಿದರು. ಈ ಹಂತದಿಂದಲೇ ಬದಲಾವಣೆ ಆರಂಭವಾಗುತ್ತದೆ. ಆಡಳಿತವನ್ನು 'ಸ್ಮಾರ್ಟ್'ಗೊಳಿಸುವತ್ತ ಭಾರತ ಹೊಂದಿರುವ ದೃಷ್ಟಿಕೋನ, ಭ್ರಷ್ಟಾಚಾರದ ವಿರುದ್ಧದ ಯುದ್ಧದಲ್ಲಿ ಮುಂಚೂಣಿಯ ಪಾತ್ರ ನಿರ್ವಹಿಸುತ್ತದೆ. ಬ್ಯಾಂಕಿಂಗ್ ವಲಯದ ತಂತ್ರಜ್ಞಾನ ಕ್ರಾಂತಿ, ಕೋಟ್ಯಾಂತರ ಭಾರತೀಯರಿಗೆ ಅನುಕೂಲ ಒದಗಿಸಿದ ಗಮನಾರ್ಹ ಯಶೋಗಾಥೆಯಾಗಿದೆ. ಇದೇ ಪ್ರಮಾಣದ ಸಹಾಯಧನವನ್ನು ಸ್ಮಾರ್ಟ್ ಆಡಳಿತ ವ್ಯವಸ್ಥೆಯ ಮೂಲಕ ಇನ್ನೂ ಪರಿಣಾಮಕಾರಿಯಾಗಿ ಬಳಕೆ ಮಾಡಬಹುದು. ಜನಧನ ಯೋಜನೆ ವಿಶೇಷ ಸಾಲ ಸೌಲಭ್ಯದ ಜೊತೆಗೆ, ಬ್ಯಾಂಕಿಂಗ್ ಖಾತೆಗಳಿಗೆ ಸಾರ್ವತ್ರಿಕ ಮತ್ತು ಸರಾಗ ಹಾದಿಯನ್ನು ತೆರೆದಿಡುತ್ತದೆ. ಸಹಾಯವಂಚಿತ ಜನರಲ್ಲಿ ಸಾಲಸೌಲಭ್ಯದ ಸಂಸ್ಕೃತಿಯನ್ನು ಪ್ರೇರೇಪಿಸಲು ಬ್ಯಾಂಕುಗಳಿಗೆ ಬೇಕಾಗಿದ್ದ ಅಗತ್ಯವಿದ್ದ ಆತ್ಮವಿಶ್ವಾಸವನ್ನು ಜನಧನ ಯೋಜನೆ ಪೂರೈಸಿತು. ಇದು ಗ್ರಾಮೀಣ ಪ್ರದೇಶದಲ್ಲಿ ಸಾಲದ ಹರಿವು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. 2106ರಲ್ಲಿ, ಜನತೆಗೆ ಹಣಕಾಸು ಮತ್ತಿತರ ಸಬ್ಸಿಡಿ ನೆರವು ಹಾಗೂ ಸೇವೆಗಳನ್ನು ಫಲಾನುಭವಿಗಳಿಗೇ ನೇರವಾಗಿ ತಲುಪಿಸುವ ಹಣಕಾಸು ಮಸೂದೆಯಾಗಿ ಆಧಾರ್ ಕಾಯ್ದೆಯನ್ನು ರೂಪಿಸಲಾಯಿತು. ಈ ಕಾಯ್ದೆ, ಆಧಾರ್ ವಿಶಿಷ್ಟ ಗುರುತಿನ ಸಂಖ್ಯೆ ಯೋಜನೆಗೆ ಕಾನೂನಾತ್ಮಕ ಶಕ್ತಿ




ತಂದುಕೊಟ್ಟಿದ್ದಲ್ಲದೆ ಭಾರತದ ಸಂಚಿತ ನಿಧಿಯಿಂದ ಮಾಡುವ ಪ್ರತಿಯೊಂದು ಸಬ್ಸಿಡಿ, ಸಹಾಯ, ಸೇವೆಗಳ ವೆಚ್ಚವೂ ಆಧಾರ್ ಗುರುತಿನ ಸಂಖ್ಯೆಯ ಮೂಲಕ ಅವು ತಲುಪಬೇಕಾದ ಪ್ರತಿಯೊಬ್ಬರಿಗೂ ಪರಿಣಾಮಕಾರಿಯಾಗಿ ಪಾರದರ್ಶಕವಾಗಿ ತಲುಪಲೇ ಬೇಕೆನ್ನುವಂತೆ ಮಾಡಿತು. 2016ರಲ್ಲಿ ಸರ್ಕಾರ ಇರಿಸಿದ ಮತ್ತೊಂದು ಮಹತ್ವಪೂರ್ಣ ಹೆಜ್ಜೆ ಎಂದರೆ ಭಾರತ್ ಇಂಟರ್ ಫೇಸ್ ಫಾರ್ ಮನಿ–ಭೀಮ್ (ಬಿಎಚ್ಐಎಮ್), ಇದು ಸಂಚಯಿತ ಪಾವತಿ ಪದ್ಧತಿಯಡಿಯಲ್ಲಿ ಭಾರತದ ರಾಷ್ಟ್ರೀಯ ಪಾವತಿ ನಿಗಮ ಅಭಿವೃದ್ಧಿ ಪಡಿಸಿದ ಮೊಬೈಲ್ ತಂತ್ರಾಂಶಾನ್ವಯಿಕ (ಅಪ್ಲಿಕೇಷನ್). ಬ್ಯಾಂಕುಗಳ ಮೂಲಕ ನೇರ ಇ– ಪಾವತಿ, ನಗದು ರಹಿತ ವಹಿವಾಟು, ಇಬ್ಬರ ಮಧ್ಯೆ ನೇರ ಬ್ಯಾಂಕ್ ಮೂಲಕ ಹಣ ವರ್ಗಾಯಿಸುವ ಸೌಲಭ್ಯ ಒದಗಿಸುವುದಲ್ಲದೆ ಮೊಬೈಲ್ ಫೋನ್‌ಗಳ ಮೂಲಕವೇ ವ್ಯವಹಾರ ನಡೆಸಬಹುದಾದ ಸೌಲಭ್ಯವನ್ನೂ ಒಳಗೊಂಡಿದೆ. ಫಲಾನುಭವಿಗಳಿಗೆ ದೊರೆಯಬೇಕಾದ ಸಬ್ಸಿಡಿ ನೆರವಿನ ಹರಿವು ಸಕಾಲಕ್ಕೆ ಹಾಗೂ ಸಮರ್ಪಕವಾಗಿ ಸೇರುವಂತೆ ಮಾಡುವಲ್ಲಿ ಜನಧನ ಯೋಜನೆ, ಆಧಾರ್ ಕಾಯ್ದೆ ಮತ್ತು ಭೀಮ್ ಮೂರೂ ಯೋಜನೆಗಳು ಸೇರಿ ಪಾರದರ್ಶಕ ಸರ್ಕಾರ ಒತ್ತಾಸೆ ನೀಡಿವೆ. ಜನಧನ–ಆಧಾರ್–ಮೊಬೈಲ್ (ಜಾಮ್) ತಂತ್ರಜ್ಞಾನ, ಯೂನಿಫೈಡ್ ಪೇಮೆಂಟ್ ಇಂಟರ್‌ಫೇಸ್ ಮೂಲಕ ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಇ–ಮೇಲ್‌ನಷ್ಟೇ ಸರಳಗೊಳಿಸಿದೆ.ಹಣಕಾಸಿನ ರಾಷ್ಟ್ರೀಯ ಇ–ವರ್ಗಾವಣೆ (ನೆಫ್ಟ್), ರಿಯಲ್ ಟೈಮ್ ಗ್ರಾಸ್ ಸೆಟಲ್‌ಮೆಂಟ್, (ಆರ್ ಟಿ ಜಿ ಎಸ್), ತ್ವರಿತ ಪಾವತಿ ಸೇವೆ (ಐ ಎಂ ಪಿ ಎಸ್) ಮತ್ತು ಇ–ಪಾವತಿ ವ್ಯವಸ್ಥೆ (ಇಸಿಎಸ್) ಗಳ ಮೂಲಕ ಮಾಡುವ ಸಂದಾಯ ವ್ಯವಹಾರ ಮುಖ್ಯವಾಹಿನಿಯ ಬ್ಯಾಂಕಿಂಗ್ ವಲಯದ ಚಟುವಟಿಕೆಗಳಲ್ಲಿ ತ್ವರಿತವಾಗಿ ಸಮಷ್ಟಿಗೊಳ್ಳುತ್ತಿದೆ.

### ತಡೆಹಿಡಿಯಬಹುದಾದ ವಿಚಕ್ಷಣಾ ಬಲವರ್ಧನೆಯತ್ತ ದೃಷ್ಟಿ


ಕೇಂದ್ರ ವಿಚಕ್ಷಣಾ ಆಯೋಗದ (ಸಿವಿಸಿ), ಸಂಸತ್ ಸದಸ್ಯ ಶ್ರೀ ಕೆ. ಸಂತಾನಂ ಅವರ ನೇತೃತ್ವದ ಭ್ರಷ್ಟಾಚಾರ ನಿಗ್ರಹ ಸಮಿತಿಯ ಶಿಫಾರಸ್ಸುಗಳ ಆಧಾರದಲ್ಲಿ ತನ್ನ ನೆಲೆಯನ್ನು ಕಂಡುಕೊಂಡಿದೆ. ಸಂತಾನಂ ಸಮಿತಿಯು ಭ್ರಷ್ಟಾಚಾರಕ್ಕೆ ಇರುವ 4 ಮುಖ್ಯ ಕಾರಣಗಳನ್ನು ಗುರುತಿಸಿದೆ. ಆಡಳಿತಾತ್ಮಕ ವಿಳಂಬ, ನಿಯಂತ್ರಕ ಸೂತ್ರಗಳ ಮೂಲಕ ತಾನು ಮಾಡಬಹುದಾದದ್ದಕ್ಕಿಂತ ಹೆಚ್ಚಿನದನ್ನು ಸರ್ಕಾರ ಕೈಗೆತ್ತಿಕೊಳ್ಳುವುದು, ಹಲವು ವರ್ಗಗಳ ಅಧಿಕಾರಿಗಳಿಗೆ ನೀಡಲಾಗಿರುವ ಅಧಿಕಾರ ಬಳಕೆಯಲ್ಲಿ ವೈಯಕ್ತಿಕ ವಿವೇಚನೆ ಬಳಸುವ ಅಭ್ಯಾಸ ಮತ್ತು ಅದನ್ನು ಪಾಲಿಸುವ ಸಂಕೀರ್ಣ ಕಾರ್ಯಸೂಚಿಗಳು. ಸಂತಾನಂ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ, ಕೇಂದ್ರ ಸರ್ಕಾರಿ ಸಂಸ್ಥೆಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸುವ ಒಂದು ಉನ್ನತ ಸಂಸ್ಥೆಯಾಗಿ ಭಾರತ ಸರ್ಕಾರ ನಿರ್ಣಯದನ್ವಯ ಸಿವಿಸಿಯನ್ನು 1964ರಲ್ಲಿ ರಚನೆ ಮಾಡಿತು.

1997ರಲ್ಲಿ, ಭಾರತದ ಸರ್ವೋಚ್ಚ ನ್ಯಾಯಾಲಯ ನೀಡಿದ ನಿರ್ದೇಶನದ ಅನುಸಾರ ಜೈನ್ ಹವಾಲಾ ಪ್ರಕರಣದಲ್ಲಿ, ಸಿವಿಸಿಗೆ ಖಾಯಂ ಸ್ಥಾನಮಾನ ಕಲ್ಪಿಸಿಕೊಡಲಾಯಿತು. ಕೇಂದ್ರ ವಿಚಕ್ಷಣಾ ಆಯೋಗ ಕಾಯ್ದೆ 2003, ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ, ಸಾರ್ವಜನಿಕ ಸೇವೆಗಳಲ್ಲಿ ಹಾಗೂ ನಿಗಮಗಳಲ್ಲಿ ನಡೆದಿದೆ ಎನ್ನಲಾಗುವ ಭ್ರಷ್ಟಾಚಾರ ಅಪರಾಧಗಳ ಕುರಿತು ತನಿಖೆ ನಡೆಸಲು ಅನುಕೂಲವಾಗುವಂತೆ ಕೇಂದ್ರ ವಿಚಕ್ಷಣಾ ಆಯೋಗದ ರಚನೆಗೆ ಅನುವು ಮಾಡಿಕೊಟ್ಟಿದೆ. ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕತೆ, ವಸ್ತುನಿಷ್ಠತೆ ಮತ್ತು ಉತ್ತರದಾಯಿತ್ವವನ್ನು ಸ್ಥಿರಗೊಳಿಸಲು ಕೇಂದ್ರ ವಿಚಕ್ಷಣಾ ಆಯೋಗ ಪ್ರಯತ್ನಗಳನ್ನು ನಡೆಸಿದೆ. ಹಲವಾರು ನಿಯಂತ್ರಕ ಕ್ರಮಗಳನ್ನು ಕೇಂದ್ರ ವಿಚಕ್ಷಣಾ ಆಯೋಗ ಜಾರಿಗೊಳಿಸಿದೆ. ಸರ್ಕಾರದ ಇ – ಮಾರುಕಟ್ಟೆ, (ಜೆಮ್)ನಂತಹ ಕ್ರಮಗಳು ಇ–ಟೆಂಡರ್ ಹಾಗೂ ಇ–ಖರೀದಿ ಪ್ರಕ್ರಿಯೆಯನ್ನು ಪ್ರೋತ್ಸಾಹಿಸುವ ಮೂಲಕ ಸಾರ್ವಜನಿಕ ಖರೀದಿಯಲ್ಲಿ ಉತ್ತರದಾಯಿತ್ವ ಹಾಗೂ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ನೆರವು ನೀಡುತ್ತಿದೆ. ವಿದ್ಯಾರ್ಥಿಗಳಿಗೆ

ಹಾಗೂ ಯುವಜನತೆಗೆ ಶಿಕ್ಷಣದ ಮೂಲಕ ನೈತಿಕ ಪ್ರಜ್ಞೆಯನ್ನು ಪ್ರೇರೇಪಿಸುವುದಕ್ಕಾಗಿ ವಿಚಕ್ಷಣಾ ಜಾಗೃತಿ ಸಪ್ತಾಹದ ಆಚರಿಸುವುದು, ಸಾರ್ವಜನಿಕ ಸೇವಕರೊಂದಿಗೆ ಸಂವಾದ ನಡೆಸುವುದು, ವಿವೇಚನಾಧಾರಿತ ತೀರ್ಮಾನಗಳನ್ನು ಕೈಗೊಳ್ಳುವುದನ್ನು ಕುಗ್ಗಿಸುವ ಸಲುವಾಗಿ ಪ್ರಕ್ರಿಯೆಗಳನ್ನು ಸರಳಗೊಳಿಸುವುದು, ಪ್ರಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿಯನ್ನು ಪ್ರೋತ್ಸಾಹಿಸುವುದು,ಅಪರಾಧ ಸಾಬೀತಾದ ಎಲ್ಲ ಪ್ರಕರಣಗಳಲ್ಲಿ ಮಾದರಿ ಶಿಕ್ಷೆಗಳನ್ನು ವಿಧಿಸುವುದು, ಮುಂಥಾದ ವಿಷಯಗಳತ್ತ ಗಮನ ಹರಿಸುವಂತೆ ಆಯೋಗವನ್ನು ಕೋರಲಾಗಿದೆ. ಭ್ರಷ್ಟಾಚಾರದ ವಿರುದ್ಧ ಸ್ವಯಂಪ್ರೇರಿತರಾಗಿ ಸಾರ್ವಜನಿಕರು ಹಾಗೂ ಸಂಘಸಂಸ್ಥೆಗಳು ಕೈಗೊಳ್ಳುವಂತಹ ಇ–ಪ್ರತಿಜ್ಞೆಯ ಮೂಲಕ ಜನಾಂದೋಲನ ಸೃಷ್ಟಿಸುವಂತೆಯೂ ಸಿವಿಸಿಯನ್ನು ಕೋರಲಾಗಿದೆ. ಪಾರದರ್ಶಕತೆ, ಕಾರ್ಯಕ್ಷಮತೆ, ಹಾಗೂ ಪ್ರಜಾಕೇಂದ್ರಿತ ಆಡಳಿತವನ್ನು ನೀಡುವ ಸಲುವಾಗಿ ಸಂಘಸಂಸ್ಥೆಗಳ ಒಂದು ಸಮಗ್ರ ಅನುಕ್ರಮಣಿಕೆಯನ್ನು ಸಿದ್ಧಪಡಿಸಲಾಗಿದೆ.

### ಆಡಿಟಿಂಗ್ ಮತ್ತು ಲೇಖಪಾಲನಾ ಪ್ರಕ್ರಿಯೆಯನ್ನು ಬಲಪಡಿಸುವುದು

ಭ್ರಷ್ಟಾಚಾರದ ವಿರುದ್ಧ ಸೆಣೆಸುವುದರಲ್ಲಿ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್(ಸಿ ಮತ್ತು ಎಜಿ) ಒಂದು ಪ್ರಮುಖ ಸಂಸ್ಥೆ. 2014ರಿಂದಲೂ ಯಾವುದೇ ಸಂಸ್ಥೆಯ ಲೆಕ್ಕ ಪರಿಪಾಲನೆ ಹಾಗೂ ಲೆಕ್ಕ ದಾಖಲಾತಿಗಳ ಅಭ್ಯಾಸ ಮಾಡುವಲ್ಲಿ ಮತ್ತು ಎಜಿ ಸರ್ಕಾರದ ಆರ್ಥಿಕ ಆಡಳಿತ ಸುಧಾರಣಾ ಕ್ರಮಗಳನ್ನು ಅಳವಡಿಸಿಕೊಂಡಿದೆ. ಆರ್ಥಿಕ ಆಡಳಿತದಲ್ಲಿ ಪರಿಚಯಿಸಿರುವ ಕೆಲ ಮಹತ್ವದ ಬದಲಾವಣೆಗಳೆಂದರೆ ರೈಲ್ವೆ ಮತ್ತು ಸಾಮಾನ್ಯ ಆಯವ್ಯಯ ಪತ್ರಗಳನ್ನು ವಿಲೀನಗೊಳಿಸಿರುವುದು, ಯೋಜನಾ ಹಾಗೂ ಯೋಜನೇತರ ವೆಚ್ಚಗಳನ್ನು ಮಿಳಿತಗೊಳಿಸಿರುವುದು, ವಿದೇಶಿ ನೇರ ಬಂಡವಾಳ ಹೂಡಿಕೆಗೆ ಹಲವಾರು ವಲಯಗಳನ್ನು ತೆರೆದಿರುವುದು ಮತ್ತು ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೆ ಕೊಟ್ಟಿರುವುದು.ಮೂರು ಸ್ತರದ ಆಡಳಿತದವ್ಯವಸ್ಥೆಯಾದ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತಿ ರಾಜ್




ಸಂಸ್ಥೆಗಳು ವಾರ್ಷಿಕ ಸರಿಸುಮಾರು 14 ಲಕ್ಷ ಕೋಟಿ ರೂಪಾಯಿಯಷ್ಟು ಹಂಚಿಕೆ ಪಡೆಯುತ್ತವೆ, ಆದರೆ ಆಡಳಿತ ಪದ್ಧತಿ, ಆರ್ಥಿಕ ನಿರ್ವಹಣೆ ಮತ್ತು ಉತ್ತರದಾಯಿತ್ವದ ದುರ್ಬಲತೆಗಳ ಕಾರಣ ನಿತ್ರಾಣವೆನಿಸುತ್ತವೆ. ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಸಂಖ್ಯೆ ಹಾಗೂ ಅವು ಹರಡಿಕೊಂಡ ಭೌಗೋಳಿಕ ವಿಸ್ತಾರವನ್ನು ಗಮನದಲ್ಲಿರಿಸಿಕೊಂಡು ಅವಕ್ಕೆ ಹರಿದು ಬರುವ ಅಗಾಧ ಹಣದ ವಿಚಾರದಲ್ಲಿ ಸಿ ಮತ್ತು ಎಜಿ ಆಕ್ಷೇಪಣೆಗಳನ್ನು ಎತ್ತಿದ್ದು, ಅವುಗಳ ವಾಸ್ತವಿಕತೆ ಹಾಗೂ ಅವು ತಂದೊಡ್ಡುವ ಸವಾಲುಗಳ ನಿಟ್ಟಿನಿಂದ ಹೆಚ್ಚಿನ ಸ್ಪಷ್ಟತೆ ಕಂಡುಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಿದೆ. ಕಂದಾಯ ಆಡಳಿತದಲ್ಲಿ ಬದಲಾಗುತ್ತಿರುವ ಆದ್ಯತೆಗಳನ್ನು, ಮರೆಮಾಚಿದ ಅರ್ಥವ್ಯವಸ್ಥೆ ಹಾಗೂ ಕಪ್ಪುಹಣ, ವರ್ಗಾವಣೆ ದಂಧೆ ಮತ್ತು ವಸತಿ ಬಿಲ್ಲು ಮುಂತಾದ ಅಕ್ರಮಗಳನ್ನು ಸಿ ಮತ್ತು ಎಜಿ ಗುರುತಿಸಿದೆ. ಆನರು ಸ್ವಯಂ ಪ್ರೇರಣೆಯಿಂದ ತೆರಿಗೆ ಪಾವತಿಸುವುದು, ಅದನ್ನು ಲೆಕ್ಕ ಮಾಡಿಸುವುದು ಹಾಗೂ ಮರುಪಾವತಿ ಮಾಡುವ ಕ್ರಿಯೆಗಳಲ್ಲಿ ಅಪಾರ ಪ್ರಮಾಣದ ಗಣಕ ಮಾಹಿತಿಯನ್ನು ನಿರ್ವಹಿಸಬೇಕಾಗಿದೆ.

### ಆಡಳಿತದಲ್ಲಿ ಪಾರದರ್ಶಕತೆ

ಮಾಹಿತಿ ಹಕ್ಕು ಕಾಯ್ದೆ 2005 ಎನ್ನುವುದು ಒಂದು ಹಕ್ಕು ಆಧರಿತ ಕಾನೂನಾಗಿದ್ದು ಭಾರತದ ಪ್ರಜಾಸತ್ತಾತ್ಮಕತೆಯನ್ನು ಇನ್ನಷ್ಟು ಸುಭದ್ರಗೊಳಿಸುವ ಮತ್ತು ರಾಷ್ಟ್ರದ ಆಡಳಿತ ವ್ಯವಸ್ಥೆಯಲ್ಲಿ ನಾಗರಿಕರ ಕೈಗೆ ದಾಳಗಳನ್ನು ಕೊಡುವ ಯತ್ನವಾಗಿದೆ. ಮಾಹಿತಿ ಹಕ್ಕು ಕಾಯ್ದೆಯನ್ನು ಕಾರ್ಯರೂಪಕ್ಕೆ ತರುವುದರ ಹಿಂದೆ ಪ್ರಜೆಗಳಿಗೆ ತಿಳಿದುಕೊಳ್ಳುವ ಹಕ್ಕನ್ನು ಮಾತ್ರ ನೀಡದೆ ಪ್ರಶ್ನಿಸುವ ಹಕ್ಕನ್ನೂ ನೀಡಬೇಕು, ಮಾಹಿತಿಯನ್ನು ಪಡೆದುಕೊಳ್ಳುವ ಅವರ ಮಾರ್ಗ ಪಾರದರ್ಶಕವೂ, ಸಮಯಬದ್ಧವೂ, ಕಷ್ಟಮುಕ್ತವೂ ಆಗಿರಬೇಕು ಎಂದು ಪ್ರಧಾನಮಂತ್ರಿಯವರು ಹೇಳಿದ್ದಾರೆ. ಜಾರಿಗೆ ನೀಡಿದ ಒಂದು ದಶಕದ ನಂತರ ರಾಷ್ಟ್ರಾದ್ಯಂತ ಮಾಹಿತಿ ಹಕ್ಕು ಕಾಯ್ದೆಯ ಉಪಯುಕ್ತತೆಯ ಅರಿವಾಗುತ್ತಿದೆ. ಆಡಳಿತದಲ್ಲಿ ಸುಧಾರಣೆಗಳನ್ನು ತರಲು ಆರ್ ಟಿ ಐ ನೆರವಾಗಿದೆ. ಮಾಹಿತಿಯ ವಿನಿಮಯದಿಂದಾಗಿ ನಾಗರಿಕರು ನಿರ್ಧಾರವನ್ನು ಕೈಗೊಳ್ಳುವ ಆಡಳಿತ ಪ್ರಕ್ರಿಯೆಯ ಒಂದು ಭಾಗವಾಗಿದ್ದಾರೆ. ಇದು ನಾಗರಿಕರು ಹಾಗೂ ಸರ್ಕಾರದ ನಡುವೆ ವಿಶ್ವಾಸವನ್ನು ಮೂಡಿಸಲು ಅನುಕೂಲಕರವಾಗಿದೆ.

### ಲೋಕಪಾಲ ಹಾಗೂ ಲೋಕಾಯುಕ್ತ ಕಾಯ್ದೆ 2013

ಕೇಂದ್ರ ವಿಚಕ್ಷಣಾ ಆಯೋಗ ಕಾಯ್ದೆ 2003ಕ್ಕೆ ಕೆಲ ತಿದ್ದುಪಡಿಗಳನ್ನು ಲೋಕಪಾಲ ಹಾಗೂ ಲೋಕಾಯುಕ್ತ ಕಾಯ್ದೆ 2013 ಒದಗಿಸಿಕೊಟ್ಟಿದೆ. ಇದರನ್ವಯ, ಸರ್ಕಾರದ ಎ ಶ್ರೇಣಿ ಅಧಿಕಾರಿಗಳಲ್ಲದೆ, ಬಿ, ಸಿ ಮತ್ತು ಡಿ ದರ್ಜೆ ಅಧಿಕಾರಿಗಳು ಹಾಗೂ ನೌಕರರ ವಿಚಾರದಲ್ಲಿ ಲೋಕಪಾಲ ಸೂಚಿಸಿದ ದೂರುಗಳ ಪ್ರಾಥಮಿಕ ವಿಚಾರಣೆಗಳನ್ನು ನಡೆಸುವ ಅಧಿಕಾರ ಕೇಂದ್ರ ವಿಚಕ್ಷಣಾ ಆಯೋಗಕ್ಕೆ ಪ್ರಾಪ್ತವಾಗುತ್ತದೆ.ಇದಕ್ಕಾಗಿ ಆಯೋಗದಲ್ಲಿ ಒಂದು ವಿಚಾರಣಾ ನಿರ್ದೇಶನಾಲಯವನ್ನು ರಚಿಸಲಾಗುತ್ತದೆ. ಎ ಮತ್ತು ಬಿ ಗುಂಪಿನ ಅಧಿಕಾರಿಗಳ ವಿಷಯದಲ್ಲಿ ಲೋಕಪಾಲ ಸೂಚಿಸಿದ ಪ್ರಕರಣಗಳ ಮೊದಲ ಹಂತದ ವಿಚಾರಣೆಯ ವರದಿಯನ್ನು ಲೋಕಪಾಲಕ್ಕೆ ಕಳಿಸಿಕೊಡಬೇಕಾಗಿರುತ್ತದೆ. ಸಿ ಮತ್ತು ಡಿ ಗುಂಪಿನ ನೌಕರರ ಸಂದರ್ಭದಲ್ಲಿ, ಲೋಕಪಾಲ ಸೂಚಿಸಿದ ಪ್ರಕರಣದಲ್ಲಿ ವಿಚಾರಣೆ ನಡೆಸುವುದೇ ಅಲ್ಲದೆ ಮುಂದಿನ ಕ್ರಮವೇನೆಂಬುದನ್ನೂ ನಿರ್ಧರಿಸುವ ಕಡ್ಡಾಯ ಹೊಣೆಗಾರಿಕೆಯೂ ಆಯೋಗಕ್ಕಿದೆ.

### ಭ್ರಷ್ಟಾಚಾರ ತಡೆ ಕಾಯ್ದೆ 1988ರ ತಿದ್ದುಪಡಿ

ಭ್ರಷ್ಟಾಚಾರವನ್ನು ತಡೆಯುವ ಕಾನೂನಿಗೆ ತಿದ್ದುಪಡಿ ತರಲು ಹಾಗೂ ಅದನ್ನು ಸಮಗ್ರಗೊಳಿಸಲೆಂದು ರೂಪಿತಗೊಂಡ ಕಾಯ್ದೆಯೇ ಭ್ರಷ್ಟಾಚಾರ ತಡೆ ಕಾಯ್ದೆ.

ಆಡಳಿತ ಕಾಯ್ದೆಯಲ್ಲಿ ತಿಳಿಸಿರುವಂತೆ ಕಾನೂನುಬದ್ಧ ಸಂಭಾವನೆಯನ್ನು ಹೊರತು ಪಡಿಸಿ ಬೇರೆ ಯಾವುದೇ ವಿಧದಲ್ಲಿ ಹೆಚ್ಚುವರಿ ಗಳಿಕೆ ಪಡೆಯುವುದು ಶಿಕ್ಷಾರ್ಹ ಅಪರಾಧವಾಗುತ್ತದೆ. ಇದನ್ನು ವಿಚಾರಣೆ ನಡೆಸುವ ಅಧಿಕಾರವನ್ನು ಸಿಬಿಐ ಹಾಗೂ ರಾಜ್ಯದ ಪೊಲೀಸ್ ಅಧಿಕಾರಿಗಳಿಗೆ ನೀಡಲಾಗಿದೆ. ಸಾರ್ವಜನಿಕ ಸೇವಕರ ಉತ್ತರದಾಯಿತ್ವದ ಸ್ತರವನ್ನು ಸೂಕ್ತ ವಾಸ್ತವ ರೀತಿಯಲ್ಲಿ ಇರಿಸಿಕೊಂಡರೆ, ಪ್ರಾಮಾಣಿಕ ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಅಧಿಕಾರಿಗಳು ಹಿಂಜರಿಯುವುದಿಲ್ಲ ಎಂದು ಸರ್ಕಾರ ಹೇಳಿದೆ. ಭ್ರಷ್ಟಾಚಾರ ತಡೆ ಕಾಯ್ದೆಗೆ ತಿದ್ದುಪಡಿ ಮಸೂದೆಯೊಂದನ್ನು ತಂದು, ಅದರಲ್ಲಿ ಈಗಿರುವ ಅಪರಾಧ ದುರ್ನಡತೆ ಎನ್ನುವ ವ್ಯಾಖ್ಯಾನವನ್ನು ಬದಲಿಸುವ ಪ್ರಸ್ತಾಪವನ್ನು ಸರ್ಕಾರ ಮಾಡಿದೆ. ಇದರನ್ವಯ ಆದಾಯಕ್ಕಿಂತ ಹೆಚ್ಚು ಆಸ್ತಿ ಸಂಪಾದಿಸಿದ ಉದ್ದೇಶ, ಅಂತಹ ಆಸ್ತಿ ಹೊಂದಿದ್ದರ ಜೊತೆಗೆ ಅದನ್ನು ಗಳಿಸಿದ ರೀತಿಯನ್ನು ಸಾಬೀತು ಪಡಿಸುವುದು ಸೇರಿದೆ. ಈ ಮೂಲಕ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳಿಕೆಯ ಅಪರಾಧದ ಹೊಣೆಯನ್ನು ನಿಗದಿಪಡಿಸಬಹುದಾಗಿದೆ.

### ಭದ್ರತಾವ್ಯವಸ್ಥೆ

ದೇಶದಲ್ಲಿ ಬೇನಾಮಿ ಆಸ್ತಿ ಸಂಬಂಧ ಮಾಹಿತಿ ಒದಗಿಸುವವರಿಗೆ ಸತತ ರಕ್ಷಣೆ ಒದಗಿಸುವ ದೃಷ್ಟಿಯಿಂದ ಸಾರ್ವಜನಿಕ ಹಿತಾಸಕ್ತಿಯ ಬಹಿರಂಗ ಪಡಿಸುವ ಮತ್ತು ಬಹಿರಂಗ ಪಡಿಸುವ ವ್ಯಕ್ತಿಗೆ ರಕ್ಷಣೆ ಒದಗಿಸುವ ಮಸೂದೆ, 2011 ಅನ್ನು 2010ರ ಆಗಸ್ಟ್ ತಿಂಗಳಿನಲ್ಲಿ ಲೋಕಸಭೆಯಲ್ಲಿ ಮಂಡಿಸಲಾಯಿತು. 2011ರ ಡಿಸೆಂಬರ್‌ನಲ್ಲಿ ಲೋಕಸಭೆಯಲ್ಲಿ ಹಾಗೂ ರಾಜ್ಯಸಭೆಯಲ್ಲಿ ಫೆಬ್ರವರಿ 2014ರಲ್ಲಿಈ ಮಸೂದೆ ಮಾಹಿತಿದಾರರಕ್ಷಣಾ ಮಸೂದೆ ಎನ್ನುವುದಾಗಿ ಅಂಗೀಕಾರವಾಯಿತು. 2014ರ ಮೇ 9ನೇ ತಾರೀಖಿನಂದು ಈ ಮಸೂದೆ ರಾಷ್ಟ್ರಪತಿಯವರ ಅಂಕಿತವನ್ನೂ ಪಡೆದುಕೊಂಡಿತು. ನಂತರ 2015ರಲ್ಲಿ ಈ ಕಾಯ್ದೆಗೆ 21 ತಿದ್ದುಪಡಿಗಳನ್ನು ಮಾಡಲಾಯಿತು. ತಿದ್ದುಪಡಿಗಳನ್ನು ತಂದ ಉದ್ದೇಶವೇನೆಂದರೆ ದೇಶದ ಸಾರ್ವಭೌಮತ್ವ ಹಾಗೂ ಅಖಂಡತೆಗೆ ಹಾಗೂ ರಾಜ್ಯದ ರಕ್ಷಣೆಗೆ ಮುಂತಾದ ವಿಷಯಗಳಲ್ಲಿ ಆಪತ್ತು ಸಂಭವಿಸದ ಹಾಗೆ ಆಸ್ತಿ ವಿವರ ಬಹಿರಂಗಗೊಳಿಸುವ ಪ್ರಕ್ರಿಯೆಯನ್ನು ಬಲಪಡಿಸುವುದಕ್ಕೆ ಅಗತ್ಯವಾದ ಅನುಕೂಲತೆಗಳನ್ನು ಒದಗಿಸುವುದೇ ಆಗಿದೆ. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಕಾಳಜಿಯನ್ನು ಈ ತಿದ್ದುಪಡಿಗಳು ಉದ್ದೇಶಿಸಿವೆ.




### ಬೇನಾಮಿ ವ್ಯವಹಾರಗಳ ಪತ್ತೆಕಾರ್ಯ

ಬೇನಾಮಿ ವ್ಯವಹಾರಗಳ (ತಡೆ) ಕಾಯ್ದೆ, 1988 ಕಳೆದ 28 ವರ್ಷಗಳಿಂದ ನಿಯಮಾವಳಿಯ ಕೈಪಿಡಿಯಲ್ಲಿದ್ದರೂ ಅದರಲ್ಲಿರುವ ಕೆಲ ಒಳದೋಷಗಳ ಕಾರಣ ಅದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಿಲ್ಲ. ಬೇನಾಮಿ ವ್ಯವಹಾರಗಳನ್ನು ಪರಿಣಾಮಕಾರಿಯಾಗಿ ತಡೆಯುವ ಸಂಬಂಧ, ಬೇನಾಮಿ ವ್ಯವಹಾರಗಳ (ತಡೆ) ತಿದ್ದುಪಡಿ ಕಾಯ್ದೆ 2016ರ ಮೂಲಕ 1988ಸದರಿ ಕಾಯ್ದೆಗೆ ತಿದ್ದುಪಡಿ ತರಲಾಯಿತು. ತಿದ್ದುಪಡಿಗೊಳಪಟ್ಟ ಕಾನೂನು ಮೊದಲು ಬೇನಾಮಿ ಆಸ್ತಿಗಳನ್ನು ಗುರಿಯಾಗಿಸಿಕೊಂಡು ನಂತರ ವಶ ಪಡಿಸಿಕೊಳ್ಳಲು ಬೇಕಾದ ಅಧಿಕಾರವನ್ನು ಆದಾಯ ತೆರಿಗೆ ಅಧಿಕಾರಿಗಳಿಗೆ ಒದಗಿಸಿಕೊಡುತ್ತದೆ. ಅದರ ಜೊತೆಗೆ, ಯಾವುದೇ ವ್ಯಕ್ತಿ ಬೇನಾಮಿ ವ್ಯವಹಾರದಲ್ಲಿ ನ್ಯಾಯಾಲಯದಲ್ಲಿ ಅಪರಾಧಿ ಎಂದು ಸಾಬೀತಾದರೆ ಅವರಿಗೆ ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ, 7 ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಸಜೆಯನ್ನು ವಿಧಿಸಬಹುದಾಗಿದೆ. ಆಸ್ತಿಯ ಮಾರುಕಟ್ಟೆ ದರದ ಶೇಕಡ 25ರಷ್ಟು ದಂಡವನ್ನೂ ವಿಧಿಸಬಹುದಾಗಿದೆ. ಬೇನಾಮಿ ವ್ಯವಹಾರಗಳ (ತಡೆ) ತಿದ್ದುಪಡಿ ಕಾಯ್ದೆ 2016, ಅದೇ ವರ್ಷದ ಅಂದರೆ, 2016ರ ನವೆಂಬರ್ 1 ನೇ ತಾರೀಖೀನಿಂದ ಜಾರಿಗೆ ಬಂದಿತು. ಈ ತಿದ್ದುಪಡಿ ಕಾನೂನು ಜಾರಿಗೆ ಬಂದಂದಿನಿಂದ ಹಲವಾರು ಬೇನಾಮಿ ವ್ಯವಹಾರದ ಪ್ರಕರಣಗಳು ಪತ್ತೆಯಾಗಿವೆ.

ಕೊನೆಯಲ್ಲಿ, ಭಾರತ ಭ್ರಷ್ಟಾಚಾರ ಹಾಗೂ ಕಪ್ಪುಹಣದ ವಿರುದ್ಧ ತನ್ನ ಹೋರಾಟವನ್ನು ಮುಂದುವರೆಸುತ್ತದೆ ಎಂದು ಹೇಳಬಹುದು. ಸ್ಮಾರ್ಟ್ ಆಡಳಿತದತ್ತ ಕೇಂದ್ರೀಕರಿಸುವ ಹಿನ್ನೆಲೆಯಲ್ಲಿ ಮಾಡಿದ ಈ ಪ್ರಯತ್ನಗಳು ಉತ್ತಮ ಸಕಾರಾತ್ಮಕ ಫಲಗಳನ್ನು ನೀಡುತ್ತಿವೆ. ❑

## ಅರಿಕೆ

ಯೋಜನಾ, **'ನವಭಾರತ' ಕ್ಕಾಗಿ ನನ್ನ ಸಂಕಲ್ಪ** ವಿಷಯ ಕುರಿತ ಅಂಕಣಕ್ಕಾಗಿ ಕಾಲೇಜು ವಿದ್ಯಾರ್ಥಿಗಳಿಂದ ವಸ್ತುನಿಷ್ಠ ಬರಹ / ಲೇಖನಗಳನ್ನು ಆಹ್ವಾನಿಸಿದೆ. ಸಮೃದ್ಧ, ಸಶಕ್ತ ದೇಶ ನಿರ್ಮಾಣಕ್ಕಾಗಿ ನನ್ನ ಸಂಕಲ್ಪವೇನು ಎಂಬುದನ್ನು ಗರಿಷ್ಠ 250 ಪದಗಳಲ್ಲಿ ವಿವರಿಸಬಹುದಾಗಿದೆ. ಆಯ್ದ ಬರಹಗಳನ್ನು ಯೋಜನಾದಲ್ಲಿ ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ಕಲಿಯುತ್ತಿರುವ ವಿದ್ಯಾಸಂಸ್ಥೆಯಿಂದ ಪ್ರಮಾಣ ಪತ್ರ ಪಡೆದು, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಸ್ವವಿವರವುಳ್ಳ ಅರ್ಜಿ ಮತ್ತು ಬರಹವನ್ನು ನಮ್ಮ ವಿಳಾಸಕ್ಕೆ ಅಕ್ಟೋಬರ್ 20ರ ಒಳಗೆ ತಲುಪಿಸಬೇಕು. (ಬರಹವನ್ನು ಇ-ಮೇಲ್ ಮೂಲಕವೂ ಕಳುಹಿಸಬಹುದಾಗಿದೆ).

**– ಸಂಪಾದಕರು**

ನಮ್ಮ ವಿಳಾಸ :
**ಸಂಪಾದಕರು**
**ಯೋಜನಾ ಕನ್ನಡ**
'ಎಫ್'ವಿಂಗ್ ಮೊದಲ ಅಂತಸ್ತು, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು – 34
ಫೋನ್ : 080 25537244
Email : kannada-yojana@gov.in

# ಕೌಶಲ್ಯ ಮತ್ತು ವಾಣಿಜ್ಯೋದ್ಯಮ ಅಭಿವೃದ್ಧಿ

* ಡಾ. ಅಮಿತ್ ಕುಮಾರ್ ದ್ವಿವೇದಿ
** ಸರವಣನ್ ವೇಲುಸಾಮಿ



**ಗುಣಮಟ್ಟದ ಶಿಕ್ಷಣದ ಕೊರತೆಯಿಂದಾಗಿ ಯುವಕರು ನಿರುದ್ಯೋಗಿಗಳಾಗಿರುವ ಸಾಧ್ಯತೆಯು ಹೆಚ್ಚು. ಉದ್ಯೋಗಾವಕಾಶಗಳ ಕೊರತೆಗಳಿಂದಾಗಿ ಉದ್ಯೋಗ ಮಾರುಕಟ್ಟೆಯಲ್ಲಿ ಪೈಪೋಟಿಯು ಹೆಚ್ಚಿದೆ.**

**ಕ**ಳೆದ ಎರಡು ದಶಕಗಳಿಂದಲೂ ಸರಾಸರಿ ಜಿಡಿಪಿ ಅಭಿವೃದ್ಧಿ ದರ ಶೇ.7ರಷ್ಟಿರುವ ಭಾರತದ ಆರ್ಥಿಕತೆ ವಿಶ್ವದ ದೊಡ್ಡ ಆರ್ಥಿಕತೆಗಳಲ್ಲಿ ಒಂದಾಗಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೊಸದಾಗಿ ವರ್ಗೀಕರಿಸಲಾದ ಕೈಗಾರಿಕಾ ಆರ್ಥಿಕತೆಯಲ್ಲಿ ದೇಶವು ಇನ್ನೂ ಬೆಳೆಯಬೇಕಿದೆ. ಹೆಚ್ಚಾಗಿರುವ ಯುವಜನಸಂಖ್ಯೆಯನ್ನು ಆಧರಿಸಿ ಅದನ್ನು ಈ ನಿಟ್ಟಿನಲ್ಲಿ ಬಳಸಿಕೊಳ್ಳುವಲ್ಲಿ ದೇಶವು ಕಾರ್ಯೋನ್ಮುಖವಾಗಬೇಕಿದೆ. ಕೈಗಾರಿಕೋತ್ಪನ್ನ, ನಗರೀಕರಣ ಮತ್ತು ಉದ್ಯೋಗನಿಮಿತ್ತ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಇವೆಲ್ಲವೂ ಆರ್ಥಿಕತೆಯ ಬೆಳವಣಿಗೆಗೆ ಕಾರಣವಾಗುತ್ತದೆ. ದೇಶದ ಜಿಡಿಪಿಗೆ ಹೆಚ್ಚಿನ ದೇಣಿಗೆ ಬರುವುದು ಸೇವಾ ವಲಯದಿಂದ. ಅದರ ನಂತರ ಇರುವುದು ಕೈಗಾರಿಕೆ ಹಾಗೂ ಕೃಷಿವಲಯ. ನಮ್ಮ ದೇಶದ ಕಾರ್ಮಿಕ ಶಕ್ತಿಯ ಅರ್ಧಭಾಗವು ಸ್ವಉದ್ಯೋಗಿಗಳು ಹಾಗೂ ಇವರಲ್ಲಿ ಶೇ.93ರಷ್ಟು ಮಂದಿ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಾರೆ. ಅಸೋಚಂ ಅಧ್ಯಯನದ ಪ್ರಕಾರ ಹೆಚ್ಚುತ್ತಿರುವ ಜನಸಂಖ್ಯೆ, ಹೆಚ್ಚುತ್ತಿರುವ ಕಾರ್ಮಿಕ ಶಕ್ತಿಯ ಸಹಭಾಗಿತ್ವ, ಹೆಚ್ಚುತ್ತಿರುವ ಉನ್ನತ ಶಿಕ್ಷಣ ದಾಖಲಾತಿ ಇವುಗಳ ಆಧಾರದಲ್ಲಿ ನೋಡಿದಾಗ 2020ರ ವೇಳೆಗೆ ಭಾರತದ ದುಡಿಯುವ ವಯೋಮಾನದ ಜನಸಂಖ್ಯೆಯು 170 ಮಿಲಿಯನ್ ಮುಟ್ಟುತ್ತದೆ. ಆದ್ದರಿಂದ ನಮ್ಮ ಈ ಯುವಶಕ್ತಿಯನ್ನು ಸರಿಯಾದ ರೀತಿಯಲ್ಲಿ ತರಬೇತುಗೊಳಿಸದಿದ್ದರೆ ಅದರ ಫಲವನ್ನು ಪಡೆಯಲಾಗುವುದಿಲ್ಲ. ಹಾಗೂ ಜನಸಂಖ್ಯಾಧರಿತ ಈ ಮಾನವಶಕ್ತಿಯು ನಾಶವಾಗಿಬಿಡುತ್ತದೆ. ಉದ್ಯೋಗ ಸೃಷ್ಟಿ ಹಾಗೂ ಕೆಲಸ ಮಾಡುವ ಸಾಮರ್ಥ್ಯವಿರುವ ಯುವಸಮೂಹದ ಸೃಷ್ಟಿ ಎರಡೂ ಜೊತೆಯಲ್ಲಿ ಆಗಬೇಕಿದೆ.

### ಕೌಶಲ್ಯದ ಕೊರತೆ

ಗುಣಮಟ್ಟದ ಶಿಕ್ಷಣದ ಕೊರತೆಯಿಂದಾಗಿ ಯುವಕರು ನಿರುದ್ಯೋಗಿಗಳಾಗಿರುವ ಸಾಧ್ಯತೆಯು ಹೆಚ್ಚು. ಪೈಪೋಟಿಯಿಂದಾಗಿ ಉದ್ಯೋಗಾವಕಾಶಗಳ ಕೊರತೆಗಳಿಂದಾಗಿ ಉದ್ಯೋಗ ಮಾರುಕಟ್ಟೆಯಲ್ಲಿ ಪೈಪೋಟಿಯು ಹೆಚ್ಚಿದೆ. ವೃತ್ತಿಪರ ಹಾಗೂ ಕೌಶಲ್ಯಾಧಾರಿತ ತರಬೇತಿಗಳನ್ನು ನೀಡಲು ನಿಧಿಯ ಕೊರತೆ ಎದುರಿಸುತ್ತಿರುವುದರಿಂದ ಕೌಶಲ್ಯದ ಕೊರತೆಯಿರುವ ಕಾರ್ಮಿಕರು ಹೆಚ್ಚುತ್ತಿದ್ದಾರೆ. ಇವರಲ್ಲಿ ಬಹುಪಾಲು ಮಂದಿ ದೇಶದಲ್ಲಿ ಅಸುರಕ್ಷಿತ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದಾರೆ. ಶಾಲೆ, ಕಾಲೇಜುಗಳನ್ನು ಬಿಡುವವರ ಸಂಖ್ಯೆಯು ಹೆಚ್ಚಿದ್ದು ನಿಶ್ಚಿತ ಗುರಿ ಮುಟ್ಟುವ, ಉದ್ಯಮಶೀಲತೆಯ ಬದ್ಧತೆ ತೋರುವ ಮನೋಭಾವದ ಕೊರತೆಯಿದ್ದು ಇದು ಕೂಡ ಯುವಕರ ನಿರುದ್ಯೋಗಕ್ಕೆ ಕಾರಣವಾಗಿದೆ. ಭಾರತ ಸರ್ಕಾರವು ಹೆಚ್ಚಿನ ಉದ್ಯೋಗಾವಕಾಶಗಳ ಸೃಷ್ಟಿ ಮತ್ತು ದೇಶದಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಹೊಣೆ ಹೊತ್ತಿದೆ. ಕೇಂದ್ರ ವಿತ್ತ ಮಂತ್ರಿಗಳಾದ ಶ್ರೀ ಅರುಣ್ ಜೇಟ್ಲಿಯವರು ಬಜೆಟ್ ಮಂಡಿಸುತ್ತ 'ಯುವಕರನ್ನು ಶಿಕ್ಷಣ, ಕೌಶಲ್ಯ ಮತ್ತು ಉದ್ಯೋಗಗಳ ಮೂಲಕ

* ಪ್ರಾಧ್ಯಾಪಕರು ** ಸಂಶೋಧನಾ ಸಹವರ್ತಿ, ಭಾರತ ಉದ್ಯಮಶೀಲತೆ ಅಭಿವೃದ್ಧಿ ಸಂಸ್ಥೆ, ಅಹಮದಾಬಾದ್.
E-mail : * akdwivedi@ediindia.org ** saravanan@ediindia.org



ಸಬಲರಾಗಿಸುವುದು ಸರ್ಕಾರದ ಪ್ರಾಥಮಿಕ ಗುರಿಗಳಲ್ಲೊಂದು' ಎಂದು ಹೇಳಿದ್ದಾರೆ. ಅದೇನೆ ಇದ್ದರೂ ಉದ್ಯೋಗಗಳ ಸೃಷ್ಟಿ ನಿಂತ ನೀರಾಗಿದ್ದು ಆ ಕುರಿತು ಯಾರೂ ಪ್ರತಿಕ್ರಿಯಿಸುತ್ತಿಲ್ಲ. ಒಟ್ಟಾರೆ ಕಾರ್ಮಿಕ ಪಡೆಯಲ್ಲಿ ಕೇವಲ ಶೇ.10ರಷ್ಟು ಮಂದಿ ಮಾತ್ರ ಕೌಶಲ್ಯ ತರಬೇತಿಯನ್ನು ಪಡೆಯುತ್ತಾರೆ ಎಂದು ಅರ್ನೆಸ್ಟ್ ಮತ್ತು ಯಂಗ್ ಅಧ್ಯಯನ ತಿಳಿಸುತ್ತದೆ. ಪ್ರಸ್ತುತದಲ್ಲಿರುವ ವ್ಯವಸ್ಥೆಯಲ್ಲಿ ಸಾಮರ್ಥ್ಯ ಹೆಚ್ಚಿಸುವಂತಹ ತರಬೇತಿ, ಗುಣಮಟ್ಟ ಕಾಯ್ದುಕೊಳ್ಳುವುದು, ತರಬೇತಿಯಲ್ಲಿ ಪ್ರಸ್ತುತತೆ ಕಾಯ್ದುಕೊಳ್ಳುವುದು, ಸಂಸ್ಥೆಗಳ ನಿರ್ಮಾಣ ಮತ್ತು ಇವುಗಳಿಗಾಗಿ ಅಗತ್ಯ ಹಣಕಾಸಿನ ನೆರವನ್ನು ನೀಡುವುದು ಈ ಎಲ್ಲ ಸವಾಲುಗಳನ್ನು ಸರ್ಕಾರವು ಬರಲಿರುವ ವರ್ಷಗಳಲ್ಲಿ ಎದುರಿಸಬೇಕಾಗುವುದು ಎಂದು ಅಧ್ಯಯನ ಹೇಳುತ್ತದೆ.

### ಕೆಲಸಕ್ಕೆ ಅರ್ಹರಾದ ಕಾರ್ಮಿಕಶಕ್ತಿಯ ನಿರ್ಮಾಣ

ಅಸೋಚಂ–ಟಿಸ್ ಅಧ್ಯಯನದ ಪ್ರಕಾರ ಭಾರತವು ಹೊಸತರ ಬೆಳವಣಿಗೆ ಮತ್ತು ಪೇಟೆಂಟ್ ರ್‍ಯಾಂಕಿಂಗ್ ಗಳಿಕೆಯಲ್ಲಿ ಚೆನ್ನಾಗಿ ಅಭಿವೃದ್ಧಿ ಹೊಂದಿಲ್ಲ. ಉನ್ನತ ಶಿಕ್ಷಣ ಸಂಸ್ಥೆಗಳಾದ ರಾಜ್ಯ ಮತ್ತು ರಾಷ್ಟ್ರೀಯ ವಿಶ್ವವಿದ್ಯಾಲಯಗಳು ಸಂಶೋಧನೆಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸಲು ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ಅಗತ್ಯವಾದ ಹಣದ ಕೊರತೆಯನ್ನು ಎದುರಿಸುತ್ತಿದೆ ಎಂದು ಅಧ್ಯಯನವು ಹೇಳುತ್ತದೆ. ಆದ್ದರಿಂದ ಕೌಶಲ್ಯಾಭಿವೃದ್ಧಿಯೊಂದೇ ದೇಶದಲ್ಲಿ ಉದ್ಯಮಶೀಲತೆಯನ್ನು ಉತ್ತಮಗೊಳಿಸಲಿರುವ ಏಕೈಕ ಮಾರ್ಗ. ಇದಲ್ಲದೆ ಕೌಶಲ್ಯಭರಿತ ಕಾರ್ಮಿಕಶಕ್ತಿಯ ನಿರ್ಮಾಣದ ಜೊತೆಗೆ ಸರ್ಕಾರವು ಗಮನಿಸಬೇಕಾದ ವಿಷಯಗಳಿವೆ. ಬೇಡಿಕೆ – ಉತ್ಪಾದನೆಯ ನಡುವೆ ಮೇಳವಿಲ್ಲದಿರುವುದು, ಸಾಧಿಸಬಹುದಾದ ಮತ್ತು ತಾಳಿಕೆಯ ಗುಣ ಹೊಂದಿರುವ ತರಬೇತಿ ಕಾರ್ಯಕ್ರಮಗಳು, ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವಿಕೆ, ದೊಡ್ಡ ಮಟ್ಟದ ತರಬೇತಿ ಕಾರ್ಯಕ್ರಮಗಳಿಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸುವುದು, ಉತ್ತಮ ಗುಣಮಟ್ಟದ ತರಬೇತುದಾರರ ನೇಮಕ ಮತ್ತು ಅವರಿಗೆ ತರಬೇತಿ ನೀಡುವುದು ಇತ್ಯಾದಿಗಳ ಕಡೆಗೂ ಗಮನನೀಡಬೇಕು.

### ಕೌಶಲ್ಯ ಭಾರತ ಯೋಜನೆ

ಭಾರತ ಸರ್ಕಾರವು ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಎನ್ನುವ ಹೊಸ ಸಚಿವಾಲಯವನ್ನು ರೂಪಿಸಿದೆ. ಇದು ಕಾರ್ಮಿಕರ ಗುಣಮಟ್ಟ, ದೇಶದಲ್ಲಿನ ಉದ್ಯೋಗಾವಕಾಶಗಳನ್ನು ಕುರಿತಾದ ಸಂಗತಿಗಳನ್ನು ಗಮನಿಸುತ್ತದೆ. ಕೌಶಲ್ಯ ಅಭಿವೃದ್ಧಿ ಕುರಿತಾದ ರಾಷ್ಟ್ರೀಯ ನೀತಿಯು ಕಾರ್ಮಿಕ ಮಾರುಕಟ್ಟೆಯ ಬೇಡಿಕೆಗಳು ಮತ್ತು ತಾಂತ್ರಿಕ ಅಭಿವೃದ್ಧಿಯ ನಡುವೆಯೂ ಹೆಚ್ಚಬಹುದಾದ ಕಾರ್ಮಿಕ ಶಕ್ತಿಯ ಉದ್ಯೋಗಾವಕಾಶಗಳು ಇವುಗಳ ಬಗೆಗೆ ದೂರಗಾಮಿ ಉದ್ದೇಶಗಳನ್ನು ಅಳವಡಿಸಿಕೊಂಡಿದೆ. ಅದು ಆರ್ಥಿಕತೆಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ದೇಶದ ಬಡವರ ಜೀವನಮಟ್ಟವನ್ನು ಸುಧಾರಿಸಲು ಸ್ಪರ್ಧಾತ್ಮಕವಾಗಿ ಪ್ರಯತ್ನಿಸುತ್ತದೆ.

ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆ ಎನ್ನುವುದು ಕೌಶಲ್ಯ ಅಭಿವೃದ್ಧಿ ಯೋಜನೆ. ಇದು ಕೈಗಾರಿಕೆಗಳಿಗೆ ಅಗತ್ಯವಾದ ಕೌಶಲ್ಯಗಳನ್ನು ಕಲಿಯುವುದರ ಮೂಲಕ ಯುವಸಮೂಹಕ್ಕೆ ದೊರಕಿಸಬಹುದಾದ ಉದ್ಯೋಗಾವಕಾಶಗಳನ್ನು ವಿವರಿಸುತ್ತದೆ. ಇದೊಂದು ಪ್ರಮುಖ ಕಾರ್ಯಕ್ರಮವಾಗಿದ್ದು ಅಭ್ಯರ್ಥಿಗಳು ಗಳಿಸಿಕೊಂಡ ಜ್ಞಾನ ಮತ್ತು ಕೌಶಲ್ಯಗಳನ್ನು ಸರ್ಟಿಫಿಕೇಟ್ ಮೂಲಕ ಪ್ರಮಾಣೀಕರಿಸುತ್ತದೆ. ಹಿಂದಿನ ಅನುಭವ ಅಥವಾ ಕೌಶಲ್ಯಗಳಿಕೆಯನ್ನು ಕೂಡ ಈ ಕಾರ್ಯಕ್ರಮದಲ್ಲಿ ಪರೀಕ್ಷಿಸಿ ಹಿಂದಿನ ಕಲಿಕೆಯ ಗುರುತಿಸುವಿಕೆಯಡಿ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ. ಈ ಕಾರ್ಯಕ್ರಮದಡಿ ಕೌಶಲ್ಯ ವಿಕಾಸ ಕೇಂದ್ರಗಳಲ್ಲಿ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಕೌಶಲ್ಯ ಭಾರತವು ಗುರಿಯಾಗಿರಿಸಿಕೊಂಡಿರುವುದು ದೇಶದಲ್ಲಿರುವ ಕಾರ್ಮಿಕ ಶಕ್ತಿ ಮತ್ತು ಕಾರ್ಮಿಕ ಮಾರುಕಟ್ಟೆಯನ್ನು ಪ್ರವೇಶಿಸಲಿರುವ ಯುವಸಮೂಹ. ಇದರೊಂದಿಗೆ ಸಂಘಟಿತ ಮತ್ತು ಅಸಂಘಟಿತ ವಲಯದಲ್ಲಿ ಕೆಲಸಮಾಡುತ್ತಿರುವವರನ್ನು ಇದು ಒಳಗೊಳ್ಳಲಿದೆ.

ಪಟ್ಟಿ – 1 ನೋಡಿದಾಗ ಕೌಶಲ್ಯ ಭಾರತವು ಬಹಳ ಮಹತ್ವಾಕಾಂಕ್ಷೆಯ ಕಾರ್ಯಕ್ರಮ ಎನ್ನುವುದು ಅರ್ಥವಾಗುತ್ತದೆ. ಇದು ವಿವಿಧ ವಲಯಗಳಲ್ಲಿನ ವಿಭಿನ್ನ ಕೌಶಲ್ಯಗಳನ್ನು ಹೊಂದಿರುವ ಕಾರ್ಮಿಕರನ್ನು ಎಲ್ಲ ಕೈಗಾರಿಕಾ ವಲಯಗಳಿಗೂ ಪೂರೈಸುವಂತದ್ದು ಎನ್ನುವುದು ಅರಿವಾಗುತ್ತದೆ.

ಪಿಎಂಕೆವಿವೈ ಅಡಿಯಲ್ಲಿನ ಯೋಜನೆಗಳನ್ನು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಂಡಳಿಯ ಮುಖಾಂತರ ಅನುಷ್ಠಾನಗೊಳಿಸಲಾಗುವುದು. ಇತರ

**ಪಟ್ಟಿ : 1**

| ಕಾರ್ಮಿಕ ಶಕ್ತಿ | ಉದ್ದೇಶಿತ ಕೌಶಲ್ಯ ಸಹಿತ ಕಾರ್ಮಿಕರ ಸಂಖ್ಯೆ* |
|---|---|
| 1. ಹೊಸಬರು (ಮೊದಲ ಬಾರಿಗೆ ಕೆಲಸಕ್ಕೆ ಸೇರಿದವರು) | ಸುಮಾರು 12.8 ಮಿಲಿಯನ್ (ಪ್ರತಿ ವರ್ಷ) |
| 2. ಸಂಘಟಿತ ವಲಯದ ಕಾರ್ಮಿಕರು | 26 ಮಿಲಿಯನ್ |
| 3. ಅಸಂಘಟಿತ ವಲಯದ ಕಾರ್ಮಿಕರು | 433 ಮಿಲಿಯನ್ |
| 4. 2022 ರ ವೇಳೆಗೆ ಉದ್ದೇಶಿತ ಕೌಶಲ್ಯಸಹಿತ ಕಾರ್ಮಿಕರು | 500 ಮಿಲಿಯನ್ |
| 5. ಎನ್‌ಎಸ್‌ಡಿಸಿ ಯ ಪ್ರಸ್ತುತ ಸಾಮರ್ಥ್ಯ | 3.1 ಮಿಲಿಯನ್ ಪ್ರತಿ ವರ್ಷ |

* ಅಂಕಿ ಅಂಶಗಳು 2004–05ರಲ್ಲಿದ್ದಂತೆ (ಮೂಲ: ಕೌಶಲ್ಯಾಭಿವೃದ್ಧಿ ರಾಷ್ಟ್ರೀಯ ಆಯೋಜನೆ 2015)

ಸಂಸ್ಥೆಗಳಲ್ಲಿ ಕೂಡ ವಿವಿಧ ವಲಯಗಳಲ್ಲಿ ಅಂದರೆ ಉದ್ಯಮಶೀಲತೆ, ವಾಣಿಜ್ಯ, ಕುಶಲ ಕಲೆಗಾರಿಕೆ ಇತ್ಯಾದಿಗಳಲ್ಲಿ ತರಬೇತಿ ನೀಡಲು ಪ್ರೋತ್ಸಾಹಿಸಲಾಗುವುದು. ರಾಷ್ಟ್ರೀಯ ಉದ್ಯಮಶೀಲ ಮತ್ತು ವ್ಯಾಪಾರ ಅಭಿವೃದ್ಧಿ ರಾಷ್ಟ್ರೀಯ ಸಂಸ್ಥೆಯನ್ನು ತರಬೇತಿ, ಮಾರ್ಗದರ್ಶನ, ಸಂಶೋಧನೆ ಇತ್ಯಾದಿಗಳಿಗಾಗಿಯೇ ಸ್ಥಾಪಿಸಲಾಗಿದೆ. ಇದರ ಉದ್ದೇಶವೇ ದೇಶದಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದು. ಈ ಸಂಸ್ಥೆಯು ಉದ್ಯಮಶೀಲತೆ ಹಾಗೂ ಕೌಶಲ್ಯ ಅಭಿವೃದ್ಧಿ ಕೋರ್ಸುಗಳನ್ನು ನಡೆಸುತ್ತದೆ. ತರಬೇತುದಾರರಿಗೆ ತರಬೇತಿ ಮತ್ತಿತರ ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುತ್ತದೆ.

### ಉದ್ಯಮಶೀಲತೆಗೆ ಪೂರಕವಾದ ವಾತಾವರಣ ನಿರ್ಮಾಣ

ವಿಶ್ವವಿದ್ಯಾಲಯಗಳು ಉದ್ಯಮಗಳನ್ನು ಆರಂಭಿಸಲು ಬಯಸುವ ವಿದ್ಯಾರ್ಥಿಗಳಿಗೆ ನೆರವು ನೀಡಲು ಸಹಾಯ ಕೇಂದ್ರಗಳನ್ನು ಹಾಗೂ ಮಾರ್ಗದರ್ಶಕರನ್ನು ನೇಮಿಸಿದೆ. ರಾಜ್ಯ ಸರ್ಕಾರಗಳು ತಮ್ಮ ಪ್ರಮುಖ ನಗರಗಳ ಜೊತೆಗೆ ಪಟ್ಟಣಗಳನ್ನು ಕೂಡ ಹೊಸದಾಗಿ ಉದ್ದಿಮೆ ಆರಂಭಿಸುವವರ ಉತ್ತೇಜನಕ್ಕೆ ತಕ್ಕಂತೆ ರೂಪುಗೊಳಿಸುತ್ತಿವೆ. ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮ ಸಚಿವಾಲಯವು ತರಬೇತುದಾರರು, ಉದ್ದಿಮೆದಾರರು ಹಾಗೂ ಬಳಕೆದಾರರ ನಡುವೆ ಗಟ್ಟಿಯಾದ ಸಂಪರ್ಕಜಾಲವೊಂದನ್ನು ಏರ್ಪಡಿಸಿದೆ. ಆದ್ದರಿಂದಲೇ ಸರ್ಕಾರಗಳು ಇವುಗಳಿಗೆ ನೆರವು ನೀಡಲು ಮುಂದಾಗಿವೆ. ಐಎಸ್‌ಇಡಿ ಅಧ್ಯಯನದ ಪ್ರಕಾರ ಶೇ.87ರಷ್ಟು ವಿದ್ಯಾರ್ಥಿಗಳು ತಮ್ಮ ಬದುಕಿನ ಒಂದಲ್ಲ ಒಂದು ಹಂತದಲ್ಲಿ ಉದ್ಯಮಿಗಳಾಗಲು ಬಯಸುತ್ತಾರೆ ಮತ್ತು ಅವರಲ್ಲಿ (ಶೇ.90ರಷ್ಟು) ದೇಶದಲ್ಲಿ ಉದ್ದಿಮೆ ಆರಂಭಿಸಲು ಪೂರಕವಾದ ಅವಕಾಶಗಳಿವೆ ಎಂದು ನಂಬಿರುತ್ತಾರೆ. ಅಧ್ಯಯನದ ಪ್ರಕಾರ ಹೀಗೆ ಉದ್ದಿಮೆ ಆರಂಭಿಸಲು ಹೆಚ್ಚಾಗಿ ಆಶಿಸುವವರು ಆರ್ಥಿಕವಾಗಿ ಪ್ರಬಲವಾಗಿರುವವರಿಗಿಂತ ಆರ್ಥಿಕವಾಗಿ ಹಿಂದುಳಿದ ವರ್ಗದವರು (49%). ಯುವಸಮೂಹದಲ್ಲಿ ಹೀಗೆ ಉದ್ದಿಮೆದಾರರಾಗಲು ಆಶಿಸುವವರ ಸಂಖ್ಯೆಯು ಹೆಚ್ಚಾಗಿದೆ.

ಹೊಸ ತಲೆಮಾರಿನ ವ್ಯಾಪಾರಿಗಳು ಹಾಗೂ ಹೊಸತನ್ನು ಸಾಧಿಸಲಿಚ್ಛಿಸುವವರು ಉದ್ಯಮಶೀಲ ಸಾಮರ್ಥ್ಯವನ್ನು ಹೊಂದಿರಬೇಕಾದದ್ದು ಅತ್ಯಗತ್ಯ. ಆರ್ಥಿಕತೆಯು ಈಗ ಹೆಚ್ಚಾಗಿ ಜ್ಞಾನವನ್ನೇ ಆಧರಿಸಿದೆ. ಆಧುನಿಕ ಕೆಲಸದ ಪರಿಸರವು ಹೊಸ ಕೌಶಲ್ಯಗಳನ್ನು ಮತ್ತು ಆ ಬಗೆಯ ಮನೋಭಾವವನ್ನು ಸಮರ್ಥ ಉದ್ಯೋಗಿಗಳಲ್ಲಿ ಕಾಣಲು ಅಪೇಕ್ಷಿಸುತ್ತದೆ. ಭಾರತದ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗ ತರಬೇತಿ ಕಾರ್ಯಕ್ರಮಗಳು ಇಂತಹ ಕೌಶಲ್ಯಗಳನ್ನು ಹಾಗೂ ಪ್ರಗತಿಪರ ಕಾರ್ಯ ಮನೋಭಾವವನ್ನು ಒಳಗೊಳ್ಳಬೇಕು. ಇದರಿಂದಾಗಿ ಹೆಚ್ಚುತ್ತಿರುವ ಸ್ಪರ್ಧೆಯಲ್ಲಿ ಮಾನವ ಸಂಪನ್ಮೂಲವನ್ನು ಸಮರ್ಥವಾಗಿ ಅಭಿವೃದ್ಧಿಗೊಳಿಸಬಹುದು.

### ಉದ್ಯೋಗಶೀಲ ಕೌಶಲ್ಯಗಳು ಉದ್ಯಮಶೀಲತೆಯ ಶಿಕ್ಷಣದ ಮೂಲಕ

ಉದ್ಯಮಶೀಲ ವ್ಯಕ್ತಿಯು ಸದಾ ಸುತ್ತಲ ವಾತಾವರಣವನ್ನು ಸೂಕ್ಷ್ಮವಾಗಿ ಅವಕಾಶಗಳಿಗಾಗಿ ಗಮನಿಸುತ್ತಿರಬೇಕು. ಲಭ್ಯ ಸಂಪನ್ಮೂಲಗಳನ್ನು ಮಾರುಕಟ್ಟೆಯಲ್ಲಿನ ಯಾವುದೇ ಬಗೆಯ ಅಡೆತಡೆ ಸವಾಲುಗಳ ನಡುವೆಯೂ ಸೂಕ್ತವಾಗಿ ಬಳಸಿಕೊಂಡು ವ್ಯಾಪಾರದ ಸರಕುಗಳನ್ನು ಹೊಸ ಬಗೆಯಲ್ಲಿ ನಿರ್ಮಿಸಿ ಸಮಾಜಕ್ಕೆ ಹೊಸತನ್ನು ನೀಡುವಂತನಾಗಿರಬೇಕು. ಅವರು ಸ್ವತಂತ್ರ ಮನೋಭಾವದವರಾಗಿದ್ದು ತಮ್ಮಲ್ಲಿನ ಸೃಜನಾತ್ಮಕ ಸಿಬ್ಬಂದಿಯ ನೆರವಿನಿಂದ ಹೊಸತನ್ನು ಮುಂದುವರಿದ ತಾಂತ್ರಿಕತೆಯ ಸಹಾಯದೊಂದಿಗೆ ಹುಟ್ಟುಹಾಕುತ್ತ ಸಮಾಜದ ಉತ್ತಮಿಕೆಗಾಗಿ ಕೆಲಸ ಮಾಡುತ್ತಾರೆ. ಅವರಲ್ಲಿ ಗುರಿ ಮುಟ್ಟುವ ಪ್ರೇರಣೆ ಹಾಗೂ ಉದ್ಯಮಶೀಲ ಗುಣಗಳಿರುತ್ತವೆ. ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹಾಗೂ ತಂಡ ಕಟ್ಟುವಲ್ಲಿ ಅವರು ಸ್ಪರ್ಧಾತ್ಮಕ ಮನೋಭಾವವನ್ನು ತೋರುತ್ತಾರೆ. ಉದ್ಯಮಶೀಲತೆ ಹಾಗೂ ಹೊಸ ವ್ಯಾಪಾರ ಆರಂಭಿಸುವುದು ಸತತ ಪ್ರಯತ್ನ, ಸೋಲೊಪ್ಪದ ಮನೋಭಾವವನ್ನು ಬೇಡುತ್ತದೆ. ಉದ್ಯಮಶೀಲತೆಯ ಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಯು ಅಗತ್ಯವಾದ ಕೌಶಲ್ಯಗಳನ್ನು, ಏರುಪೇರಿನ ಮಾರುಕಟ್ಟೆ, ಸ್ಪರ್ಧಾತ್ಮಕ ವ್ಯಾಪಾರಿ ವಾತಾವರಣದಲ್ಲೂ ನೆಲೆ ಕಂಡುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾನೆ.



ಹಾಗಾಗಿ ಉದ್ಯಮಶೀಲ ಕೌಶಲ್ಯಗಳೆನ್ನುವುದು ಕೌಶಲ್ಯಗಳ ಗುಚ್ಛ. ಅದರಲ್ಲಿ ವ್ಯಕ್ತಿಗತ ಕೌಶಲ್ಯಗಳಾದ – ಸಂವಹನ ಮತ್ತು ಸಾರ್ವಜನಿಕ ಸಂಪರ್ಕ, ಬದುಕಿನ ಕೌಶಲ್ಯಗಳಾದ – ಗುರಿ ನಿರ್ಧಾರ, ವೃತ್ತಿ ಯೋಜನೆ, ವ್ಯಕ್ತಿತ್ವ ನಿರ್ಮಾಣ, ಸಂವಹನ ಸಾಮರ್ಥ್ಯ ಮತ್ತಿತರ ಕಲೆಗಳು ಇರಬೇಕು. ಶಿಕ್ಷಣವು ಉದ್ಯಮಶೀಲತೆಯ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯವಾದ ಜ್ಞಾನ, ಕೌಶಲ ಮತ್ತು ಉದ್ಯಮ ಕ್ಷೇತ್ರದಲ್ಲಿ ಉಂಟಾಗುವ ಯಾವುದೇ ಬಗೆಯ ಸಂಕೀರ್ಣ ಸನ್ನಿವೇಶಗಳನ್ನು ನಿರ್ವಹಿಸುವ ಮನೋಭಾವವನ್ನು ಬೆಳೆಸುವಂತಿರಬೇಕು.

ಯುವಕರಿಗೆ ಉದ್ಯಮಶೀಲತೆ ಕುರಿತಾದ ಶಿಕ್ಷಣ ಹಾಗೂ ತರಬೇತಿಯನ್ನು ನೀಡುವ ಸಲುವಾಗಿ ಅಹಮದಾಬಾದಿನ ದಿ ಎಂಟರ್‌ಪ್ರಿನ್ಯೂರ್‌ಶಿಪ್ ಡೆವಲಪ್‌ಮೆಂಟ್ ಇನ್ಸ್‌ಟ್ಯೂಟ್ ಆಫ್ ಇಂಡಿಯಾದ ಸ್ಥಾಪನೆಯಾಯಿತು. ಇದು ಮಕ್ಕಳಲ್ಲೂ ಈ ಮನೋಭಾವವನ್ನು ಬೆಳೆಸಲು ಸಹ ತರಬೇತಿಗಳನ್ನು ಏರ್ಪಡಿಸುತ್ತದೆ. ಇದರಿಂದ ಮಕ್ಕಳಲ್ಲಿ ಸಣ್ಣವಯಸ್ಸಿಗೆ ಉದ್ಯಮಶೀಲತೆಗೆ ಮುಖ್ಯವಾದ ಕಠಿಣ ಸಮಯಗಳ ನಿರ್ವಹಣೆ, ಸೃಜನಾತ್ಮಕ ಆಲೋಚನಾ ಶಕ್ತಿ, ಸೂಕ್ತ ಸಮಯದಲ್ಲಿ ಸೂಕ್ತ ಆಯ್ಕೆ ಮಾಡುವ ಸಾಮರ್ಥ್ಯ, ಪರಿಣಾಮಕಾರಿ ಸಂವಹನ, ತಂಡದಲ್ಲಿ ಕೆಲಸ ಮಾಡುವುದು ಇವುಗಳನ್ನು ಆಟಗಳು ಹಾಗೂ ಕೆಲಸಗಳ ಮೂಲಕ ಬೆಳೆಸುತ್ತದೆ. ಈ ತರಬೇತಿಗೆ 1.5 ಮಿಲಿಯನ್ ಶಾಲೆಗಳು, 315 ಮಿಲಿಯನ್ ಮಕ್ಕಳು ನೊಂದಾಯಿಸಿಕೊಂಡಿದ್ದಾರೆ.

ಪ್ರಪಂಚದಲ್ಲೇ ಭಾರತವು ಅತಿದೊಡ್ಡ ಶಾಲಾಶಿಕ್ಷಣ ನೀಡುವ ದೇಶಗಳಲ್ಲಿ ಒಂದು. ಈ ರೀತಿಯಲ್ಲಿ ಉದ್ಯಮಶೀಲ ಮನೋಭಾವ ಹಾಗೂ ಗುರಿ ಮುಟ್ಟುವ ಮನೋಭಾವವನ್ನು ಶಾಲೆಯ ಹಂತದಲ್ಲೇ ಮಕ್ಕಳಿಗೆ ಕಲಿಸಿದಲ್ಲಿ ಭವಿಷ್ಯದಲ್ಲಿ ಅವರು ಉದ್ಯೋಗ ಸೃಷ್ಟಿಕರ್ತರಾಗಬಲ್ಲರು.

**ಪೂರ್ವಭಾವಿ ಕೌಶಲ್ಯ ಚಟುವಟಿಕೆಗಳು**

ಉದ್ಯಮಿಗಳಿಗೆ ನೆರವಾಗುವಂತಹ ವಿವಿಧ ಕೌಶಲಗಳು : ತಂಡದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ, ನಾಯಕತ್ವದ ಗುಣಗಳು, ಭಾಷಾ ಕೌಶಲ್ಯ, ವೈಯುಕ್ತಿಕ ಅಭ್ಯಾಸಗಳು ಇತ್ಯಾದಿಗಳು ವ್ಯಕ್ತಿಯೊಬ್ಬನ ಉದ್ಯಮಶೀಲ ಮನೋಭಾವಕ್ಕೆ ಪೂರಕವಾಗುವಂತಹದ್ದು. ಉದ್ಯಮಿಯೊಬ್ಬನಲ್ಲಿನ ಈ ಕೌಶಲ್ಯಗಳು ಹಾಗೂ ಸ್ಪರ್ಧೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವಂತದ್ದು. ಆದ್ದರಿಂದ ಹೊಸ ಉದ್ಯಮಿಯಾಗಬಯಸುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ವೃತಿಯಲ್ಲಿ ಯಶಸ್ವಿಯಾಗಬೇಕಾದರೆ ಈ ಕೌಶಲಗಳನ್ನು ಕಲಿಯುವುದು ಅತ್ಯವಶ್ಯಕ.



ನೀಡುವತ್ತಲೂ ಗಮನಹರಿಸಬೇಕು. ಪ್ರಾದೇಶಿಕ ಅಸಮಾನತೆ, ಅತಿ ಗಮನ ಅಥವ ನಿರ್ಲಕ್ಷ್ಯವನ್ನು ಕೆಳಜಾತಿಗಳಿಗೆ ಮತ್ತು ತಳ ಸಮುದಾಯಗಳಿಗೆ ಮಾಡದಂತೆ ಅವರ ಕೌಶಲ್ಯಾಭಿವೃದ್ಧಿಯ ಕಡೆಗೂ ಗಮನಹರಿಸಬೇಕು. 'ಎಲ್ಲರನ್ನೂ ಒಳಗೊಂಡ' ತರಬೇತಿಗಳು ಮುಖ್ಯವಾಗುತ್ತದೆ.

ಅದರೊಡನೆ ಸಂಬಂಧ ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ.

* ಈ ಉದ್ಯಮಶೀಲ ಶಿಕ್ಷಣದಲ್ಲಿ ಕೆಲಸಮಾಡುತ್ತಿರುವ ತಜ್ಞರೆಲ್ಲ ಒಟ್ಟಾಗಿ ಈ ತರಬೇತಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಂದು ಆನ್‌ಲೈನ್ ತರಬೇತಿ ಪಠ್ಯಕ್ರಮವನ್ನು ರೂಪಿಸಬೇಕು. ಇದರಿಂದಾಗಿ ಇದೇ ಬಗೆಯ ಶಿಕ್ಷಣ ನೀಡುತ್ತಿರುವ ಸಂಸ್ಥೆಗಳು ಅದನ್ನು ತಮ್ಮಲ್ಲಿ ಅಳವಡಿಸಿಕೊಳ್ಳಲು ನೆರವಾಗುತ್ತದೆ.
* ಈ ವೃತ್ತಿಪರ ತರಬೇತಿ ಪಠ್ಯವನ್ನು ರೂಪಿಸುವಾಗ ಅಂತಾರಾಷ್ಟ್ರೀಯ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದೇ

**ಕಾರ್ಯಾಗಾರಗಳು**

ವ್ಯಾಪಾರದ ಅವಕಾಶಗಳನ್ನು ಗುರುತಿಸುವುದು
ವ್ಯಾಪಾರಕ್ಕೆ ಪೂರಕವಾದ ಪರಿಸರ ವ್ಯವಸ್ಥೆ
ಮಾದರಿ ಅಭಿವೃದ್ಧಿ ಕಾರ್ಯಕ್ರಮ
ಮಾನವ ಬಂಡವಾಳಕ್ಕೆ ತಕ್ಕಂತೆ ನೌಕರರನ್ನು ಸನ್ನದ್ಧಗೊಳಿಸುವುದು

**ವ್ಯಾಪಾರ ಸಂಕಿರಣಗಳು**

ಐಪಿಆರ್, ಬಿಜಿನೆಸ್ ಲಾ ಹಾಗೂ ಲೀಗಲ್ ಸ್ಟ್ರಕ್ಚರ್ಸ್
ಬ್ರಾಂಡಿಂಗ್ ಮತ್ತು ಜಾಹಿರಾತು

ಕಾರ್ಯಾಧರಿತ ತರಬೇತಿಗಳು ಹಾಗೂ ಇನ್ನಿತರ ಉಪಯುಕ್ತ ವಿಷಯಗಳು : ಕೌಶಲ್ಯಾಧರಿತ ವ್ಯಾಪಾರಿ ಮಾದರಿಯ ಬೆಳವಣಿಗೆ, ವ್ಯಾಪಾರ ಯೋಜನೆಗಳ ತಯಾರಿಕೆ, ಮಾರುಕಟ್ಟೆ ಸಮೀಕ್ಷೆ ಮಾಡುವ ಬಗೆ, ಬಿ – ಪ್ಲಾನ್ ದಾಖಲೀಕರಣ ಹಾಗೂ ಪ್ರಸ್ತುತಿಗೊಳಿಸುವ ಬಗೆ, ಹೊಸ ಅನ್ವೇಷಣೆಗಳನ್ನು ಉತ್ತೇಜಿಸುವ ಬಗೆ, ಐಟಿ ತಂತ್ರಜ್ಞಾನದ ಬಳಕೆ, ಅಕೌಂಟಿಂಗ್ ಹಾಗೂ ಫೈನಾನ್ಸ ಇವುಗಳ ಬಗೆಗಿನ ತಿಳಿವಳಿಕೆಯು ಅಗತ್ಯ. ಈ ತರಬೇತಿಗಳ ಜೊತೆಯಲ್ಲಿ ಯುವ/ವಿದ್ಯಾರ್ಥಿ ಉದ್ಯಮಿಗಳು ತಮ್ಮ ವೃತ್ತಿಗೆ ಪೂರಕವಾಗುವಂತಹ ಹಲವು ತರಬೇತಿಗಳು, ಕಾರ್ಯಾಗಾರಗಳಲ್ಲೂ ಭಾಗವಹಿಸಬೇಕು.

**ಕೌಶಲ್ಯ ಅಭಿವೃದ್ಧಿ –ಸಾಗಬೇಕಾದ ಹಾದಿ ಹಾಗೂ ಕೆಲವು ಸಲಹೆಗಳು :**

* ಉದ್ಯಮಶೀಲತೆಯನ್ನು ಮಹಿಳೆಯರು ಹಾಗೂ ಭಿನ್ನಲಿಂಗಿಗಳು/ ಮಂಗಳಮುಖಿಯರಲ್ಲೂ ಬೆಳೆಸಲು ಅವರಿಗೆ ಅಗತ್ಯವಾದ ಕೌಶಲ್ಯ ಶಿಕ್ಷಣ ಹಾಗೂ ಕೌಶಲ್ಯದ ಕೊರತೆ ತಳ ಸಮುದಾಯಗಳಿಗೆ ದೊಡ್ಡ ಅಡಚಣೆಯಾಗಿದೆ. ಇದರಿಂದಾಗಿ ಅವರಲ್ಲಿ ಜವಾಬ್ದಾರಿಯನ್ನು ಹೊರುವ ಆತ್ಮವಿಶ್ವಾಸ ಕಡಿಮೆ. ಇದನ್ನು ಹೆಚ್ಚಾಗಿ ಮಹಿಳೆಯರಲ್ಲಿ ಕಾಣಬಹುದು. ಅವರಲ್ಲಿನ ಈ ಕೊರತೆಗಳನ್ನು ಉದ್ಯಮಶೀಲತೆಯ ತರಬೇತಿಯೊಂದಿಗೆ ನೀಗಿಸಬಹುದು.
* ಹಲ ಬಗೆಯ ಫಲಾನುಭವಿಗಳ ಸಾಮಾಜಿಕ, ಆರ್ಥಿಕ ಹಾಗೂ ದೈನಂದಿನ ಅನುಭವಗಳನ್ನು ಗಮನದಲ್ಲಿ ಇಟ್ಟುಕೊಂಡೆ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಉದಾಹರಣೆಗೆ ಅನುಕೂಲಕರ ಸಮಯಕ್ಕೆ ತಕ್ಕಂತೆ ತರಬೇತಿ ಪಡೆಯುವ ಅವಕಾಶ, ಪ್ರಾದೇಶಿಕ ಭಾಷೆಯಲ್ಲಿ ವಿವರಣೆ, ಪ್ರಾದೇಶಿಕ ಉದಾಹರಣೆಗಳನ್ನು ನೀಡುವುದರಿಂದ ವಿದ್ಯಾರ್ಥಿಗಳಿಗೆ ಅರ್ಥಮಾಡಿಕೊಳ್ಳಲು ಹಾಗೂ ರೀತಿ ಉದ್ಯೋಗ ಖಾತ್ರಿ ಕೂಡ ಮುಖ್ಯ. ರಾಷ್ಟ್ರೀಯ ಕೌಶಲ್ಯ ಅರ್ಹತೆಯ ರೂಪುರೇಷೆಗಳಡಿಯಲ್ಲಿ ಈ ವೃತ್ತಿಪರ ಶಿಕ್ಷಣದ ರೂಪುರೇಷೆಗಳನ್ನು ನಿಯಮಿತವಾಗಿ ಪರಿಷ್ಕರಿಸುತ್ತಿರಬೇಕು.
* ಸರ್ಕಾರ ಮತ್ತು ಇತರ ಸಂಸ್ಥೆಗಳು ಉದ್ಯಮಕ್ಕೆ ಸಂಬಂಧಿಸಿದ ಸರ್ಕಾರಿ ಯೋಜನೆಗಳು ಹಾಗೂ ನೀಡಲಾಗುವ ಪ್ರೋತ್ಸಾಹಧನಗಳ ಕಾರ್ಯ–ಕ್ರಮಗಳನ್ನು ಪರಿಶೀಲಿಸುತ್ತಿರಬೇಕು. ಹೆಚ್ಚಿನ ಹಣಕಾಸು ಹೊರೆಯನ್ನು ತಗ್ಗಿಸಲು ಪಾಲುದಾರಿಕೆಯಲ್ಲಿ ಇವುಗಳನ್ನು ಜಾರಿಗೊಳಿಸುವುದರತ್ತ ಪ್ರೋತ್ಸಾಹ ನೀಡಬೇಕು. ಈ ಕುರಿತು ಅಳವಡಿಸಿಕೊಳ್ಳಬಹುದಾದ ಸುಧಾರಣೆಗಳನ್ನು ಅಭ್ಯಸಿಸಬೇಕು.
* ಈಗಿರುವ ಸಂಸ್ಥೆಗಳು ಮತ್ತು ತಜ್ಞರ ಪಾಲುದಾರಿಕೆಯನ್ನು ಹೊಸ ಸಂಸ್ಥೆಗಳಿಗೆ ನೆರವಾಗುವಂತೆ ಜೋಡಿಸಬೇಕು. ಶಿಕ್ಷಣ

ಸಂಸ್ಥೆಗಳೊಂದಿಗೆ ಕೈಗಾರಿಕೆಗಳನ್ನು ಬೆಸೆಯುವುದು ಒಳಿತು. ಇದಕ್ಕಾಗಿ ಕೈಗಾರಿಕೆಗಳ ಅಗತ್ಯವನ್ನರಿತು ಅದಕ್ಕೆ ತಕ್ಕಂತೆ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಬೇಕು. ವ್ಯಾಪ್ತಿ, ಉದ್ದೇಶ ಹಾಗೂ ಮಿತಿಗಳನ್ನರಿತು ಕೌಶಲ್ಯಾಧಾರಿತ ಉದ್ಯೋಗ ತರಬೇತಿ ಕಾರ್ಯಕ್ರಮಗಳಲ್ಲಿ ನಿರೂಪಿಸಿರಬೇಕು.


* ಬಂಡವಾಳ ಹೂಡಿಕೆ ಹಾಗೂ ತರಬೇತಿ ಕಾರ್ಯಕ್ರಮವನ್ನು ಒಂದಕ್ಕೊಂದು ಪೂರಕವಾಗಿರುವಂತೆ ರೂಪಿಸಬೇಕು.

* ಹೆಚ್ಚುವರಿ ತರಬೇತಿ ಕಾರ್ಯಕ್ರಮಗಳನ್ನು ಹೈ ಟೆಕ್ ಉದ್ಯಮಿಗಳಿಗೆ ಹಾಗೂ ಈಗಾಗಲೇ ಕೌಶಲ್ಯಗಳಿಕೆ ಮಾಡಿಕೊಂಡಿರುವವರಿಗೆ ಒದಗಿಸಬೇಕು.

## ಉಪಸಂಹಾರ

ಕೌಶಲ್ಯಾಧರಿತ ಹೊಸ ಉದ್ಯಮಗಳು ನವ ಭಾರತದಲ್ಲಿ ತಮ್ಮ ಸಂಪೂರ್ಣ ಶಕ್ತಿಯೊಂದಿಗೆ ಗುರಿ ಮುಟ್ಟಲು ವಿದ್ಯಾರ್ಥಿಗಳು ಗುರಿಯತ್ತ ಗಮನಕೇಂದ್ರೀಕರಿಸಬೇಕು. ಉದ್ಯಮಶೀಲ ಗುಣಗಳನ್ನು ಬಲಪಡಿಸಿಕೊಳ್ಳಬೇಕು. ಇವರು ತಮ್ಮನ್ನು ತಾವು ನವೀಕರಿಸಿಕೊಳ್ಳುವತ್ತ ಹೊಸ ತರಬೇತಿಗಳನ್ನು ಪಡೆಯಲು ಉತ್ತೇಜಿಸಬೇಕು. ತಮ್ಮ ಹೊಸ ವ್ಯಾಪಾರಿ ಮಾದರಿಯನ್ನು ಸೂಕ್ತವಾಗಿ ರೂಪಿಸಿಕೊಂಡು, ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಒಗ್ಗೂಡಿಸಿಕೊಂಡು, ಎದುರಾಗುವ ಕಷ್ಟಗಳನ್ನು ಎದುರಿಸಲು ಸನ್ನದ್ಧರಾಗಿರಬೇಕು.

ಇವುಗಳನ್ನು ಸಾಧಿಸಲು ಉತ್ತೇಜನವನ್ನು ಹಾಗೂ ಉದ್ದಿಮೆಗಳತ್ತ ಹೋಗುವಂತಹ ಪ್ರೇರಣೆಯನ್ನು ಸಣ್ಣವಯಸ್ಸಿಗೆ ಅಂದರೆ ಹೈಸ್ಕೂಲು ಮಟ್ಟದಲ್ಲೇ ನೀಡುವಂತಾಗಬೇಕು. ಈ ಮೂಲಕ ಉದ್ಯಮ ಶಾಲೆಗಳು, ಮ್ಯಾನೇಜ್‌ಮೆಂಟ್ ಸಂಸ್ಥೆಗಳು, ಸರ್ಕಾರ ಮತ್ತಿತರ ಸಂಸ್ಥೆಗಳು ಉದ್ಯಮಶೀಲತೆಯ ಪರಿಸರವನ್ನು ನಿರ್ಮಿಸಿ ಮಾರುಕಟ್ಟೆಯ ಮೇಲೆ ಪ್ರಭಾವ ಬೀರಿ ನವ ಭಾರತದಲ್ಲಿ ಅರ್ಥಪೂರ್ಣ ಬದಲಾವಣೆಗಳನ್ನು ತರಬಹುದು. ❑

# ಮನ್ ಕೀ ಬಾತ್




ಪ್ರಧಾನಿ
ಶ್ರೀ ನರೇಂದ್ರ ಮೋದಿಯವರು
ದಿನಾಂಕ
24-09-2017ರಂದು
ಮಾಡಿದ
'ಮನ್ ಕೀ ಬಾತ್' –
36 ನೇ ಭಾಷಣದ
ಕನ್ನಡ ಅನುವಾದದ
ಆಯ್ದ ಅವತರಣಿಕೆ

ನನ್ನ ಪ್ರಿಯ ದೇಶವಾಸಿಗಳೇ ನಿಮ್ಮೆಲ್ಲರಿಗೂ ನಮಸ್ಕಾರ. ಆಕಾಶವಾಣಿಯ ಮೂಲಕ ಮನದ ಮಾತನ್ನು ಹಂಚಿಕೊಳ್ಳುತ್ತಾ 3 ವರ್ಷಗಳೇ ಆಗಿ ಹೋಗಿವೆ. ಇಂದು ಇದು 36 ನೇ ಕಂತು. ಮನದ ಮಾತು ಒಂದು ರೀತಿ ಭಾರತದ ಸಕಾರಾತ್ಮಕ ಶಕ್ತಿಯಾಗಿದೆ. ದೇಶದ ಮೂಲೆ ಮೂಲೆಯ ಜನರಲ್ಲಿ ಹುದುಗಿದ ಭಾವನೆಗಳು, ಇಚ್ಛೆಗಳು, ಅಪೇಕ್ಷೆಗಳು, ಕೆಲವೆಡೆ ದೂರುಗಳಾಗಿವೆ. ಹೀಗೆ ಜನಮಾನಸದಲ್ಲಿ ತುಂಬಿ ತುಳುಕುತ್ತಿರುವ ಭಾವನೆಗಳೊಂದಿಗೆ ನಾನು ಬೆರೆಯಲು ಮನದ ಮಾತು ನನಗೆ ಒಂದು ಅದ್ಭುತ ಅವಕಾಶವನ್ನು ಒದಗಿಸಿದೆ. ನಾನೆಂದಿಗೂ ನನ್ನ ಮನದ ಮಾತು ಎಂದು ಹೇಳಿಲ್ಲ. ಈ ಮನದ ಮಾತು ದೇಶವಾಸಿಗಳ ಮನದೊಂದಿಗೆ ಬೆರೆತಿದೆ, ಅವರ ಭಾವನೆಗಳೊಂದಿಗೆ ಬೆರೆತಿದೆ, ಅವರ ಆಸೆ ಆಕಾಂಕ್ಷೆಗಳೊಂದಿಗೆ ಬೆರೆತಿದೆ. ಮನದ ಮಾತಿನಲ್ಲಿ ನಾನು ಹೇಳುವ ಮಾತುಗಳೆಲ್ಲವೂ ದೇಶದ ಮೂಲೆ ಮೂಲೆಯಿಂದ ಜನರು ನನಗೆ ಕಳುಹಿಸುವ ಅವರ ಮಾತುಗಳಾಗಿವೆ. ಮನದ ಮಾತಿನ 3 ವರ್ಷಗಳ ಈ ಯಾತ್ರೆ ದೇಶವಾಸಿಗಳ ಭಾವನೆಗಳ ಅರಿವಿನ ಯಾತ್ರೆಯಾಗಿದೆ. ಅಲ್ಲದೆ ಬಹುಶಃ ಇಷ್ಟು ಕಡಿಮೆ ಸಮಯದಲ್ಲಿ ದೇಶದ ಸಾಮಾನ್ಯ ನಾಗರಿಕನ ಭಾವನೆಗಳನ್ನು ಅರಿತುಕೊಳ್ಳುವ ಅವಕಾಶ ದೊರೆತದ್ದಕ್ಕೆ ದೇಶವಾಸಿಗಳಿಗೆ ನಾನು ಆಭಾರಿಯಾಗಿದ್ದೇನೆ. ಮನದ ಮಾತಿನಲ್ಲಿ ನಾನು ಯಾವಾಗಲೂ ಆಚಾರ್ಯ ವಿನೋಭಾ ಭಾವೆಯವರ ಮಾತನ್ನು ನೆನಪಿಟ್ಟಿದ್ದೇನೆ. ಆಚಾರ್ಯ ವಿನೋಭಾ ಭಾವೆ 'ಅ-ಸರ್ಕಾರಿ, ಅಸರ್‌ಕಾರಿ' ಅಂದರೆ ಸರ್ಕಾರದ ಹೊರತಾಗಿದ್ದದ್ದು – ಪರಿಣಾಮಕಾರಿ ಎಂದು ಹೇಳುತ್ತಿದ್ದರು. ಮನದ ಮಾತಿನಲ್ಲಿ ನಾನೂ ದೇಶದ ಜನತೆಯನ್ನು ಕೇಂದ್ರೀಕೃತಗೊಳಿಸುವ ಪ್ರಯತ್ನ ಮಾಡಿದ್ದೇನೆ. ರಾಜಕೀಯದಿಂದ ದೂರವಿರಿಸಿದ್ದೇನೆ. ತಾತ್ಕಾಲಿಕ ಆವೇಶ, ಆಕ್ರೋಶದಲ್ಲಿ ಕೊಚ್ಚಿ ಹೋಗುವ ಬದಲು ಸ್ಥಿರ ಮನಸ್ಸಿನಿಂದ ನಿಮ್ಮೊಂದಿಗಿರುವ ಪ್ರಯತ್ನ ಮಾಡಿದ್ದೇನೆ. ನನ್ನ ಪ್ರೀತಿಯ ದೇಶವಾಸಿಗಳೇ, ಮುಂದಿನ ಇತಿಹಾಸ ಇತಿಹಾಸದ ಗರ್ಭದಲ್ಲೇ ಜನಿಸುತ್ತದೆ ಎನ್ನುವ ಮಾತನ್ನು ನಾವು ಸ್ವೀಕರಿಸಲೇಬೇಕು ಮತ್ತು ಯಾವಾಗ ಇತಿಹಾಸದ ಮಾತು ಬರುತ್ತದೆಯೋ ಆಗ ಮಹಾಪುರುಷರ ನೆನಪಾಗುವುದು ಸ್ವಾಭಾವಿಕವೇ ಆಗಿದೆ. ಈ ಅಕ್ಟೋಬರ್ ತಿಂಗಳು ನಮ್ಮ ಬಹಳಷ್ಟು ಮಹಾಪುರುಷರನ್ನು ನೆನಪಿಸಿಕೊಳ್ಳುವ ತಿಂಗಳಾಗಿದೆ. ಮಹಾತ್ಮ ಗಾಂಧಿಯವರಿಂದ ಹಿಡಿದು ಸರ್ದಾರ್ ಪಟೇಲ್ ರ ವರೆಗೆ, 20 ಮತ್ತು 21 ನೇ ಶತಮಾನದಲ್ಲಿ ನಮಗೆ ದಿಕ್ಕು ತೋರಿಸಿದ, ನಮ್ಮ ನಾಯಕತ್ವ ವಹಿಸಿದ, ನಮಗೆ ಮಾರ್ಗದರ್ಶನ ತೋರಿದ ಎಷ್ಟೊಂದು ಮಹಾಪುರುಷರು ನಮ್ಮ ಮುಂದಿದ್ದಾರೆ ಮತ್ತು ದೇಶಕ್ಕಾಗಿ ಅವರೆಲ್ಲ ಬಹಳ ಕಷ್ಟಗಳನ್ನು ಅನುಭವಿಸಿದ್ದಾರೆ. ಅಕ್ಟೋಬರ್ ಎರಡರಂದು ಮಹಾತ್ಮಾ ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜಯಂತಿಯಾದರೆ, ಅಕ್ಟೋಬರ್ ಹನ್ನೊಂದರಂದು ಜಯಪ್ರಕಾಶ್ ನಾರಾಯಣ್ ಮತ್ತು ನಾನಾಜಿ ದೇಶಮುಖ್ ಅವರ ಜನ್ಮ ಜಯಂತಿ ಇದೆ ಮತ್ತು ಸೆಪ್ಟೆಂಬರ್ 25 ರಂದು ಪಂಡಿತ್ ದೀನದಯಾಳ್ ಉಪಾಧ್ಯಾಯರವರ ಜನ್ಮ ಜಯಂತಿಯಾಗಿದೆ. ನಾನಾಜಿ ಮತ್ತು ದೀನದಯಾಳ ಅವರದಂತೂ ಇದು ಜನ್ಮ ಶತಮಾನೋತ್ಸವದ ವರ್ಷ ಸಹ ಆಗಿದೆ. ಈ ಎಲ್ಲಾ ಮಹಾಪುರುಷರ ಒಂದು ಕೇಂದ್ರ ಬಿಂದು ಏನಾಗಿತ್ತು? ಒಂದು ಮಾತಿನಲ್ಲಿ ಇವರೆಲ್ಲರಲ್ಲಿ ಸಾಮ್ಯತೆ ಇತ್ತು, ಅದೇಂದರೆ ದೇಶಕ್ಕಾಗಿ ಬದುಕುವುದು ಮತ್ತು ದೇಶಕ್ಕಾಗಿ ಏನನ್ನಾದರೂ ಮಾಡುವುದು. ಇದು ಬರೀ ಉಪದೇಶವಾಗಿರಲಿಲ್ಲ, ತಮ್ಮ ಜೀವನದ ಮುಖಾಂತರ ಮಾಡಿ ತೋರಿಸುವುದಾಗಿತ್ತು. ಗಾಂಧೀಜಿ, ಜಯಪ್ರಕಾಶ್, ದೀನದಯಾಳ್ ಅವರು ಎಂತಹ ಮಹಾಪುರುಷರೆಂದರೆ

* ಕೃಪೆ; ಆಕಾಶವಾಣಿ, ಬೆಂಗಳೂರು

ಅವರು ಅಧಿಕಾರದ ಮಾರ್ಗದಿಂದ ದೂರ ಉಳಿದು ಜನರ ಜೀವನದ ಜೊತೆಗೆ ಕ್ಷಣ ಕ್ಷಣವೂ ಜೀವಿಸಿದ್ದರು, ಹೋರಾಟ ಮುಂದುವರೆಸಿದ್ದರು ಮತ್ತು ಸರ್ವ ಜನರ ಹಿತಕ್ಕಾಗಿ, ಸರ್ವ ಜನರ ಸುಖಕ್ಕಾಗಿ ಏನನ್ನಾದರೂ ಮಾಡುತ್ತಲೇ ಇರುತ್ತಿದ್ದರು. ನಾನಾಜಿ ದೇಶಮುಖ್ ಅವರು ರಾಜಕೀಯ ಜೀವನವನ್ನು ಬಿಟ್ಟು ಗ್ರಾಮೋದಯದಲ್ಲಿ ಭಾಗಿಯಾಗಿದ್ದರು ಮತ್ತು ಇಂದು ಅವರ ಜನ್ಮ ಶತಮಾನೋತ್ಸವವನ್ನು ಆಚರಿಸುತ್ತಿದ್ದೇವೆ ಎಂದರೆ ಅವರ ಗ್ರಾಮೋದಯದ ಕೆಲಸಕ್ಕೆ ಗೌರವಾದರ ಇರಿಸಿಕೊಳ್ಳುವುದು ತುಂಬಾ ಸಹಜವೇ ಆಗಿದೆ. ಭಾರತದ ಅಂದಿನ ರಾಷ್ಟ್ರಪತಿ ಶ್ರೀಯುತ ಅಬ್ದುಲ್ ಕಲಾಮ್ ಅವರು ಯಾವಾಗ ನವ ಯುವಕರೊಂದಿಗೆ ಮಾತನಾಡುತ್ತಿದ್ದರೋ ಆಗೆಲ್ಲಾ ನಾನಾಜಿ ದೇಶಮುಖ್ ಅವರ ಗ್ರಾಮೀಣ ವಿಕಾಸದ ಮಾತುಗಳನ್ನು ಹೇಳುತ್ತಿದ್ದರು. ಆ ಮಾತುಗಳನ್ನು ತುಂಬಾ ಆದರದಿಂದ ಉಲ್ಲೇಖಿಸುತ್ತಿದ್ದರು ಮತ್ತು ಅವರು ಸ್ವತಃ ನಾನಾಜಿಯವರ ಈ ಕೆಲಸವನ್ನು ನೋಡುವುದಕ್ಕೋಸ್ಕರ ಹಳ್ಳಿಗೆ ಹೋಗಿದ್ದರು.

ಇನ್ನು ದೀನದಯಾಳ ಉಪಾಧ್ಯಾಯ ಅವರು. ಹೇಗೆ ಮಹಾತ್ಮಾ ಗಾಂಧಿ, ಸಮಾಜದ ಕೊನೆಯ ಸ್ತರದಲ್ಲಿ ಕುಳಿತಿರುವ ಮನುಷ್ಯನ ಬಗ್ಗೆ ಮಾತನಾಡುತ್ತಿದ್ದರೋ ಹಾಗೆಯೇ ದೀನದಯಾಳ್ ಅವರು ಸಹ ಸಮಾಜದ ಕೊನೆಯ ಸ್ತರದಲ್ಲಿ ಕುಳಿತಿರುವ ನೋವುಂಡ, ಶೋಷಿತ, ವಂಚಿತ, ಬಡ ವರ್ಗದವರ ಬಗ್ಗೆಯೇ ಮಾತನಾಡುತ್ತಿದ್ದರು ಮತ್ತು ಅವರ ಜೀವನವನ್ನು ಸುಧಾರಿಸಲು ಶಿಕ್ಷಣದ ಮೂಲಕ, ಉದ್ಯೋಗದ ಮೂಲಕ ಯಾವ ರೀತಿ ಬದಲಾವಣೆ ತರಬಹುದು ಎಂಬುದರ ಬಗ್ಗೆ ಚರ್ಚೆ ಮಾಡುತ್ತಿದ್ದರು. ಈ ಎಲ್ಲಾ ಮಹಾಪುರುಷರನ್ನು ಸ್ಮರಿಸುವುದು ಅವರಿಗೆ ನಾವು ಮಾಡುವ ಉಪಕಾರವಲ್ಲ. ನಮಗೆ ಜೀವನದಲ್ಲಿ ಮುಂದಿನ ದಾರಿಗಳು ಸಿಗುತ್ತಲಿರಲಿ, ಮುಂದಿನ ನಿರ್ದೇಶನಗಳು ಸಿಗುತ್ತಿರಲಿ ಎಂಬ ಕಾರಣಕ್ಕೆ ಈ ಮಹಾಪುರುಷರ ಸ್ಮರಣೆಯನ್ನು ಮಾಡಬೇಕಾಗಿದೆ. ಮುಂದಿನ ಮನ್ ಕಿ ಬಾತ್‌ನಲ್ಲಿ ನಾನು ಖಂಡಿತವಾಗಿ ಸರ್ದಾರ್ ವಲ್ಲಭ್ ಭಾಯಿ ಪಟೇಲ್ ಅವರ ವಿಷಯ ಹೇಳುತ್ತೇನೆ. ಆದರೆ 31 ಅಕ್ಟೋಬರ್ ಪೂರಾ ದೇಶದಲ್ಲಿ, ದೇಶದ ಪ್ರತಿ ನಗರದಲ್ಲಿ, ಪ್ರತಿ ಪಟ್ಟಣದಲ್ಲಿ ತುಂಬಾ ಹೆಚ್ಚಿನ ಸಂಖ್ಯೆಯಲ್ಲಿ ರನ್ ಫಾರ್ ಯುನಿಟಿ ಎನ್ನುವ ಕಾರ್ಯಕ್ರಮ 'ಒಂದು ಭಾರತ ಶ್ರೇಷ್ಠ ಭಾರತ' ಎನ್ನುವ ಘೋಷಣೆಯೊಂದಿಗೆ ನಡೆಯಬೇಕಿದೆ ಮತ್ತು ವಾತಾವರಣ ಸಹ ಓಡುವುದಕ್ಕೆ ಪೂರಕವಾಗಿದ್ದು ಸಂತೋಷ ತರುವಂತಿದೆ. ಸರ್ದಾರ್ ಪಟೇಲ್ ಅವರಂತೆ ಉಕ್ಕಿನ ಶಕ್ತಿ ಪಡೆದುಕೊಳ್ಳಲು ಇದು ಕೂಡ ಅವಶ್ಯಕವಾಗಿದೆ ಮತ್ತು ಸರ್ದಾರ್ ಪಟೇಲರು ದೇಶವನ್ನು ಒಗ್ಗೂಡಿಸಿದ್ದರು, ನಾವು ಸಹ ಏಕತೆಗಾಗಿ ಓಟದಲ್ಲಿ ಭಾಗವಹಿಸಿ ಐಕ್ಯತೆಯ ಮಂತ್ರವನ್ನು ಮುಂದುವರೆಸಬೇಕಾಗಿದೆ.




ನಾವೆಲ್ಲರೂ "ವಿವಿಧತೆಯಲ್ಲಿ ಏಕತೆ, ಭಾರತದ ವಿಶೇಷತೆ" ಎಂದು ತುಂಬಾ ಸಹಜವಾಗಿ ಹೇಳುತ್ತೇವೆ. ವಿವಿಧತೆಯನ್ನು ನಾವು ಗೌರವಿಸುತ್ತೇವೆ ಆದರೆ ಯಾವಾಗಲಾದರೂ ನಮ್ಮ ಈ ವಿವಿಧತೆಯನ್ನು ಅನುಭವಿಸಲು ಪ್ರಯತ್ನ ಪಟ್ಟಿದ್ದೇವೆಯೇ? ನಾನು ಮತ್ತೆ ಮತ್ತೆ ಹಿಂದುಸ್ತಾನದ ನನ್ನ ದೇಶ ವಾಸಿಗಳಿಗೆ ಅದರಲ್ಲೂ ವಿಶೇಷವಾಗಿ ನನ್ನ ಯುವ ಜನತೆಗೆ ಹೇಳಲು ಇಷ್ಟ ಪಡುತ್ತೇನೆ. ನಾವು ಒಂದು ಜಾಗೃತಾವಸ್ಥೆಯಲ್ಲಿ ಇದ್ದೇವೆ. ಈ ಭಾರತದ ವಿವಿಧತೆಯನ್ನು ಅನುಭವಿಸಿ, ಅದನ್ನು ಸ್ಪರ್ಶಿಸಿ, ಅದರ ಸುವಾಸನೆಯನ್ನು ಆಘ್ರಾಣಿಸಿ. ಬೇಕಿದ್ದರೆ ನೀವು ನೋಡಿ, ನಿಮ್ಮೊಳಗಿನ ವ್ಯಕ್ತಿತ್ವದ ವಿಕಸನಕ್ಕೆ ಕೂಡ ನಮ್ಮ ದೇಶದ ಈ ವೈವಿಧ್ಯತೆಗಳು ಒಂದು ದೊಡ್ಡ ಪಾಠ ಶಾಲೆಯಂತೆ ಕೆಲಸ ಮಾಡುತ್ತವೆ. ರಜಾ ದಿನಗಳಿರಲಿ, ದೀಪಾವಳಿಯ ದಿನವಾಗಲಿ, ನಮ್ಮ ದೇಶದಲ್ಲಿ ನಾಲ್ಕೂ ನಿಟ್ಟಿನಲ್ಲಿ ಒಂದಿಲ್ಲೊಂದು ಕಡೆ ಹೋಗಿ ಬರುವ ಅಭ್ಯಾಸವಿದೆ. ಜನರು ಯಾತ್ರಾರ್ಥಿಗಳಾಗಿ ಹೋಗಿ ಬರುತ್ತಾರೆ ಇದು ತುಂಬಾ ಸ್ವಾಭಾವಿಕ. ಆದರೆ ಒಮ್ಮೊಮ್ಮೆ ನನಗೆ, 'ನಾವು ನಮ್ಮ ದೇಶವನ್ನು ನೋಡುವುದಿಲ್ಲ, ದೇಶದ ವೈವಿಧ್ಯತೆಗಳನ್ನು ತಿಳಿದುಕೊಳ್ಳುವುದಿಲ್ಲ, ಅರ್ಥ ಮಾಡಿಕೊಳ್ಳುವುದಿಲ್ಲ. ಅವ್ಯವಸ್ಥೆಯ ಪ್ರಭಾವದಿಂದ ವಿದೇಶಗಳಲ್ಲಿಯೇ ಪ್ರವಾಸ ಕೈಗೊಳ್ಳಲು ಇಷ್ಟ ಪಡಲು ಪ್ರಾರಂಭಿಸಿದ್ದೇವೆ' ಎಂಬ ಚಿಂತೆ ಮೂಡುತ್ತದೆ. ನೀವು ಜಗತ್ತನ್ನೆಲ್ಲ ಸುತ್ತಲು ಹೋಗಿ, ನನಗೇನೂ ಅಭ್ಯಂತರವಿಲ್ಲ, ಆದರೆ ಕೆಲವೊಮ್ಮೆಯಾದರೂ ನಿಮ್ಮ ಮನೆಯನ್ನು ಕೂಡ ನೋಡಿ. ಉತ್ತರ ಭಾರತದ ವ್ಯಕ್ತಿಗಳಿಗೆ ದಕ್ಷಿಣ ಭಾರತದಲ್ಲಿ ಏನಿದೆ ಎಂದು ಗೊತ್ತಿರುವುದಿಲ್ಲ, ಪಶ್ಚಿಮ ಭಾರತದ ವ್ಯಕ್ತಿಗಳಿಗೆ ಪೂರ್ವ ಭಾರತದಲ್ಲಿ ಏನಿದೆ ಎಂದು ಗೊತ್ತಿರುವುದಿಲ್ಲ, ನಮ್ಮ ದೇಶ ಎಷ್ಟೊಂದು ವೈವಿಧ್ಯತೆಗಳಿಂದ ತುಂಬಿದೆ. ಮಹಾತ್ಮ ಗಾಂಧಿ, ಲೋಕಮಾನ್ಯ ತಿಲಕ್, ಸ್ವಾಮಿ ವಿವೇಕಾನಂದ, ನಮ್ಮ ಹಿಂದಿನ ರಾಷ್ಟ್ರಪತಿ ಅಬ್ದುಲ್ ಕಲಾಮ್ ಜೀ ಇವರ ಮಾತುಗಳಲ್ಲೇ ನೋಡುವುದಾದರೆ ಒಂದು ಮಾತು ಮತ್ತೆ ಮತ್ತೆ ಬರುತ್ತದೆ ಅದು ಯಾವುದೆಂದರೆ ಅವರು ಭಾರತದಲ್ಲಿ ಸಂಚರಿಸಿದ್ದರಿಂದ ಅವರಿಗೆ ಭಾರತವನ್ನು ನೋಡಿ ಅರ್ಥ ಮಾಡಿಕೊಳ್ಳುವುದರಲ್ಲಿ ಮತ್ತು ಭಾರತಕ್ಕಾಗಿ ಬದುಕಲು ಅಥವಾ ಮಡಿಯಲು ಒಂದು ಹೊಸ ಪ್ರೇರಣೆ ಸಿಕ್ಕಿತು. ಈ ಎಲ್ಲಾ ಮಹಾಪುರುಷರೂ ಭಾರತದ ಉದ್ದಗಲಕ್ಕೂ ವ್ಯಾಪಕವಾಗಿ ಸಂಚರಿಸಿದ್ದರು. ತಮ್ಮ ತಮ್ಮ ಕೆಲಸಗಳ ಪ್ರಾರಂಭದಲ್ಲಿ ಇವರೆಲ್ಲ ಭಾರತವನ್ನು ತಿಳಿದುಕೊಳ್ಳಲು, ಅರ್ಥ ಮಾಡಿಕೊಳ್ಳಲು ಪ್ರಯತ್ನ ಪಟ್ಟಿದ್ದರು. ಭಾರತವನ್ನು ತಮ್ಮೊಳಗೆ ಜೀವಿಸಿಕೊಳ್ಳುವ ಪ್ರಯತ್ನ ಮಾಡಿದ್ದರು. ನಮ್ಮ ದೇಶದ ಭಿನ್ನ ಭಿನ್ನ ರಾಜ್ಯಗಳನ್ನೂ, ಭಿನ್ನ ಭಿನ್ನ ಸಮಾಜಗಳನ್ನೂ, ಸಮೂಹಗಳನ್ನೂ, ಅವರ ರೀತಿ-ರಿವಾಜುಗಳನ್ನೂ, ಅವರ ಪರಂಪರೆಯನ್ನೂ, ಅವರ ವೇಷ ಭೂಷಣಗಳನ್ನೂ, ಅವರ ಊಟ-ಉಪಚಾರಗಳನ್ನೂ, ಅವರ ಮೌಲ್ಯಗಳನ್ನೂ ಒಬ್ಬ ವಿದ್ಯಾರ್ಥಿಯ ರೂಪದಲ್ಲಿ ಕಲಿಯುವ, ಅರ್ಥ ಮಾಡಿಕೊಳ್ಳುವ, ಬದುಕುವ ಪ್ರಯತ್ನವನ್ನು ನಾವು ಮಾಡಬಲ್ಲೆವೇ? ಪ್ರವಾಸದಲ್ಲಿ ನಾವು ಬರೀ ಬೇರೆಯವರನ್ನು ಭೇಟಿಯಾಗುವುದು ಅಷ್ಟೇ ಅಲ್ಲ, ನಾವು ಒಬ್ಬ ವಿದ್ಯಾರ್ಥಿಯ ತರಹ ಅವರನ್ನು ಅರ್ಥ ಮಾಡಿಕೊಂಡು ಅವರಂತೆ ಆಗುವ ಪ್ರಯತ್ನ ಮಾಡಿದಾಗ ಮಾತ್ರ ಪ್ರವಾಸ ಮೌಲ್ಯಾಧಾರಿತವಾಗುತ್ತದೆ. ನನ್ನ ಸ್ವಯಂ ಅನುಭವ ಹೇಳುವುದಾದರೆ ನನಗೆ ಹಿಂದುಸ್ತಾನದ 500 ಕ್ಕೂ ಹೆಚ್ಚು ಜಿಲ್ಲೆಗಳಿಗೆ ಹೋಗುವ ಅವಕಾಶ ಸಿಕ್ಕಿರಬಹುದು, 450 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ನನಗೆ ರಾತ್ರಿ ಉಳಿದುಕೊಳ್ಳುವ ಸಂದರ್ಭ ಒದಗಿ ಬಂದಿದೆ ಮತ್ತು ಇಂದು ನಾನು ಭಾರತದಲ್ಲಿ ಈ ಒಂದು ಅಧಿಕಾರವನ್ನು ಸಂಭಾಳಿಸುತ್ತಿರುವಾಗ ನನ್ನ ಪ್ರವಾಸದ ಆ ಅನುಭವಗಳು ನನಗೆ

ತುಂಬಾ ಕೆಲಸಕ್ಕೆ ಬರುತ್ತವೆ. ವಿಷಯಗಳನ್ನು ಅರ್ಥೈಸಿಕೊಳ್ಳುವಲ್ಲಿ ನನಗೆ ಬಹಳಷ್ಟು ಅನುಕೂಲವಾಗುತ್ತದೆ. ನಿಮ್ಮಲ್ಲಿ ನನ್ನ ವಿನಂತಿ ಏನೆಂದರೆ ನೀವು ಈ ವಿಶಾಲ ಭಾರತವನ್ನು "ವಿವಿಧತೆಯಲ್ಲಿ ಏಕತೆ" ಎನ್ನುವ ಘೋಷಣೆಗೆ ಮಾತ್ರ ಸೀಮಿತಗೊಳಿಸಬೇಡಿ, ನಮ್ಮ ಈ ಅಪಾರ ಶಕ್ತಿಯ ಭಂಡಾರವನ್ನು ಅನುಭವಿಸಿ. "ಒಂದು ಭಾರತ – ಶ್ರೇಷ್ಠ ಭಾರತ" ಎನ್ನುವ ಕನಸು ಇದರಲ್ಲಿ ಮಿಳಿತಗೊಂಡಿದೆ. ಊಟ–ಉಪಚಾರದಲ್ಲಿ ಎಷ್ಟೊಂದು ಬಗೆಗಳಿವೆ ಎಂದರೆ ಒಂದು ವೇಳೆ ಪೂರ್ತಿ ಜೀವಮಾನದಲ್ಲಿ ಪ್ರತಿ ದಿನವೂ ಒಂದೊಂದು ಹೊಸ ಬಗೆಯ ಆಹಾರ ಸೇವಿಸುತ್ತೇನೆ ಎಂದು ಅಂದುಕೊಂಡರೂ ಸಹ ಬಹುಶಃ ಯಾವುದೇ ಆಹಾರ ಪುನರಾವರ್ತನೆಯಾಗಲಾರದು. ಇದು ಈಗ ನಮ್ಮ ಪ್ರವಾಸೋದ್ಯಮದ ಒಂದು ದೊಡ್ಡ ಶಕ್ತಿಯಾಗಿದೆ.

ನಾನು ನಿಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ರಜೆಯಲ್ಲಿ ನೀವು ಬರೀ ಒಂದು ಬದಲಾವಣೆಗೋಸ್ಕರ ಮನೆಯಿಂದ ಹೊರಗೆ ಹೋಗಬೇಡಿ, ಅದರ ಬದಲು ಏನಾದರೂ ಸ್ವಲ್ಪ ತಿಳಿದುಕೊಳ್ಳುವ, ಅರ್ಥ ಮಾಡಿಕೊಳ್ಳುವ, ಪಡೆದುಕೊಳ್ಳುವ ನಿರ್ಧಾರದೊಂದಿಗೆ ಮನೆಯಿಂದ ಹೊರಡಿ. ಭಾರತವನ್ನು ನಿಮ್ಮೊಳಗೆ ಅವಗಾಹನೆ ಮಾಡಿಕೊಳ್ಳಿರಿ. ಕೋಟಿ ಕೋಟಿ ಜನರ ವೈವಿಧ್ಯತೆಯನ್ನು ನಿಮ್ಮೊಳಗೆ ಅಂತರ್ಗತಗೊಳಿಸಿಕೊಳ್ಳಿ. ಇಂತಹ ಅನುಭವಗಳಿಂದ ನಿಮ್ಮ ಜೀವನ ಸಮೃದ್ಧವಾಗುತ್ತದೆ. ನಿಮ್ಮ ಚಿಂತನೆಯ ವ್ಯಾಪ್ತಿಯು ವಿಶಾಲವಾಗುತ್ತದೆ. ಅನುಭವಕ್ಕಿಂತ ದೊಡ್ಡ ಶಿಕ್ಷಕ ಮತ್ಯಾರು ಇರಲು ಸಾಧ್ಯ? ಸಾಮಾನ್ಯವಾಗಿ ಅಕ್ಟೋಬರ್ ನಿಂದ ಮಾರ್ಚ್ ವರೆಗಿನ ಸಮಯ ಹೆಚ್ಚಾಗಿ ಪ್ರವಾಸದ್ದಾಗಿರುತ್ತದೆ. ಜನರು ಪ್ರವಾಸ ಹೋಗುತ್ತಾರೆ. ಈ ಬಾರಿ ಕೂಡ ನೀವೊಂದು ವೇಳೆ ಪ್ರವಾಸ ಹೋಗುವಿರಾದರೆ ನನ್ನ ಈ ಅಭಿಯಾನವನ್ನು ನೀವು ಮುನ್ನಡೆಸುತ್ತೀರಿ ಎಂಬ ವಿಶ್ವಾಸ ನನಗಿದೆ. ನೀವು ಎಲ್ಲಿಯಾದರೂ ಹೋಗಿ, ನಿಮ್ಮ ಅನುಭವವನ್ನು ಹಂಚಿಕೊಳ್ಳಿ, #incredibleindia (ಹ್ಯಾಷ್ ಟ್ಯಾಗ್ incredibleindia) ಇದಕ್ಕೆ ನೀವು ಫೋಟೋಗಳನ್ನು ಖಂಡಿತವಾಗಿ ಕಳುಹಿಸಿ. ಅಲ್ಲಿಯ ಜನರ ಜೊತೆ ಭೇಟಿ ಮಾಡಿದಲ್ಲಿ ಅವರ ಭಾವಚಿತ್ರವನ್ನು ಕೂಡ ಕಳುಹಿಸಿ. ಬರೀ ಕಟ್ಟಡಗಳ ಬಗ್ಗೆ, ಪ್ರಕೃತಿ ಸೌಂದರ್ಯದ ಬಗ್ಗೆ ಮಾತ್ರವಲ್ಲ ಅಲ್ಲಿಯ ಜನ–ಜೀವನದ



ಬಗ್ಗೆ ಸಹ ಕೆಲವು ಮಾತುಗಳನ್ನು ಬರೆಯಿರಿ. ನಿಮ್ಮ ಪ್ರವಾಸದ ಒಳ್ಳೆಯ ಪ್ರಬಂಧವನ್ನು ಬರೆಯಿರಿ. Mygov ಗೆ ಕಳುಹಿಸಿರಿ, NarendraModiAppಗೆ ಕಳುಹಿಸಿರಿ. ನನ್ನ ಮನಸ್ಸಿನಲ್ಲಿ ಒಂದು ವಿಚಾರ ಬರುತ್ತಿದೆ, ನಾವು ಭಾರತದ ಪ್ರವಾಸೋದ್ಯಮವನ್ನು ಉತ್ತೇಜಿಸಲು ನೀವು ನಿಮ್ಮ ರಾಜ್ಯದ 7 ಅತ್ತ್ಯುತ್ತಮ ಪ್ರವಾಸೀ ತಾಣಗಳು ಯಾವುವು ಎಂದು ಸೂಚಿಸಬಲ್ಲಿರಾ? ಪ್ರತಿಯೊಬ್ಬ ಭಾರತೀಯನೂ ನಿಮ್ಮ ರಾಜ್ಯದ ಆ 7 ತಾಣಗಳ ಬಗ್ಗೆ ತಿಳಿದುಕೊಳ್ಳಬೇಕು, ಸಾಧ್ಯವಾದರೆ ಆ 7 ತಾಣಗಳಿಗೆ ಹೋಗಬೇಕು. ನೀವು ಈ ವಿಷಯದಲ್ಲಿ ಏನಾದರೂ ಮಾಹಿತಿ ನೀಡಬಲ್ಲಿರಾ? NarendraModiApp ನಲ್ಲಿ ಅದನ್ನು ಹಾಕಬಲ್ಲಿರಾ? #incredibleindia (ಹ್ಯಾಷ್ ಟ್ಯಾಗ್ incredibleindia) ದಲ್ಲಿ ಅದನ್ನು ಹಾಕಬಲ್ಲಿರಾ? ನೀವೇ ನೋಡಿ, ಒಂದು ರಾಜ್ಯದ ಎಲ್ಲಾ ಜನರು ಹೀಗೆ ಹೇಳಿದರೆ ನಾನು ಸರ್ಕಾರದಿಂದ ಅದನ್ನು ಪರಿಶೀಲನೆ ಮಾಡಿಸಿ ಬಹಳ ಸಾಮಾನ್ಯವಾಗಿ ಯಾವ 7 ತಾಣಗಳು ಪ್ರತಿ ರಾಜ್ಯದಿಂದ ಬಂದಿವೆ ಅದರ ಮೇಲೆ ಪ್ರಚಾರ ಸಾಹಿತ್ಯವನ್ನು ತಯಾರು ಮಾಡಲು ಹೇಳುತ್ತೇನೆ. ಅಂದರೆ ಒಂದು ಪ್ರಕಾರವಾಗಿ ಜನರ ಅಭಿಪ್ರಾಯಗಳಿಂದ ಪ್ರವಾಸೀ ತಾಣಗಳ ಅಭಿವೃದ್ಧಿ ಹೇಗೆ ಆಗುತ್ತದೆಯೋ ಅದೇ ರೀತಿ ನೀವು ದೇಶದೆಲ್ಲೆಡೆ ಯಾವ ತಾಣಗಳನ್ನು ನೋಡಿದ್ದೀರಿ ಅದರಲ್ಲಿ 7 ನಿಮಗೆ ಅತ್ತ್ಯುತ್ತಮ ಎನ್ನಿಸುವ, ಎಲ್ಲರೂ ಇದನ್ನು ಒಂದೇ ಒಂದು ಸರಿ ನೋಡಲೇಬೇಕು, ತಿಳಿದುಕೊಳ್ಳಬೇಕು, ಅದರ ಬಗ್ಗೆ ಮಾಹಿತಿ ತಿಳಿದುಕೊಳ್ಳಬೇಕು ಅನ್ನಿಸುವ ನಿಮ್ಮ ನೆಚ್ಚಿನ ಅಂತಹ 7 ಸ್ಥಳಗಳ ಬಗ್ಗೆ ಸಹ Mygov UÉ, NarendraModiApp ಗೆ ಖಂಡಿತ ಕಳುಹಿಸಿಕೊಡಿ. ಭಾರತ ಸರ್ಕಾರವು ಅಂತಹ ಉತ್ತಮ ತಾಣಗಳ ಬಗ್ಗೆ ಫಿಲಂ ಮಾಡುವುದು, ವಿಡಿಯೊ ಮಾಡುವುದು, ಪ್ರಚಾರ ಸಾಹಿತ್ಯವನ್ನು ತಯಾರಿಸುವುದು ಮತ್ತು ಅಂತಹ ಸ್ಥಳಗಳ ಪ್ರವಾಸವನ್ನು ಉತ್ತೇಜಿಸುವುದು ಇವುಗಳ ಬಗ್ಗೆ ಕೆಲಸ ಮಾಡುತ್ತದೆ. ನಿಮ್ಮಗಳ ಕಡೆಯಿಂದ ಆಯ್ಕೆಗೆ ಒಳಪಟ್ಟ ತಾಣಗಳನ್ನು ನಾವು ಸ್ವೀಕರಿಸುತ್ತೇವೆ. ಬನ್ನಿ, ನನ್ನ ಜೊತೆಗೂಡಿ. ಈ ಅಕ್ಟೋಬರ್ ತಿಂಗಳಿನಿಂದ ಮಾರ್ಚ್ ತಿಂಗಳವರೆಗಿನ ನಿಮ್ಮ ಸಮಯವನ್ನು ದೇಶದ ಪ್ರವಾಸೋದ್ಯಮವನ್ನು ಬಲಗೊಳಿಸಲು ಉಪಯೋಗಿಸಿ, ಇದರಿಂದ ನೀವು ಸಹ ಒಂದು ದೊಡ್ಡ ವೇಗವರ್ಧಕ ಮಧ್ಯವರ್ತಿಗಳಾಗಬಹುದು. ನಾನು ನಿಮಗೆ ಆಹ್ವಾನ ಕೊಡುತ್ತಿದ್ದೇನೆ. ನನ್ನ ಪ್ರೀತಿಯ ದೇಶವಾಸಿಗಳೇ, ಒಬ್ಬ ಮನುಷ್ಯನಾಗಿ ಅನೇಕ ವಿಷಯಗಳು ನನ್ನ ಮನಸನ್ನು ಮುಟ್ಟುತ್ತವೆ. ನನ್ನ ಹೃದಯವನ್ನು ಅಲ್ಲೋಲಕಲ್ಲೋಲ ಮಾಡಿಬಿಡುತ್ತವೆ. ನನ್ನ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿ ಬಿಡುತ್ತವೆ. ಎಷ್ಟಾದರೂ ನಾನು ಕೂಡ ನಿಮ್ಮ ಹಾಗೆ ಒಬ್ಬ ಮನುಷ್ಯ. ಹಿಂದಿನ ದಿನಗಳಲ್ಲಿ ನಡೆದ ಘಟನೆ, ಪ್ರಾಯಶಃ ನಿಮಗೂ ಸಹ ನೆನಪಿನಲ್ಲಿ ಉಳಿದಿರಬಹುದು. ಮಹಿಳಾ ಶಕ್ತಿ ಮತ್ತು ದೇಶಭಕ್ತಿಯ ಒಂದು ವಿಶಿಷ್ಠ ಉದಾಹರಣೆ ನಾವೆಲ್ಲಾ ದೇಶವಾಸಿಗಳು ನೋಡಿದ್ದೇವೆ. ಭಾರತೀಯ ಸೇನೆಗೆ ಲೆಫ್ಟಿನೆಂಟ್ ಸ್ವಾತಿ ಮತ್ತು ನಿಧಿ ಎನ್ನುವ ರೂಪದಲ್ಲಿ ಇಬ್ಬರು ವೀರಾಂಗನೆಯರು ಸಿಕ್ಕಿದ್ದಾರೆ. ಮತ್ತು ಅವರು ಅಸಾಮಾನ್ಯ ವೀರಾಂಗನೆಯರು. ಅಸಾಮಾನ್ಯರು ಯಾಕೆಂದರೆ ಸ್ವಾತಿ ಮತ್ತು ನಿಧಿ ಇವರ ಗಂಡಂದಿರು ಮಾತೆ ಭಾರತಿಯ ಸೇವೆ ಮಾಡುತ್ತ ಹುತಾತ್ಮರಾದವರು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಸಂಸಾರ ನಾಶವಾದರೆ ಮನಃಸ್ಥಿತಿ ಹೇಗಿರಬಹುದು ಎಂದು ನಾವು ಯೋಚಿಸಲೂ ಸಾಧ್ಯವೇ? ಆದರೆ ಹುತಾತ್ಮರಾದ ಕರ್ನಲ್ ಸಂತೋಷ್ ಮಹಾದಿಕ್ ಅವರ ಪತ್ನಿ ಸ್ವಾತಿ ಮಹಾದಿಕ್




ಇಂತಹ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಾ ಮನದಲ್ಲೇ ನಿಶ್ಚಯ ಮಾಡಿದರು ಮತ್ತು ಅವರು ಭಾರತೀಯ ಸೇನೆಗೆ ಸೇರಿದರು. ಹನ್ನೊಂದು ತಿಂಗಳ ತನಕ ಅವರು ಕಠಿಣ ಕೆಲಸಗಳನ್ನು ಮಾಡುತ್ತಾ ತರಬೇತಿ ತೆಗೆದುಕೊಂಡರು ಮತ್ತು ತಮ್ಮ ಪತಿಯ ಕನಸನ್ನು ಸಾಕಾರಗೊಳಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಅದೇ


ರೀತಿ ನಿಧಿ ದುಬೆ ಅವರು ಕೂಡ. ಅವರ ಪತಿ ಮುಕೇಶ್ ದುಬೆ ಸೇನೆಯಲ್ಲಿ ನಾಯಕ್ ಆಗಿ ಸೇವೆ ಮಾಡುತ್ತಿದ್ದರು ಮತ್ತು ಮಾತೃಭೂಮಿಗಾಗಿ ಹುತಾತ್ಮರಾದರು. ಅವರ ಪತ್ನಿ ನಿಧಿ ಮನಸ್ಸಿನಲ್ಲೇ ನಿರ್ಧಾರ ಮಾಡಿಕೊಂಡು ಸೇನೆಗೆ ಸೇರಿದರು. ಎಲ್ಲಾ ದೇಶವಾಸಿಗಳಿಗೂ ನಮ್ಮ ಈ ಮಾತೃಶಕ್ತಿಯ ಮೇಲೆ, ನಮ್ಮ ಈ ವೀರಾಂಗನೆಯರ ಮೇಲೆ ಸಹಜವಾಗಿ ಬಹಳ ಹೆಮ್ಮೆ ಇರಬೇಕು. ನಾನು ಈ ಇಬ್ಬರು ಸೋದರಿಯರಿಗೂ ಹೃದಯಪೂರ್ವಕವಾಗಿ ತುಂಬಾ ತುಂಬಾ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ. ಇವರಿಬ್ಬರೂ ದೇಶದ ಕೋಟಿ ಕೋಟಿ ಜನರಲ್ಲಿ ಒಂದು ಹೊಸ ಪ್ರೇರಣೆ, ಒಂದು ಹೊಸ ಪ್ರಜ್ಞೆಯನ್ನು ಜಾಗೃತಗೊಳಿಸಿದ್ದಾರೆ. ಆ ಇಬ್ಬರು ಸೋದರಿಯರಿಗೆ ತುಂಬಾ ಧನ್ಯವಾದಗಳು.


ನನ್ನ ಪ್ರೀತಿಯ ದೇಶವಾಸಿಗಳೇ, ನವರಾತ್ರಿಯ ಉತ್ಸವ ಮತ್ತು ದೀಪಾವಳಿಯ ನಡುವೆ ನಮ್ಮ ದೇಶದ ಯುವ ಪೀಳಿಗೆಯವರಿಗೆ ಒಂದು ತುಂಬಾ ದೊಡ್ಡ ಅವಕಾಶ ಸಹ ಇದೆ. FIFA under–17 ವರ್ಲ್ಡ್ ಕಪ್ ನಮ್ಮಲ್ಲಿ ಜರುಗುತ್ತಿದೆ. ಸುತ್ತಲೂ ಫುಟ್ ಬಾಲ್‌ನ ಗುಂಗು ಅನುರಣಿಸುತ್ತದೆ ಎನ್ನುವ ವಿಶ್ವಾಸ ನನಗಿದೆ. ಎಲ್ಲಾ ವಯೋಮಾನದವರಲ್ಲೂ ಫುಟ್ ಬಾಲ್‌ನ ಬಗ್ಗೆ ಆಸಕ್ತಿ ಹೆಚ್ಚಾಗುತ್ತಿದೆ. ಹಿಂದುಸ್ಥಾನದ ನಮ್ಮ ಯುವಕರು ಆಡುತ್ತಾ ಇಲ್ಲದಿರುವ ಯಾವುದೇ ಶಾಲಾ –ಕಾಲೇಜುಗಳ ಮೈದಾನಗಳೂ ಕಾಣಿಸದಿರಲಿ. ಬನ್ನಿ, ಇಡೀ ವಿಶ್ವವೇ ಭಾರತದ ನೆಲದಲ್ಲಿ ಆಡಲು ಬರುತ್ತಿದೆ, ನಾವು ಸಹ ಆಟವನ್ನು ನಮ್ಮ ಜೀವನದ ಒಂದು ಭಾಗವನ್ನಾಗಿ ಮಾಡಿಕೊಳ್ಳೋಣ.


ನನ್ನ ಪ್ರೀತಿಯ ದೇಶವಾಸಿಗಳೇ, ನವರಾತ್ರಿಯ ಪರ್ವ ನಡೆಯುತ್ತಿದೆ. ದುರ್ಗಾ ಮಾತೆಯ ಪೂಜೆಯ ಸಮಯ ಇದು. ಇಡೀ ವಾತಾವರಣವೇ ಪವಿತ್ರ ಸುವಾಸನೆಯೊಂದಿಗೆ ವ್ಯಾಪಕವಾಗಿ ಹರಡಿಕೊಂಡಿರುತ್ತದೆ. ನಮ್ಮ ಸುತ್ತಲೂ ಒಂದು ಆಧ್ಯಾತ್ಮಿಕತೆಯ ವಾತಾವರಣ, ಉತ್ಸವದ ವಾತಾವರಣ, ಭಕ್ತಿಯ ವಾತಾವರಣ ಮತ್ತು ಇದೆಲ್ಲವೂ ಶಕ್ತಿಯ ಸಾಧನೆಯನ್ನು ಮಾಡುವ ಪರ್ವ ಎಂದು ಪರಿಗಣಿಸಲಾಗುತ್ತದೆ. ಇದನ್ನು ಶರನ್ನವರಾತ್ರಿ ಎಂದು ಕರೆಯುತ್ತಾರೆ ಮತ್ತು ಇಲ್ಲಿಂದಲೇ ಶರದೃತುವಿನ ಆರಂಭವಾಗುತ್ತದೆ. ನವರಾತ್ರಿಯ ಈ ಶುಭ ಸಂದರ್ಭದಲ್ಲಿ ನಾನು ದೇಶವಾಸಿಗಳೆಲ್ಲರಿಗೂ ಅನೇಕಾನೇಕ ಶುಭ ಕಾಮನೆಗಳನ್ನು ಹಾರೈಸುತ್ತೇನೆ ಮತ್ತು ದೇಶದ ಸಾಮಾನ್ಯ ಮಾನವನ ಜೀವನದ ಆಸೆ, ಆಕಾಂಕ್ಷೆಗಳನ್ನು ಪೂರ್ಣಗೊಳಿಸಲು ನಮ್ಮ ದೇಶ ಹೊಸ ಎತ್ತರಕ್ಕೇರಲಿ ಎಂದು ತಾಯಿ ಶಕ್ತಿಯನ್ನು ಪ್ರಾರ್ಥಿಸುತ್ತೇನೆ. ಎಲ್ಲಾ ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ದೇಶಕ್ಕೆ ಬರಲಿ. ದೇಶವು ಶೀಘ್ರ ಗತಿಯಲ್ಲಿ ಮುನ್ನಡೆಯಲಿ ಮತ್ತು 2022 ಭಾರತದ ಸ್ವಾತಂತ್ರ್ಯದ 75 ನೇ ವರ್ಷ. ಸ್ವಾತಂತ್ರ್ಯ ಪ್ರೇಮಿಗಳ ಕನಸುಗಳನ್ನು ಪೂರೈಸುವ ಪ್ರಯತ್ನ, 125 ಕೋಟಿ ದೇಶವಾಸಿಗಳ ಸಂಕಲ್ಪ ಮತ್ತು ಕಠಿಣ ಪರಿಶ್ರಮ, ಪುರುಷಾರ್ಥ ಮತ್ತು ಸಂಕಲ್ಪವನ್ನು ಸಾಕಾರಗೊಳಿಸಲು ಐದು ವರ್ಷದ ನೀಲ ನಕ್ಷೆಯನ್ನು ತಯಾರಿಸಿ ನಾವು ಮುನ್ನಡೆಯೋಣ. ತಾಯಿ ಶಕ್ತಿ ನಮಗೆ ಆಶೀರ್ವಾದ ನೀಡಲಿ. ನಿಮ್ಮೆಲ್ಲರಿಗೂ ಅನೇಕಾನೇಕ ಶುಭಕಾಮನೆಗಳು. ಉತ್ಸವವನ್ನೂ ಆಚರಿಸಿ, ಉತ್ಸಾಹವನ್ನೂ ಹೆಚ್ಚಿಸಿಕೊಳ್ಳಿ. ಅನಂತ ಅನಂತ ಧನ್ಯವಾದಗಳು. ❑



JEWELS FROM PUBLICATIONS DIVISION












For further Details Please Contact:
Yojana (Kannada)
1st Floor, 'F' Wing, Kendriya Sadana, Koramangala,
BENGALURU - 560 034
Ph.: 080-25537244 E-mail : kannada-yojana@gov.in

PUBLICATIONS DIVISION
MINISTRY OF INFORMATION & BROADCASTING
GOVERNMENT OF INDIA

e-mail : dpd@sb.nic.in, dpd@hub.nic.in
website : publicationsdivision.nic.in

# ಪಶು ಪೋಷಣೆಗೆ ವೈಜ್ಞಾನಿಕ ಮಾರ್ಗದರ್ಶನ

* ರಾಘವೇಂದ್ರ ಭಟ್ಟ
** ಎನ್.ಕೆ.ಎಸ್. ಗೌಡ
*** ಕೆ. ಗಿರಿಧರ್




**ಸಂಸ್ಥೆಯು ರೈತರೊಂದಿಗೆ ನಿಕಟ ಸಂಪರ್ಕ ಹೊಂದಿದ್ದು ತಂತ್ರಜ್ಞಾನಗಳ ವರ್ಗಾವಣೆ ಮತ್ತು ತಾಂತ್ರಿಕ ವಿಚಾರಗಳ ಮಾಹಿತಿ ಪೂರೈಕೆಗೆ ಕೃಷಿ ವಿಜ್ಞಾನ ಕೇಂದ್ರಗಳು ಹಾಲು ಉತ್ಪಾದಕರ ಸಂಘಗಳು ಮತ್ತು ಪಶು ವೈದ್ಯಕೀಯ ಇಲಾಖೆಗಳ ಜೊತೆಗೆ ಸಂಯುಕ್ತ ಪ್ರಯತ್ನ ಮಾಡುತ್ತಿದೆ.**

**ರಾ**ಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆಯು ಪ್ರಾಣಿ ಆಹಾರ ಮತ್ತು ಶರೀರ ಕ್ರಿಯೆಗೆ ಸಂಬಂಧಿಸಿದ ಮೂಲಭೂತ ಸಂಶೋಧನೆ ಹಾಗೂ ಉತ್ಪಾದನೆಯ ಕ್ಷಮತೆ ಮತ್ತು ಉತ್ಪಾದನೆಯನ್ನು ವೃದ್ಧಿಸಲು ಕಾರ್ಯತಂತ್ರ ರೂಪಿಸುವ ಧ್ಯೇಯ ಹೊಂದಿದ್ದು, ಈ ನಿಟ್ಟಿನಲ್ಲಿ ಸಂಸ್ಥೆ ಕಾರ್ಯತತ್ಪರವಾಗಿದೆ. ಪ್ರಾಣಿ ಸಾಕಣಿಯಲ್ಲಿ ಆಹಾರದ ಪ್ರಾಮುಖ್ಯತೆ ಬಹುಮುಖ್ಯ. ಗುಣಮಟ್ಟದ ಆಹಾರ ಹಾಗೂ ಕಡಿಮೆ ಖರ್ಚಿನಲ್ಲಿ ಆಹಾರ ಪೂರೈಕೆಯ ಪದ್ಧತಿಗಳನ್ನು ರೂಪಿಸಲಾಗಿದ್ದು, ಉಪಯುಕ್ತ ತಾಂತ್ರಿಕ ಮಾಹಿತಿಗಳು ಹಾಗೂ ತಂತ್ರಜ್ಞಾನಗಳು ರೈತರಿಗೆ ಲಭ್ಯವಾಗಿವೆ. ಸ್ಥಳೀಯ ಆಹಾರ ಸಂಪನ್ಮೂಲಗಳಾದ ಅಡಿಕೆ ಹಾಳೆ, ಹಣ್ಣಿನ ಶೇಷಗಳು, ಬೇವಿನ ಹಿಂಡಿ, ಸೂರ್ಯಕಾಂತಿಯ ದಿಂಡುಗಳು, ಹರಳೆಕಾಯಿ ಹಿಂಡಿಯಂತಹ ಅಸಂಪ್ರದಾಯಕ ಮೂಲಗಳ ವಿಶ್ಲೇಷಣೆ ಮತ್ತು ಅಧ್ಯಯನ ಮಾಡಿ, ಪಶು ಆಹಾರದಲ್ಲಿ ಬಳಸುವ ಕ್ರಮಗಳನ್ನು ರೂಪಿಸಲಾಗಿದೆ. ಒಣ ಮೇವುಗಳಾದ ರಾಗಿ ಹುಲ್ಲು, ಭತ್ತದ ಹುಲ್ಲು ಹಾಗೂ ಜೋಳದ ಹುಲ್ಲುಗಳ ಗುಣವರ್ಧನೆ ಹಾಗೂ ಜೀರ್ಣತೆಯನ್ನು ವೃದ್ಧಿಸುವ ಸರಳ ವಿಧಾನಗಳನ್ನು ರೈತರಿಗೆ ಒದಗಿಸಲಾಗಿದೆ. ಖನಿಜ–ಲವಣಗಳ ಕೊರತೆ ಮತ್ತು ಅಸಮತೋಲನವನ್ನು ನಿವಾರಿಸಲು, ಸಮೀಕ್ಷೆ ಮತ್ತು ಸಂಶೋಧನೆಯ ನಂತರ, ಕ್ಷೇತ್ರೀಯ ಖನಿಜ ಮಿಶ್ರಣಗಳ ಸೂತ್ರಗಳನ್ನು ರೂಪಿಸಿ, ಕರ್ನಾಟಕ ಹಾಲು ಮಹಾ ಮಂಡಳಿ ಮತ್ತು ನಂದಿ–ಅಗ್ರೋವೆಟ್ ಸಂಸ್ಥೆಗಳ ಮೂಲಕ ವಾಣಿಜ್ಯೀಕರಣಗೊಳಿಸಲಾಗಿದೆ. ಕರ್ನಾಟಕದ ಎಲ್ಲ ಕ್ಷೇತ್ರೀಯ ವಲಯಗಳಲ್ಲಿ ಈ ಖನಿಜ ಮಿಶ್ರಣಗಳು ರೈತರಿಗೆ ದೊರೆಯುತ್ತಿವೆ. ಈ ಖನಿಜ–ಮಿಶ್ರಣದ ಬಳಕೆ, ಗರ್ಭದಾರಣೆಯ ಕ್ಷಮತೆ, ಆರೋಗ್ಯ ಮತ್ತು ಗುಣಮಟ್ಟದ ಹಾಲಿನ ಉತ್ಪಾದನೆಗೆ ಸಹಾಯಕವಾಗಿದೆ. ಕುರಿ–ಮೇಕೆಗಳಿಗೆ ಕೂಡ ವಿಶೇಷ ಖನಿಜಮಿಶ್ರಣವನ್ನು ರೂಪಿಸಲಾಗಿದ್ದು, ಕೃಷಿಕರಿಗೆ ಮಾರುಕಟ್ಟೆಯಲ್ಲಿ ಲಭ್ಯವಾಗಿದೆ.

ಅಧಿಕ ಹಾಲಿನ ಇಳುವರಿಯಿರುವ ಮಿಶ್ರ ತಳಿ ರಾಸುಗಳಿಗೆ ಬೈಪಾಸ್ ಆಹಾರಗಳ




**ಒಣ ಮೇವಾಗಿ ಅಡಿಕೆ ಹಾಳೆಯ ಬಳಕೆ**

* ನಿರ್ದೇಶಕರು, ** & *** ಪ್ರಧಾನ ವಿಜ್ಞಾನಿಗಳು, ಎನ್.ಐ.ಎ.ಎನ್.ಪಿ. ಆಡುಗೋಡಿ, ಬೆಂಗಳೂರು. E-mail : directornianp@gmail.com




**ಹಸಿರು ಮೇವಾಗಿ ಪೈನಾಪಲ್ ಹಣ್ಣಿನ ತ್ಯಾಜ್ಯದ ಬಳಕೆ**

ಪ್ರಾಮುಖ್ಯತೆ, ಆಹಾರ ಮೂಲಗಳು ಹಾಗೂ ತಯಾರಿಸುವ ವಿಧಾನಗಳ ಬಗ್ಗೆ ನಡೆದ ಅಧ್ಯಯನದ ಫಲವಾಗಿ ಸಂಸ್ಥೆಯು ಬೈಪಾಸ್ ಪ್ರೋಟೀನ್ ಹಾಗೂ ಬೈಪಾಸ್ ಕೊಬ್ಬಿಗೆ ಸಂಬಂಧಿಸಿದಂತೆ ತಾಂತ್ರಿಕ ಮಾಹಿತಿಯನ್ನು ಪಶು ಆಹಾರ ತಯಾರಿಸುವ ಉದ್ಯಮಗಳಿಗೆ ಒದಗಿಸಿದೆ.

ಪ್ರಾಣಿ ಸಾಕಣೆಯಲ್ಲಿ ಹಸಿರು ಹುಲ್ಲು ಅತೀ ಮುಖ್ಯ. ಹಸಿರು ಹುಲ್ಲನ್ನು ಬೆಳೆಸುವ ಹಾಗೂ ಸಂರಕ್ಷಿಸುವ ವಿಧಾನಗಳ ಬಗ್ಗೆ ಸಂಸ್ಥೆಯಿಂದ ಹಲವಾರು ಉಪಯುಕ್ತ ಮಾಹಿತಿಗಳನ್ನು ಒದಗಿಸಲಾಗಿದೆ. ಕಡಿಮೆ ವೆಚ್ಚದಲ್ಲಿ ಅಜೋಲ್ಲ ಉತ್ಪಾದನೆ, ಹೈಡ್ರೋಪೋನಿಕ್ ಮತ್ತು ಮೊಳಕೆ ಹಸಿರು ಮೇವಿನ ತಂತ್ರಜ್ಞಾನಗಳನ್ನು ಕೂಡ ಸರಳ ಪದ್ಧತಿಯಲ್ಲಿ ಕಾರ್ಯ ರೂಪಕ್ಕೆ ತರಲಾಗಿದೆ. ಡ್ರಂಗಳಲ್ಲಿ ರಸ ಮೇವಿನ ತಯಾರಿಕೆ ಹಾಗೂ ಬಳಕೆಯ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ರೈತರಿಗೆ ನೀಡಲಾಗಿದೆ. ಹುಲ್ಲನ್ನು ತುಂಡು ಮಾಡಿ ತಿನ್ನಿಸುವ ಕ್ರಮದ ಪ್ರಾಮುಖ್ಯತೆ ಹಾಗೂ ಲಾಭಗಳನ್ನು ಕೃಷಿಕರಿಗೆ ವಿವಿದ ಮಾದ್ಯಮಗಳ ಮೂಲಕ ಮನವರಿಕೆ ಮಾಡಲಾಗಿದೆ.

ಪರಿಸರ ರಕ್ಷಣೆ ಹಾಗೂ ಜಾಗತಿಕ ತಾಪಮಾನದ ಸಂಬಂಧವಾಗಿ ಸಾಕು ಪ್ರಾಣಿಗಳ ಪಾತ್ರ ಮತ್ತು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸುದೀರ್ಘ ಸಂಶೋಧನೆ ನಡೆದಿದೆ. ಹಸಿರು-ಮನೆ ಅನಿಲಗಳಾದ ಮಿಥೇನ್ ಮತ್ತು ಕಾರ್ಬನ್ ಡೈಆಕ್ಸೈಡ್‌ಗಳ ಪ್ರಸರಣಾ-ನಿಯಂತ್ರಣದ ಬಗ್ಗೆ ಜಾನುವಾರುಗಳ ಆಹಾರದಲ್ಲಿ ಬದಲಾವಣೆಯ ಕ್ರಮಗಳನ್ನು ರೂಪಿಸಲಾಗಿದೆ. ಕರ್ನಾಟಕ ಮತ್ತು ಭಾರತದ ಇ ರಾಜ್ಯಗಳಲ್ಲಿ ಪಶು ಆಹಾರ ಪದ್ಧತಿಗಳ ಕ್ರಮಕ್ಕೆ ಅನುಸಾರವಾಗಿ ಮಿಥೇನ್ ಅನಿಲದ ಪ್ರಸರಣಾ ಅಂಕಿ-ಅಂಶಗಳನ್ನು ಡಾಕ್ಯುಮೆಂಟ್ ಮಾಡಲಾಗಿದೆ. ಮಿಥೇನ್ ಅನಿಲದ ಉತ್ಪಾದನೆಯನ್ನು ಕಡಿಮೆ ಮಾಡಲು ಸಸ್ಯ ಆಹಾರಗಳಲ್ಲಿನ ಟ್ಯಾನಿನ್ ಮತ್ತು ಫೀನಾಲಿಕ್ಸ್ ರಸಾಯನಿಕ ಅಂಶಗಳ ಬಗ್ಗೆ ಕೂಡ ಸಂಶೋಧನಾ ವರದಿಮಾಡಲಾಗಿದೆ. ವೃಕ್ಷ ಮೇವುಗಳು (ಬೇವು, ಅಗಸೆ, ಅತ್ತಿ), ಧಾನ್ಯದ ಹೊಟ್ಟು, ಹುಣಸೇ ಬೀಜದ ಹೊಟ್ಟುಗಳನ್ನು ನಿಗದಿತ ಪ್ರಮಾಣದಲ್ಲಿ ಪಶು ಆಹಾರ ಕ್ರಮದಲ್ಲಿ ಬಳಸುವುದರಿಂದ ಮಿಥೇನ್ ಅನಿಲದ ಪ್ರಸರಣವನ್ನು ಕಡಿತಗೊಳಿಸಬಹುದು.

ಸಂತಾನೋತ್ಪತ್ತಿಯ ಕ್ಷಮತೆಯನ್ನು ರಾಸುಗಳಲ್ಲಿ ವೃದ್ಧಿಸುವ ಕ್ರಮಗಳ ಬಗ್ಗೆ ಮೂಲಭೂತ ಸಂಶೋಧನೆ ನಡೆಸಲಾಗಿದ್ದು ಅತೀ ಉಪಯುಕ್ತ ಮಾಹಿತಿಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನಿಯತ ಕಾಲಿಕಗಳಲ್ಲಿ ಲೇಖನಗಳ ರೂಪದಲ್ಲಿ ಪ್ರಕಾಶಿಸಲಾಗಿದೆ. ಗರ್ಭಧಾರಣೆ ಮತ್ತು ಪೌಷ್ಟಿಕಾಂಶಗಳ ಸಂಬಂದಗಳ ಬಗ್ಗೆ ಕೂಡ ಸಂಶೋಧನೆ ನಡೆಸಲಾಗಿದ್ದು ಭ್ರೂಣ ನಿರ್ವಹಣೆ, ಅಂಡಾಶಯದ ಆರೋಗ್ಯ ಮತ್ತು ಕೃತಕ ಗರ್ಭದಾರಣೆಯ ಫಲಿತಾಂಶಗಳನ್ನು ಹೆಚ್ಚಿಸುವ ಸೂಕ್ತ ಕ್ರಮಗಳನ್ನು ರೂಪಿಸಲಾಗಿದೆ. ಹೋರಿಗಳ ವೀರ್ಯದ ಗುಣ ಮಾಪನದ ಪರೀಕ್ಷಾ ವಿಧಾನಗಳನ್ನು ತಂತ್ರಜ್ಞಾನವಾಗಿ ಮಾರ್ಪಡಿಸಲಾಗಿದೆ. ಬೆಳಕಿನ ತರಂಗಾಂತರ ಬಗ್ಗೆ ಸಂಶೋಧನೆ ನಡೆಸಲಾಗಿದ್ದು. ಕೆಂಪು ಬೆಳಕಿನ ಪ್ರಭಾವದಿಂದ ಕೋಳಿಗಳಲ್ಲಿ ಮೊಟ್ಟೆಯ ಉತ್ಪಾದನೆಯಲ್ಲಿ ವೃದ್ಧಿಯಾಗುವ ಅಂಶವನ್ನು ದೃಢೀಕರಿಸಲಾಗಿದೆ. ಈ ತಂತ್ರಜ್ಞಾನವನ್ನು ಕೆಲವು ಕೋಳಿ ಫಾರಂಗಳಲ್ಲಿ ಬಳಸಲಾಗಿದೆ.

ಸಂಸ್ಥೆಯು ರೈತರೊಂದಿಗೆ ನಿಕಟ ಸಂಪರ್ಕ ಹೊಂದಿದ್ದು ತಂತ್ರಜ್ಞಾನಗಳ ವರ್ಗಾವಣೆ ಮತ್ತು ತಾಂತ್ರಿಕ ವಿಚಾರಗಳ ಮಾಹಿತಿ ಲಭ್ಯತೆಗೆ ಕೃಷಿ ವಿಜ್ಞಾನ ಕೇಂದ್ರಗಳು ಹಾಲು ಉತ್ಪಾದಕರ ಸಂಘಗಳು ಮತ್ತು ಪಶು ವೈದ್ಯಕೀಯ ಇಲಾಖೆಗಳ ಜೊತೆಗೆ ಸಂಯುಕ್ತ ಪ್ರಯತ್ನ ಮಾಡುತ್ತಿದೆ. ಕೇಂದ್ರ ಸರ್ಕಾರದ ರೈತ ಸ್ನೇಹಿ ಯೋಜನೆಗಳಾದ "ಮೇರಾ ಗಾಂವ್ ಮೇರಾ ಗೌರವ್" ಮತ್ತು "ರೈತ ಪ್ರಥಮ" ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ. ಮೇರಾ ಗಾಂವ್ - ಮೇರಾ ಗೌರವ್ ಯೋಜನೆಯಲ್ಲಿ 50 ಕೃಷಿಕ ಗ್ರಾಮಗಳನ್ನು ಆಯ್ಕೆ ಮಾಡಲಾಗಿದ್ದು ಪ್ರಾಣಿ ಸಾಕಣೆಗೆ ಸಂಬಂಧಿತ ತಾಂತ್ರಿಕ ವಿಚಾರಗಳನ್ನು ಮತ್ತು ತಂತ್ರಜ್ಞಾನಗಳನ್ನು ರೈತರಿಗೆ ತಲುಪಿಸುವ ಪ್ರಯತ್ನ ಮಾಡಲಾಗಿದೆ. "ಫೀಡ್ ಚಾರ್ಟ್" ಎಂಬ ಸಾಧನ ಬಳಸಿ ಹೈನು ರಾಸುಗಳಿಗೆ ಸಮತೋಲನ ಆಹಾರದ ಕ್ರಮವನ್ನು ತಿಳಿಸಲಾಗುತ್ತಿದೆ. ಉನ್ನತ ಮಾಹಿತಿಗಾಗಿ "ಫೀಡ್ ಅಸಿಸ್ಟ್" ಎಂಬ ಗಣಕವನ್ನು ತಯಾರಿಸಲಾಗಿದ್ದು ವಿಸ್ತರಣಾ ತರಬೇತಿಗಾಗಿ ಬಳಸಲಾಗುತ್ತಿದೆ.

ತಾಂತ್ರಿಕ ವಿಚಾರಗಳ ವಿಸ್ತರಣೆಯ ಅಂಗವಾಗಿ ರೈತರಿಗೆ ಕಾರ್ಯಶಾಲಾ ಶಿಬಿರಗಳು, ಗೋಷ್ಠಿಗಳು ಮತ್ತು ವಿಚಾರ-ವಿನಿಮಯ ಸಭೆಗಳನ್ನು ಆಯೋಜಿಸಲಾಗುತ್ತಿದೆ. ಪ್ರಗತಿಪರ ಕೃಷಿಕರನ್ನು ಗುರುತಿಸಿ ಸನ್ಮಾನಿಸುವ ಕಾರ್ಯ ಕೂಡ ನಡೆಯುತ್ತಿದೆ. ರಸಮೇವು ತಯಾರಿಕೆ, ಮೇವಿನ ಉತ್ಕೃಷ್ಟ ತಳಿಗಳ ಬಗ್ಗೆ, ಹಾಲಿನ ಉತ್ಪಾದನೆ ವೃದ್ಧಿ, ಖನಿಜ-ಮಿಶ್ರಣ ಬಳಕೆ, ವೃಕ್ಷ ಮೇವಿನ ಕೃಷಿ, ಅಜೋಲ್ಲ ಕೃಷಿ, ಮೊಳಕೆ ಹುಲ್ಲು ಬೆಳೆಯುವ ತಂತ್ರಜ್ಞಾನಗಳ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ಗ್ರಾಮಗಳಲ್ಲಿ ಆಯೋಜಿಸಲಾಗುತ್ತಿದೆ. ಸಂಸ್ಥೆಯ ವಿಜ್ಞಾನಿಗಳು ರೇಡಿಯೊ, ದೂರದರ್ಶನ ಮಾಧ್ಯಮಗಳ ಮೂಲಕ ತಾಂತ್ರಿಕ ವಿಚಾರಗಳನ್ನು ರೈತರಿಗೆ ತಲುಪಿಸುವ ಕಾರ್ಯವನ್ನು ನಡೆಸುತ್ತಿದ್ದಾರೆ. ತಾಂತ್ರಿಕ ಲೇಖನಗಳು, ಆಹ್ವಾನಿತ ಉಪನ್ಯಾಸಗಳು, ಇ-ಮೇಲ್ ಮತ್ತು ಮೊಬೈಲ್ ಸಾಧನಗಳ ಮುಖಾಂತರ ಕೂಡ ಸಂಸ್ಥೆಯ ಸಿಬ್ಬಂದಿ ರೈತರಿಗೆ ನೆರವಾಗುತ್ತಿದ್ದಾರೆ. ವೆಬ್‌ಸೈಟ್‌ನಲ್ಲಿ ಕೂಡ ಪ್ರಾಣಿ ಸಾಕಣೆಗೆ ಸಂಬಂಧಿತ ಮಾಹಿತಿಗಳನ್ನು ಲಭ್ಯ ಮಾಡಲಾಗಿದೆ. ಸಂಸ್ಥೆಯು ಕೃಷಿ ಮಾಹಿತಿ ಕೇಂದ್ರವನ್ನು ಹೊಂದಿದ್ದು, ಪಶು ಆಹಾರ ಮತ್ತು ನಿರ್ವಹಣೆಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡಲಾಗುವುದು. ಕೃಷಿ ಮೇಳ ಮತ್ತು ಸಂಬಂಧಿತ ಸಭೆಗಳಿಗೆ ಪಾಲುಗೊಳ್ಳುವ ಮೂಲಕ ಸಂಸ್ಥೆಯು ರೈತರ ಸೇವೆಯಲ್ಲಿ ನಿರತವಾಗಿದೆ. ❑

# ಉಜ್ವಲ ಭವಿಷ್ಯಕ್ಕೆ ಉನ್ನತ ಶಿಕ್ಷಣ

* ಡಾ. ತೇಜಸ್ವಿನಿ ಬಿ. ಯಕ್ಕುಂಡಿಮಠ



**ಅನಾದಿಕಾಲದಿಂಲೂ ಉತ್ಕೃಷ್ಟ ಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೆಸರಾದ ಭಾರತವು ಇಂದು 'ಯುವ ದೇಶ'ವಾಗಿದ್ದು, ಪ್ರಪಂಚದಲ್ಲೇ ಅತೀ ಹೆಚ್ಚಿನ ಪ್ರಮಾಣದ ಉತ್ಪಾದಕ ವಯೋಮಿತಿಯ ಜನಸಂಖ್ಯೆಯನ್ನು ಹೊಂದಿದೆ. ಅವರಿಗೆ 21 ನೇ ಶತಮಾನಕ್ಕೆ ಸೂಕ್ತವಾದ ಕೌಶಲ್ಯಾಧಾರಿತ ಉನ್ನತ ಶಿಕ್ಷಣವನ್ನು ನೀಡುವ ಮೂಲಕ ಎಲ್ಲಾ ರಂಗಗಳಲ್ಲಿಯೂ ಬೆಳವಣಿಗೆಯನ್ನು ಸಾಧಿಸಬಹುದಾಗಿದೆ**

ಸುಭದ್ರ ಮತ್ತು ಸಮೃದ್ಧ ರಾಷ್ಟ್ರ ನಿರ್ಮಾಣದ ಬೆನ್ನೆಲುಬು, ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣವನ್ನು ಪಡೆದ ಆ ರಾಷ್ಟ್ರದ ಪ್ರಜೆಗಳಾಗಿದ್ದಾರೆ. ಇಂದಿನ ಜ್ಞಾನಯುಗದಲ್ಲಿ ದೇಶವು ಸರ್ವತೋಮುಖ ಬೆಳವಣಿಗೆಯನ್ನು ಸಾಧಿಸುವಲ್ಲಿ ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ಪಾತ್ರ ಇನ್ನೂ ವಿಸ್ತೃತವಾಗುತ್ತಿದೆ. ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ಅಭಿವೃದ್ಧಿಯು ಶಿಕ್ಷಣದ ಮೇಲೆ, ಅದರಲ್ಲೂ ವಿಶೇಷವಾಗಿ ಉನ್ನತ ಶಿಕ್ಷಣದ ಮೇಲೆ ಅವಲಂಬಿತವಾಗಿದೆ ಎಂಬುದಕ್ಕೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಹೆಚ್ಚಿನ ದಾಖಲಾತಿ ಪ್ರಮಾಣವನ್ನು ಹೊಂದಿರುವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ಉದಾಹರಿಸಬಹುದಾಗಿದೆ.

2002 ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಜನಸಂಖ್ಯಾ ಸಂಸ್ಥೆಯು ನಡೆಸಿದ ಅಧ್ಯಯನದ ಪ್ರಕಾರ ಉನ್ನತ ಶಿಕ್ಷಣ ಪಡೆದ ಅಮೆರಿಕದ ಪ್ರಜೆಯು ತನ್ನ ಜೀವಿತಾವಧಿಯಲ್ಲಿ ಗಳಿಸುವ ಆದಾಯ ಸೆಕೆಂಡರಿ ಡಿಪ್ಲೊಮಾವನ್ನು ಪಡೆದ ವ್ಯಕ್ತಿಗಿಂತ ಸುಮಾರು ಎರಡು ಪಟ್ಟು ಅಧಿಕವಾಗಿರುತ್ತದೆ. 2007–08 ರಲ್ಲಿ ಯುನೈಟೆಡ್ ಕಿಂಗಡಂನಲ್ಲಿ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ಆ ದೇಶದ ಆರ್ಥಿಕತೆಗೆ ವಿಶ್ವವಿದ್ಯಾಲಯಗಳು ಸುಮಾರು 60 ಬಿಲಿಯನ್ ಪೌಂಡ್‌ಗಳನ್ನು ಕೊಡುಗೆಯಿತ್ತವು ಹಾಗೂ ಇದರ ಸತ್‌ಪರಿಣಾಮ ಕೇವಲ ಯುನೈಟೆಡ್ ಕಿಂಗಡಂಗೆ ಮಾತ್ರ ಸೀಮಿತವಾಗಿರದೇ ಜಾಗತಿಕವಾಗಿತ್ತು. ಚೀನಾದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಹಾನ್ ಬೆಳವಣಿಗೆಯು ದಾಖಲಾಗಿದ್ದು, 1999–2005 ರ ಅವಧಿಯಲ್ಲಿ ಪದವೀಧರರ ಸಂಖ್ಯೆ ನಾಲ್ಕು ಪಟ್ಟು ವೃದ್ಧಿಸುವ ಮೂಲಕ 3 ದಶಲಕ್ಷಕ್ಕೇರಿತು. ವಿಶ್ವದಲ್ಲಿ ಅತೀ ಹೆಚ್ಚಿನ ಪ್ರಮಾಣದ ಪಿಎಚ್‌ಡಿ ಪದವೀಧರರನ್ನು, ವಿಜ್ಞಾನಿಗಳನ್ನು ಮತ್ತು ಇಂಜಿನಿಯರುಗಳನ್ನು ನಿರ್ಮಿಸುವ ರಾಷ್ಟ್ರವಾಗುತ್ತ ಚೀನಾ ದಾಪುಗಾಲು ಹಾಕುತ್ತಲಿದೆ, ಆರ್ಥಿಕವಾಗಿಯೂ ಸಾಕಷ್ಟು ಬೆಳವಣಿಗೆ ಸಾಧಿಸುತ್ತಿದೆ. ಭಾರತದಲ್ಲೂ 1990 ರ ದಶಕದಲ್ಲಿ ವಿಶ್ವವಿದ್ಯಾಲಯ ಶಿಕ್ಷಣವನ್ನು ಪಡೆಯುವವರ ಸಂಖ್ಯೆ ದ್ವಿಗುಣವಾಗಿದ್ದು, ಉನ್ನತ ಶಿಕ್ಷಣ ಸಂಸ್ಥೆಗಳಿಗಿರುವ ಬೇಡಿಕೆ ಅಧಿಕವಾಗುತ್ತಿದೆ. ಅನಾದಿಕಾಲದಿಂಲೂ ಉತ್ಕೃಷ್ಟ ಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೆಸರಾದ ಭಾರತವು ಇಂದು "ಯುವ ದೇಶ"ವಾಗಿದ್ದು, ಪ್ರಪಂಚದಲ್ಲೇ ಅತೀ ಹೆಚ್ಚಿನ ಪ್ರಮಾಣದ ಉತ್ಪಾದಕ ವಯೋಮಿತಿಯ ಜನಸಂಖ್ಯೆಯನ್ನು ಹೊಂದಿದೆ. ಅವರಿಗೆ 21 ನೇ ಶತಮಾನಕ್ಕೆ ಸೂಕ್ತವಾದ ಕೌಶಲ್ಯಾಧಾರಿತ ಉನ್ನತ ಶಿಕ್ಷಣವನ್ನು ನೀಡುವ ಮೂಲಕ ಎಲ್ಲಾ ರಂಗಗಳಲ್ಲಿಯೂ ಬೆಳವಣಿಗೆಯನ್ನು ಸಾಧಿಸಬಹುದಾಗಿದೆ ಎಂದು ಅಧ್ಯಯನಗಳು ವರದಿ ಮಾಡಿವೆ.

ಕರ್ನಾಟಕವು ಭಾರತದ ಆರ್ಥಿಕತೆಗೆ, ಸಮಗ್ರ ಬೆಳವಣಿಗೆಗೆ ಗಮನಾರ್ಹ ಕೊಡುಗೆಯನ್ನು ನೀಡುತ್ತಿರುವ ರಾಜ್ಯವಾಗಿದೆ. ಇದು ರಾಷ್ಟ್ರ ಹಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಿರುವ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳಾದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್; ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್; ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್; ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್, ಬೆಂಗಳೂರು; ಇಂಟರ್ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇನ್ಫಾರ್ಮೇಷನ್ ಟೆಕ್ನಾಲಜಿ, ಬೆಂಗಳೂರು; ನ್ಯಾಷನಲ್ ಲಾ

* ವಿಶೇಷಾಧಿಕಾರಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು. E-mail : tejaswini.umesh@gmail.com

| ಪಟ್ಟಿ 1 : ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಪ್ರಮಾಣ (18–23 ವಯೋಮಿತಿಯಲ್ಲಿರುವವರು) | | | | | | | | | | |
|---|---|---|---|---|---|---|---|---|---|---|
| ಕ್ರಸಂ | ರಾಜ್ಯ | ಎಲ್ಲಾ ವರ್ಗ | | | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | |
| | | ಪುರುಷ | ಸ್ತ್ರೀ | ಒಟ್ಟು | ಪುರುಷ | ಸ್ತ್ರೀ | ಒಟ್ಟು | ಪುರುಷ | ಸ್ತ್ರೀ | ಒಟ್ಟು |
| 1 | ಆಂಧ್ರ ಪ್ರದೇಶ | 34.7 | 26.9 | 30.8 | 28.6 | 22.4 | 25.5 | 27.4 | 19.8 | 23.4 |
| 2 | ಕರ್ನಾಟಕ | 26.3 | 25.9 | 26.1 | 19.3 | 18.0 | 18.7 | 16.9 | 15.1 | 16.1 |
| 3 | ಕೇರಳ | 26.6 | 35.0 | 30.8 | 16.4 | 28.5 | 22.4 | 13.6 | 19.2 | 16.5 |
| 4 | ತಮಿಳುನಾಡು | 46.3 | 42.4 | 44.3 | 34.6 | 34.2 | 34.4 | 36.4 | 27.3 | 31.8 |
| 5 | ತೆಲಂಗಾಣ | 39.3 | 33.4 | 36.3 | 38.1 | 34.2 | 36.1 | 39.2 | 28.7 | 33.9 |
| | ಅಖಿಲ ಭಾರತ | 25.4 | 23.5 | 24.5 | 20.8 | 19.0 | 19.9 | 15.6 | 12.9 | 14.2 |
| ಆಧಾರ:http://mhrd.gov.in/sites/upload_files/mhrd/files/statistics/AISHE2015-16.pdf | | | | | | | | | | |

ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ; ಉನ್ನತ ದರ್ಜೆಯ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಿಗೆ ತವರೂರಾಗಿದೆ. ಮಾಹಿತಿ–ತಂತ್ರಜ್ಞಾನ ಕ್ಷೇತ್ರದಲ್ಲಿಯಂತೂ ರಾಷ್ಟ್ರದಲ್ಲಿಯೇ ಮುಂಚೂಣಿಯಲ್ಲಿದೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣದ ಸ್ಥಿತಿಗತಿಗಳನ್ನು ಕುರಿತು ಸಿಂಹಾವಲೋಕನ ಮಾಡಲಾಗಿದೆ.

### ಕರ್ನಾಟಕದಲ್ಲಿ ಉನ್ನತ ಶಿಕ್ಷಣ

ಕರ್ನಾಟಕದಲ್ಲಿ 2020 ರ ವೇಳೆಗೆಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಬೆಳವಣಿಗೆಯನ್ನು ಸಾಧಿಸುವ ಗುರಿಯನ್ನು ಹೊಂದಲಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು "ವಿಷನ್ 2020 – ಹೈಯರ್ ಎಜುಕೇಶನ್ ಕರ್ನಾಟಕ" ಸಿದ್ಧ ಪಡಿಸಿದೆ. ಉನ್ನತ ಶಿಕ್ಷಣಕ್ಕೆ ದಾಖಲಾಗುವ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವು ಆಕ್ಷೇತ್ರದಲ್ಲಿ ಸಾಧಿಸುವ ಪ್ರಗತಿಯನ್ನು ಬಿಂಬಿಸುವ ಒಂದು ಪ್ರಮುಖ ಮಾನದಂಡವಾಗಿದೆ.



2012–13 ರಲ್ಲಿ 18.1% ದಷ್ಟಿದ್ದ ಒಟ್ಟು ದಾಖಲಾತಿ ಪ್ರಮಾಣವನ್ನು 2020 ರ ವೇಳೆಗೆ 35% ಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ. (Deloitte (2012) (Higher Education GER projections for Karnataka (report prepared for the Karnataka Janna Aayoga (KJA), GOK). ಪಟ್ಟಿ 1 ರಲ್ಲಿ ಕರ್ನಾಟಕ ಹಾಗೂ ದಕ್ಷಿಣ ಭಾರತದ ರಾಜ್ಯಗಳಲ್ಲಿ 2015–16 ನೇ ಸಾಲಿನ ಎಐಎಸ್ಎಚ್ಇ ವರದಿಯನ್ವಯ ದಾಖಲಾದ ಉನ್ನತ ಶಿಕ್ಷಣದಲ್ಲಿನ ಒಟ್ಟು ದಾಖಲಾತಿ ಪ್ರಮಾಣದ ಕುರಿತಾದ ಮಾಹಿತಿಯನ್ನು ನೀಡಲಾಗಿದೆ.

ಪಟ್ಟಿ : 1 ಅಂಕಿ–ಅಂಶಗಳನ್ನು ಗಮನಿಸಿದಾಗ ಕರ್ನಾಟಕದಲ್ಲಿನ (26.1%) ಒಟ್ಟು ದಾಖಲಾತಿ ಪ್ರಮಾಣವು ಭಾರತಕ್ಕಿಂತ (24.5%) ಅಲ್ಪ ಪ್ರಮಾಣದಲ್ಲಿ ಉತ್ತಮವಾಗಿದ್ದರೂ ಇತರೇ ದಕ್ಷಿಣ ಭಾರತದ ರಾಜ್ಯಗಳಿಗಿಂತ ಕಡಿಮೆಯಾಗಿದೆ. ಉನ್ನತ ಶಿಕ್ಷಣ ಸಂಸ್ಥೆಗಳಿಗೆ ದಾಖಲಾಗುವ 18–23 ರ ವಯೋಮಾನದಲ್ಲಿರುವವರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಪ್ರಮಾಣ ಕರ್ನಾಟಕದಲ್ಲಿ ಕ್ರಮವಾಗಿ 18.7% ಹಾಗೂ 16.1% ರಷ್ಟಿದ್ದು, ಇದು ದಕ್ಷಿಣ ಭಾರತದ ರಾಷ್ಟ್ರಗಳಿಗೆ ಹೋಲಿಸಿದಾಗ ಕನಿಷ್ಠತಮವಾಗಿರುವುದು ಖೇದದ ಸಂಗತಿಯಾಗಿದೆ. ಒಟ್ಟಾರೆಯಾಗಿ ಅಖಿಲ ಭಾರತ ಮಟ್ಟದ ಹಾಗೂ ರಾಜ್ಯಗಳ ಅಂಕಿ–ಅಂಶಗಳನ್ನು ಗಮನಿಸಿದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರ ದಾಖಲಾತಿ ಪ್ರಮಾಣ ಕಡಿಮೆಯಿದ್ದು ಅದನ್ನು ಸರಿಪಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ.

| ಪಟ್ಟಿ 2 : ಉನ್ನತ ಶಿಕ್ಷಣದಲ್ಲಿ ಲಿಂಗ ಸಮಾನತೆಯ ಸೂಚ್ಯಂಕ | | | | |
|---|---|---|---|---|
| ಕ್ರ.ಸಂ. | ರಾಜ್ಯ | ಎಲ್ಲಾ ವರ್ಗಗಳು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| 1 | ಆಂಧ್ರ ಪ್ರದೇಶ | 0.77 | 0.78 | 0.72 |
| 2 | ಕರ್ನಾಟಕ | 0.99 | 0.93 | 0.89 |
| 3 | ಕೇರಳ | 1.32 | 1.73 | 1.41 |
| 4 | ತಮಿಳುನಾಡು | 0.92 | 0.99 | 0.75 |
| 5 | ತೆಲಂಗಾಣ | 0.85 | 0.90 | 0.73 |
| | ಅಖಿಲ ಭಾರತ | 0.92 | 0.91 | 0.83 |
| ಆಧಾರ:http://mhrd.gov.in/sites/upload_files/mhrd/files/statistics/AISHE2015-16.pdf | | | | |



ಲಿಂಗತಾರತಮ್ಯವು ಜಗತ್ತಿನ ಬಹುಪಾಲು ರಾಷ್ಟ್ರಗಳಿಗೆ ಅಂಟಿಕೊಂಡಿರುವ ಅಭಿಶಾಪವಾಗಿದ್ದು, ಸಮಾಜದ ವಿವಿಧ ಮಜಲುಗಳಲ್ಲಿ ಇದು ಸುಸ್ಪಷ್ಟವಾಗಿ ಗೋಚರವಾಗುತ್ತದೆ. ಉನ್ನತ ಶಿಕ್ಷಣವೂ ಇದಕ್ಕೆ ಹೊರತಲ್ಲ ಎಂಬುದು ಪಟ್ಟಿ 1 ರಲ್ಲಿನ ಮಹಿಳೆಯರ ಒಟ್ಟು ದಾಖಲಾತಿ ಪ್ರಮಾಣದಿಂದ ಸ್ಪಷ್ಟವಾಗುತ್ತದೆ. ಪಟ್ಟಿ 2 ರಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಲಿಂಗ ಸಮಾನತೆಯ ಸೂಚ್ಯಂಕವನ್ನು ನೀಡಿದೆ. ಕೇರಳ ರಾಜ್ಯವನ್ನು ಹೊರತು ಪಡಿಸಿದರೆ ದಕ್ಷಿಣ ಭಾರತದ ಇತರೆ ರಾಜ್ಯಗಳಲ್ಲಿ ಹಾಗೂ ಅಖಿಲ ಭಾರತ ಮಟ್ಟದಲ್ಲಿ ಲಿಂಗ ಸಮಾನತೆಯ ಸೂಚ್ಯಂಕವು ಮಹಿಳೆಯರ ಪರವಾಗಿಲ್ಲ. ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿನಿಯರು ಹೆಚ್ಚಿನ ಪ್ರಮಾಣದ ಅಸಮಾನತೆಯನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಆದ್ದರಿಂದ, ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ, ಲಿಂಗ ಸಮಾನತೆ, ಸಾಕ್ಷರತೆ, ಇವೇ ಮೊದಲಾದವುಗಳಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಕೇರಳ ರಾಜ್ಯದ ಹಾದಿಯಲ್ಲಿ ಉಳಿದ ರಾಜ್ಯಗಳು ಕ್ರಮಿಸಿದರೆ ಹಲವಾರು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ದೊರಕಲು ಸಾಧ್ಯ.

### ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳು

1916 ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಸ್ಥಾಪನೆಯ ಮೂಲಕ ಕರ್ನಾಟಕದಲ್ಲಿ ಆಧುನಿಕ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಮುನ್ನುಡಿ ಬರೆಯಲಾಯಿತು. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ 58 ವಿವಿಧ ಪ್ರಕಾರಗಳಿಗೆ ಸೇರಿದ ವಿಶ್ವವಿದ್ಯಾಲಯಗಳಿದ್ದು, ಆ ಮಾಹಿತಿಯನ್ನು ಪಟ್ಟಿ 3 ರಲ್ಲಿ ನೀಡಲಾಗಿದೆ. ಗಮನಿಸಬೇಕಾದ ಮಹತ್ವದ ಅಂಶವೆಂದರೆ ರಾಜ್ಯದಲ್ಲಿ ಒಟ್ಟು 28 ರಾಜ್ಯ ವಿಶ್ವವಿದ್ಯಾಲಯಗಳಿದ್ದು, ಅವುಗಳಲ್ಲಿ 12 ವಿಶ್ವವಿದ್ಯಾಲಯಗಳು 2001–2010 ರ ಅವಧಿಯಲ್ಲಿ ಸಂಸ್ಥಾಪಿತವಾಗಿವೆ. 2011–2017 ರ ಅವಧಿಯಲ್ಲಿ 4 ರಾಜ್ಯ ವಿಶ್ವವಿದ್ಯಾಲಯಗಳು ಕಾರ್ಯಾರಂಭ ಮಾಡಿವೆ. ಇದು ಉನ್ನತ ಶಿಕ್ಷಣದೆಡೆಗೆ ರಾಜ್ಯ ಸರ್ಕಾರವು ತೋರುತ್ತಿರುವ ಕಾಳಜಿಯನ್ನು ಬಿಂಬಿಸುತ್ತದೆ. ವಿವಿಧ ಅವಧಿಯಲ್ಲಿ ಕರ್ನಾಟಕದಲ್ಲಿ ಸಂಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯಗಳ ಮಾಹಿತಿಯನ್ನು ಚಿತ್ರ 1ರಲ್ಲಿ ನೀಡಲಾಗಿದೆ. ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯೆ ಅಧಿಕವಾಗಿರುವುದಲ್ಲದೇ ಪ್ರತ್ಯೇಕ ಜ್ಞಾನ ಪ್ರಕಾರದ ಅಭಿವೃದ್ಧಿಗೆ ಪೂರಕವಾದ ವಿಶ್ವವಿದ್ಯಾಲಯಗಳು ಸ್ಥಾಪಿತವಾಗಿವೆ. ಉದಾಹರಣೆಗೆ ಪ್ರಪಂಚದಲ್ಲಿ ಭಾಷೆಗಾಗಿಯೇ ಇರುವ ಏಕೈಕ ವಿಶ್ವವಿದ್ಯಾಲಯವೆಂಬ ಹೆಮ್ಮೆಯೊಂದಿಗೆ ಹಂಪಿಯಲ್ಲಿ ಹುಟ್ಟಿಕೊಂಡ ಕನ್ನಡ ವಿಶ್ವವಿದ್ಯಾಲಯ, ವಿಶ್ವದಲ್ಲಿ ಪ್ರಪ್ರಥಮ ಬಾರಿಗೆ ಜಾನಪದ ವಿಷಯದ ಅಧ್ಯಯನಕ್ಕಾಗಿ ಶಿಗ್ಗಾವಿ ತಾಲೂಕಿನ ಗೊಟಗೋಡಿಯಲ್ಲಿ ಸಂಸ್ಥಾಪಿತವಾದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಸಂಗೀತ ಹಾಗೂ ಪ್ರದರ್ಶಕ ಕಲೆಗಳ ಪೋಷಣೆಗಾಗಿ ಮೈಸೂರಿನಲ್ಲಿ ಜನ್ಮತಳೆದ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಹಾಗೂ ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಗದುಗಿನ ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯಗಳನ್ನು ಹೆಸರಿಸಬಹುದು. ಅಲ್ಲದೇ,ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳು ಎದುರಿಸುತ್ತಿದ್ದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ರಾಜ್ಯ ಸರ್ಕಾರವು ವಿಶೇಷ ಕಾಳಜಿಯನ್ನು ವಹಿಸಿದ್ದರಿಂದ 2004 ರಲ್ಲಿ ಬೀದರಿನಲ್ಲಿ ಕರ್ನಾಟಕ ಪಶುವೈದ್ಯಕೀಯ ಹಾಗೂ ಮೀನುಗಾರಿಕಾ ವಿಶ್ವವಿದ್ಯಾಲಯ,2008 ರಲ್ಲಿ ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯ, 2009 ರಲ್ಲಿ ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, 2010 ರಲ್ಲಿ ಬಳ್ಳಾರಿಯಲ್ಲಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಸಂಸ್ಥಾಪಿತವಾಗಿವೆ.


**ಪಟ್ಟಿ 3 : ಕರ್ನಾಟಕದಲ್ಲಿರುವ ವಿಶ್ವವಿದ್ಯಾಲಯಗಳು**

| ವಿಶ್ವವಿದ್ಯಾಲಯದ ಪ್ರಕಾರ | ಸಂಖ್ಯೆ |
|---|---|
| ರಾಜ್ಯ ವಿಶ್ವವಿದ್ಯಾಲಯಗಳು | 28 |
| ಡೀಮ್ಡ್ ವಿಶ್ವವಿದ್ಯಾಲಯಗಳು | 11 |
| ಖಾಸಗಿ ವಿಶ್ವವಿದ್ಯಾಲಯಗಳು | 14 |
| ಕೇಂದ್ರೀಯ ವಿಶ್ವವಿದ್ಯಾಲಯ | 1 |
| ರಾಷ್ಟ್ರಮಟ್ಟದ ಪ್ರಾಮುಖ್ಯತೆ ಪಡೆದ ಸಂಸ್ಥೆಗಳು | 4 |
| **ಒಟ್ಟು** | **58** |

ಆಧಾರ: www.kshec.ac.in

ಎಐಎಸ್‌ಎಚ್‌ಇ (AISHE) 2015–16 ರ ವರದಿಯನ್ವಯ ಭಾರತದಲ್ಲಿ ಕೇವಲ 14 ವಿಶ್ವವಿದ್ಯಾಲಯಗಳು ಮಹಿಳೆಯರಿಗಾಗಿ ಮೀಸಲಿದ್ದು, ಅವುಗಳಲ್ಲಿ ಒಂದಾದ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಶ್ವವಿದ್ಯಾಲಯ 2003

**ಚಿತ್ರ 1 : ವಿವಿಧ ಅವಧಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯಗಳ ಸಂಖ್ಯೆ**




ಆಧಾರ : www.kshec.ac.in

ರಿಂದ ಮಹಿಳಾ ಶಿಕ್ಷಣಕ್ಕೆ ಅಗಾಧ ಕೊಡುಗೆ ನೀಡುತ್ತಿದೆ. ರಾಷ್ಟ್ರೀಯ ಉಚ್ಚತರ ಶಿಕ್ಷಾ ಯೋಜನೆಯಡಿ ಮಹಿಳೆಯರಿಗಾಗಿಯೇ ಮೀಸಲಾಗಿರುವ ಮಹಾರಾಣೀಸ್ ಕ್ಲಸ್ಟರ್ ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿದೆ. ತನ್ಮೂಲಕ ರಾಜ್ಯದಲ್ಲಿ 2 ಮಹಿಳಾ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸಲಿವೆ. ರಾಜ್ಯದಲ್ಲಿ ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಉತ್ತೇಜನಕರ ವಾತಾವರಣವನ್ನು ನಿರ್ಮಿಸಲಾಗಿದೆ. 2015–16ನೇ ಸಾಲಿನಿಂದ ಧಾರವಾಡದಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾರ್ಯಾರಂಭ ಮಾಡಿರುವುದು ಉಲ್ಲೇಖನಾರ್ಹವಾಗಿದೆ. ಬೆಂಗಳೂರಿನಲ್ಲಿ 2017–18 ನೇ ಸಾಲಿನ ಶೈಕ್ಷಣಿಕ ವರ್ಷದಿಂದ "ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್" ಮಾದರಿಯಲ್ಲಿ "ಬೆಂಗಳೂರು ಡಾ.ಬಿ.ಆರ್. ಅಂಬೇಡ್ಕರ್‌ಸ್ಕೂಲ್ ಆಫ್ ಎಕನಾಮಿಕ್ಸ್" ಕಾರ್ಯಾರಂಭ ಮಾಡಿದೆ.

**ಪಟ್ಟಿ 4 : ಪ್ರತಿ ಲಕ್ಷ (18–23 ವಯೋಮಾನದಲ್ಲಿರುವ) ಜನಸಂಖ್ಯೆಗೆ ಲಭ್ಯವಿರುವ ಕಾಲೇಜುಗಳ ಸಂಖ್ಯೆ**

| ಕ್ರ.ಸಂ. | ರಾಜ್ಯ | ಕಾಲೇಜುಗಳ ಸಂಖ್ಯೆ | ಪ್ರತಿ ಲಕ್ಷ (18–23 ವಯೋಮಾನದಲ್ಲಿರುವ) ಜನಸಂಖ್ಯೆಗೆ ಲಭ್ಯವಿರುವ ಕಾಲೇಜುಗಳ ಸಂಖ್ಯೆ | ಸರಾಸರಿ ದಾಖಲಾತಿ |
|---|---|---|---|---|
| 1 | ಆಂಧ್ರ ಪ್ರದೇಶ | 2532 | 45 | 494 |
| 2 | ಕರ್ನಾಟಕ | 3555 | 50 | 438 |
| 3 | ಕೇರಳ | 1302 | 43 | 521 |
| 4 | ತಮಿಳನಾಡು | 2368 | 32 | 895 |
| 5 | ತೆಲಂಗಾಣ | 2454 | 60 | 574 |
| ಅಖಿಲ ಭಾರತ | | 39071 | 28 | 721 |

ಆಧಾರ: http://mhrd.gov.in/sites/upload_files/mhrd/files/statistics/AISHE 2015 -16.pdf

### ಕರ್ನಾಟಕದಲ್ಲಿ ಕಾಲೇಜುಗಳು

ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಕಾಲೇಜುಗಳ ಕೊಡುಗೆಯು ಅಪಾರವಾಗಿದ್ದು, ರಾಜ್ಯದಲ್ಲಿ ಸರ್ಕಾರಿ, ಅನುದಾನಿತ ಹಾಗೂ ಖಾಸಗಿಕಾಲೇಜುಗಳು ವಿದ್ಯಾಪ್ರಸರಣ ಕಾರ್ಯದಲ್ಲಿ ತತ್ಪರವಾಗಿವೆ. ಕರ್ನಾಟಕವು ಅಖಿಲ ಭಾರತ ಮಟ್ಟದಲ್ಲಿ ಕಾಲೇಜುಗಳಿಗೆ ಸಂಬಂಧಿಸಿದಂತೆ ಹಲವು ಮಾನದಂಡಗಳಲ್ಲಿ ಉನ್ನತ ಸ್ಥಾನದಲ್ಲಿದೆ. ಎಐಎಸ್‌ಎಚ್‌ಇ (AISHE) 2015–16 ರ ವರದಿಯನ್ವಯ ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ರಾಜಸ್ಥಾನ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳು ನಾಡು ಮತ್ತು ಮಧ್ಯಪ್ರದೇಶಗಳು ಅತೀ ಹೆಚ್ಚಿನ ಸಂಖ್ಯೆಯ ಕಾಲೇಜುಗಳನ್ನು ಹೊಂದಿರುವ 8 ರಾಜ್ಯಗಳಾಗಿದ್ದು, ಕರ್ನಾಟಕ ಅವುಗಳಲ್ಲಿ ಮೂರನೇ ಸ್ಥಾನದಲ್ಲಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 970 ಕಾಲೇಜುಗಳಿದ್ದು, ಭಾರತದಲ್ಲಿಯೇ ಅತೀ ಹೆಚ್ಚು ಕಾಲೇಜುಗಳನ್ನು ಹೊಂದಿರುವ ಜಿಲ್ಲೆಗಳ ಪೈಕಿ ಪ್ರಥಮ ಸ್ಥಾನದಲ್ಲಿದೆ. ಅತೀ ಹೆಚ್ಚಿನ ಸಂಖ್ಯೆಯ ನರ್ಸಿಂಗ್ ಕಾಲೇಜುಗಳನ್ನು ಹೊಂದಿರುವ ರಾಜ್ಯಗಳ ಪೈಕಿ ಪ್ರಥಮ ಸ್ಥಾನದಲ್ಲಿ ಹಾಗೂ ನರ್ಸಿಂಗ್ ಕಾಲೇಜಿಗೆ ದಾಖಲಾತಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯನ್ನಾಧರಿಸಿ ಕರ್ನಾಟಕ ರಾಜ್ಯವು ದ್ವಿತೀಯ ಸ್ಥಾನದಲ್ಲಿದೆ. ಶಿಕ್ಷಕ ತರಬೇತಿಗೆ ದಾಖಲಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಿದಾಗ ಕರ್ನಾಟಕವು 5 ನೇ ಸ್ಥಾನದಲ್ಲಿದೆ. 18–23 ರ ವಯೋಮಿತಿಯಲ್ಲಿರುವ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಲಭ್ಯವಿರುವ ಕಾಲೇಜುಗಳ ಸಂಖ್ಯೆಯನ್ನು ಕಾಲೇಜುಗಳ ಸಾಂದ್ರತೆ ಎಂದು ಕರೆಯಲಾಗುತ್ತದೆ. ಕಾಲೇಜುಗಳ ಸಾಂದ್ರತೆ ದೇಶಾದ್ಯಂತ ವಿಭಿನ್ನವಾಗಿದ್ದು ಬಿಹಾರದಲ್ಲಿ ಕನಿಷ್ಠ ಅಂದರೆ 7 ಕಾಲೇಜುಗಳಿದ್ದು, ತೆಲಂಗಾಣದಲ್ಲಿ ಗರಿಷ್ಠ 60 ಕಾಲೇಜುಗಳಿವೆ. ಅಖಿಲ ಭಾರತ ಮಟ್ಟದಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ 28 ಕಾಲೇಜುಗಳಿವೆ. ಕರ್ನಾಟಕದಲ್ಲಿ 3555 ಕಾಲೇಜುಗಳಿದ್ದು ಪ್ರತಿ ಲಕ್ಷ ಜನಸಂಖ್ಯೆಗೆ 50 ಕಾಲೇಜುಗಳಿವೆಹಾಗೂ ಪ್ರತಿ ಕಾಲೇಜಿನಲ್ಲಿ ದಾಖಲಾಗುವ ವಿದ್ಯಾರ್ಥಿಗಳ ಸರಾಸರಿ ಸಂಖ್ಯೆ 438 ಆಗಿದೆ. ಪಟ್ಟಿ 4 ರಲ್ಲಿ ಪ್ರತಿ ಲಕ್ಷ (18–23 ವಯೋಮಾನದಲ್ಲಿರುವ) ಜನಸಂಖ್ಯೆಗೆ ಲಭ್ಯವಿರುವ ಕಾಲೇಜುಗಳ ಸಂಖ್ಯೆಯನ್ನು ಕೊಡಲಾಗಿದೆ. ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕಾಲೇಜು ಶಿಕ್ಷಣ ಇಲಾಖೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಗಳು ಈ ಕಾಲೇಜುಗಳ ಮೇಲ್ವಿಚಾರಣೆ ಹಾಗೂ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತಿವೆ. ಈ ಕಾಲೇಜುಗಳಲ್ಲಿ ಕೆಲವು ಸ್ವಾಯುತ್ತತೆಯನ್ನು ಪಡೆದಿದ್ದರೆ ಬಹುಪಾಲು ಸಂಖ್ಯೆಯ ಕಾಲೇಜುಗಳು ವಿವಿಧ ವಿಶ್ವವಿದ್ಯಾಲಯಗಳೊಂದಿಗೆ ಸಂಲಗ್ನತೆಯನ್ನು ಹೊಂದಿವೆ.

**ಪಟ್ಟಿ 5 : ವಿವಿಧ ವರ್ಷಗಳಲ್ಲಿ ಅಸ್ತಿತ್ವದಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ**

| ವರ್ಷ | ಕಾಲೇಜುಗಳ ಸಂಖ್ಯೆ |
|---|---|
| 1960 | 18 |
| 2006 | 163 |
| 2007 | 354 |
| 2014 | 362 |
| 2016 | 412 |

### ಕಾಲೇಜು ಶಿಕ್ಷಣ ಇಲಾಖೆ

1960 ರಲ್ಲಿ ಸಂಸ್ಥಾಪಿತವಾದ ಕಾಲೇಜು ಶಿಕ್ಷಣ ಇಲಾಖೆಯು ತನ್ನ 57 ವರ್ಷಗಳ ಪಯಣದಲ್ಲಿ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಮಹತ್ತರ ಕೊಡುಗೆಯನ್ನು ಸಲ್ಲಿಸಿದೆ. ಪ್ರಸ್ತುತ 412 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, 321 ಖಾಸಗಿ ಅನುದಾನಿತ ಕಾಲೇಜುಗಳು ಇಲಾಖೆಯ ವ್ಯಾಪ್ತಿಗೆ ಒಳಪಡುತ್ತವೆ. ಇದರೊಂದಿಗೆ ಖಾಸಗಿ ಕಾಲೇಜುಗಳು ಕರ್ನಾಟಕದಲ್ಲಿ ಕಾರ್ಯಪ್ರವೃತ್ತವಾಗಿವೆ. ಈ ಕಾಲೇಜುಗಳು ಕಲೆ, ವಾಣಿಜ್ಯ, ಮತ್ತು ನಿರ್ವಹಣೆ, ವಿಜ್ಞಾನ, ಕಾನೂನು ನಿಕಾಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ




ಸ್ನಾತಕ ಶಿಕ್ಷಣವನ್ನು ನೀಡುತ್ತಿದ್ದು, ಹಲವು ಕಾಲೇಜುಗಳಲ್ಲಿ ಸ್ನಾತಕೋತ್ತರ ಶಿಕ್ಷಣಕ್ಕೂ ಅವಕಾಶ ಲಭ್ಯವಿರುವುದು ಹೆಮ್ಮೆಯ ವಿಷಯ. ಕರ್ನಾಟಕದಲ್ಲಿ ವಿವಿಧ ವರ್ಷಗಳಲ್ಲಿ ಅಸ್ತಿತ್ವದಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಪಟ್ಟಿ 5 ರಲ್ಲಿ ಬಿಂಬಿತವಾಗಿದೆ. 2006 ರಿಂದ 2016ರ ಮಧ್ಯದ 10 ವರ್ಷದ ಅವಧಿಯಲ್ಲಿ 249 ಕಾಲೇಜುಗಳು ಸ್ಥಾಪಿತವಾಗಿವೆ. ಅಂತೆಯೇ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾಥಿಗಳ ಸಂಖ್ಯೆಯುವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಿರುವುದು ಪಟ್ಟಿ 6 ರಿಂದ ಸ್ಪಷ್ಟವಾಗುತ್ತದೆ. ಈ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ರಾಜ್ಯದಲ್ಲಿ ಸಾಮಾಜಿಕವಾಗಿ/ಆರ್ಥಿಕವಾಗಿ / ಪ್ರಾದೇಶಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ವರದಾನವಾಗಿವೆ. ಏಕೆಂದರೆ ಇಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪೈಕಿ 21% ಪರಿಶಿಷ್ಟ ಜಾತಿಗೆ, 08% ಪರಿಶಿಷ್ಟ ಪಂಗಡಕ್ಕೆ, 58% ಇತರೆ ಹಿಂದುಳಿದ ವರ್ಗಕ್ಕೆ, 7% ಅಲ್ಪಸಂಖ್ಯಾತ ಸಮುದಾಯಕ್ಕೆ ಹಾಗೂ 6% ಸಾಮಾನ್ಯ ವರ್ಗಕ್ಕೆ ಸೇರಿದವರಾಗಿದ್ದಾರೆ. ಕಡಿಮೆ ಪ್ರವೇಶ ಶುಲ್ಕ ಭರಿಸುವ ಮೂಲಕ ಉನ್ನತ ಗುಣಮಟ್ಟದ ಶಿಕ್ಷಣ ಪಡೆಯುವ ಅವಕಾಶವನ್ನು ಕಲ್ಪಿಸಿಕೊಡುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪರಿಣಾಮಕಾರಿ ಬೋಧನೆಗೆ, ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ವಿಶೇಷ ಕಾಳಜಿ ವಹಿಸಲಾಗುತ್ತಿದೆ.

### ತಾಂತ್ರಿಕ ಶಿಕ್ಷಣ ಇಲಾಖೆ

1959 ರಲ್ಲಿ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ತಾಂತ್ರಿಕ ಶಿಕ್ಷಣ ಇಲಾಖೆಯು ರಾಷ್ಟ್ರ ಹಾಗೂ ರಾಜ್ಯದ ಶೈಕ್ಷಣಿಕ ನೀತಿಗಳಿಗನುಗುಣವಾಗಿ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲು ಕಟಿಬದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಹಲವು ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ವಿಶ್ವದರ್ಜೆಯ ಇಂಜಿನಿಯರುಗಳನ್ನು ನಿರ್ಮಾಣ ಮಾಡುತ್ತಿವೆ. ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಶಿಕ್ಷಣ ಸಂಸ್ಥೆಗಳ ಮಾಹಿತಿಯನ್ನು ಪಟ್ಟಿ 7 ರಲ್ಲಿ ಕೊಡಲಾಗಿದೆ.

### ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಕಾರ್ಯಪಡೆಯ ಶಿಫಾರಸ್ಸುಗಳಿಗೆ ಅನುಗುಣವಾಗಿ ಸರ್ಕಾರ, ವಿಶ್ವವಿದ್ಯಾಲಯ, ಶೈಕ್ಷಣಿಕ ವಲಯ ಹಾಗೂ ತಜ್ಞರ ನಡುವೆ ಅನ್ಯೋನ್ಯ ಸಂಬಂಧ ಉಂಟುಮಾಡಲು ಮತ್ತು ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಮಟ್ಟದ ನಿಯಂತ್ರಣ ಮಂಡಳಿಗಳ ನಡುವೆ ಕಾರ್ಯ ನಿರ್ವಹಣೆ ನಡೆಸಲು ರಾಜ್ಯ ಸರ್ಕಾರ ಜುಲೈ 15, 2009 ರ ಆದೇಶದ ಮೂಲಕ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತನ್ನು ಸ್ಥಾಪಿಸಿತು. ಕರ್ನಾಟಕ ರಾಜ್ಯ ಶಿಕ್ಷಣ ಪರಿಷತ್ತಿನ ಮುಖ್ಯ ಧ್ಯೇಯೋದ್ದೇಶಗಳು ಇಂತಿವೆ.

**ಪಟ್ಟಿ 6 : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾಥಿಗಳ ಸಂಖ್ಯೆ**

| | ಸಂಖ್ಯೆ |
|---|---|
| 2009–10 | 1.53 |
| 2010–11 | 1.68 |
| 2011–12 | 2.21 |
| 2012–13 | 2.29 |
| 2013–14 | 2.88 |
| 2014–15 | 2.94 |
| 2015–16 | 3.04 |

ಆಧಾರ:http://www.dce.kar.nic.in/

* ನೀತಿಗಳನ್ನು ರೂಪಿಸಲು ಹಾಗೂ ಖಚಿತ ಯೋಜನೆ ತಯಾರಿಸಲು ಶೈಕ್ಷಣಿಕ ಸಲಹೆ, ಸೂಚನೆ ಪಡೆಯುವುದರ ಮೂಲಕ ಶೈಕ್ಷಣಿಕ ಉತ್ಕೃಷ್ಟತೆ ಹಾಗೂ ಸಾಮಾಜಿಕ ನ್ಯಾಯವನ್ನು ಉತ್ತೇಜಿಸುವುದು.
* ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡಿ, ಉತ್ತಮ ಹೊಣೆಗಾರಿಕೆ ಹೊಂದುವಂತೆ ಮಾಡುವುದು.
* ರಾಜ್ಯದ ಸಾಮಾಜಿಕ–ಆರ್ಥಿಕ ಅಗತ್ಯಗಳಿಗನುಗುಣವಾಗಿ ಉನ್ನತ ಶಿಕ್ಷಣದ ಬೆಳವಣಿಗೆಯನ್ನು ನಿರ್ದೇಶಿಸುವುದು. (kshec.ac.in/aboutus.php)

ಮೇಲಿನ ಧ್ಯೇಯೋದ್ದೇಶಗಳ ಸಾಧನೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರ ನೇತೃತ್ವದಲ್ಲಿ ಶಿಕ್ಷಣ ತಜ್ಞರು ಹಾಗೂ ಅಧಿಕಾರಿಗಳ ಸಹಯೋಗದೊಂದಿಗೆ

**ಪಟ್ಟಿ 7 : ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ತಾಂತ್ರಿಕ ಸಂಸ್ಥೆಗಳು (2016–17 ಸಾಲಿನಲ್ಲಿದ್ದಂತೆ)**

| ಆಡಳಿತ ವರ್ಗಗಳು | ಇಂಜಿನಿಯರಿಂಗ್ ಕಾಲೇಜುಗಳು | ಪಾಲಿಟೆಕ್ನಿಕ್‌ಗಳು | ಕಿರಿಯ ತಾಂತ್ರಿಕ ಶಾಲೆಗಳು | ಲಲಿತ ಕಲಾ ಶಾಲೆಗಳು/ ಕಾಲೇಜುಗಳು | ಒಟ್ಟು |
|---|---|---|---|---|---|
| ಸರ್ಕಾರಿ | 11 | 81 | 6 | 2 | 100 |
| ವಿಶ್ವವಿದ್ಯಾಲಯ | 3 | – | – | – | 3 |
| ಖಾಸಗಿ ಅನುದಾನಿತ | 11 | 44 | – | 26 | 81 |
| ಖಾಸಗಿ ಅನುದಾನ ರಹಿತ | 202 | 171 | 6 | 49 | 498 |
| **ಒಟ್ಟು** | **227** | **296** | **12** | **77** | **612** |

ಆಧಾರ : http://dte.kar.nic.in/Circulars/Statistics/2016-17.pdf

ಮುನ್ನಡೆದಿದೆ. ಈ ಕ್ಷೇತ್ರದಲ್ಲಿ ಹಲವಾರು ಉತ್ತಮ ಬೆಳವಣಿಗೆಗಳನ್ನು ಜಾರಿಗೆ ತರುವಲ್ಲಿ ನಿರ್ಣಾಯಕ ಪಾತ್ರವನ್ನು ನಿಭಾಯಿಸುತ್ತಿದೆ.

### ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಸಲಹೆಗಳು

"We must ensure our system of Higher Education offers world -class quality for a world class economy" ಎಂದು ಬಾಬ್ ಟ್ಯಾಫ್ಟ್ ಹೇಳಿದ್ದಾರೆ. ಒಟ್ಟು ದಾಖಲಾತಿ ಪ್ರಮಾಣದ ಹೆಚ್ಚಳ, ಸಮಾಜದ ಪ್ರತಿಯೊಬ್ಬ ಅರ್ಹವ್ಯಕ್ತಿಗೂ ಉನ್ನತ ಶಿಕ್ಷಣವು ವರ್ಗ–ವರ್ಣ, ಲಿಂಗ–ಜಾತಿಗಳ ಭೇಧವಿಲ್ಲದೇ ಲಭ್ಯವಾಗುವಂತೆ ಮಾಡುವ ಗುರಿಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹೊಂದಿವೆ.

ನಮ್ಮ ರಾಷ್ಟ್ರದ ಉನ್ನತ ಶಿಕ್ಷಣ ಸಂಸ್ಥೆಗಳು ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ವಿಶ್ವ ರ್‍ಯಾಂಕಿಂಗ್ ಪಟ್ಟಿಯಲ್ಲಿ ಉನ್ನತ ಸ್ಥಾನ ಹೊಂದುವಂತಾಗಲು, ದೇಶವು ಸರ್ವತೋಮುಖ ಪ್ರಗತಿ ಸಾಧಿಸಲು ಪೂರಕವಾದ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತರಲು ಹಲವಾರು ಅಧ್ಯಯನಗಳು ನುರಿತ ಶಿಕ್ಷಣ ತಜ್ಞರಿಂದ ಸತತವಾಗಿ ನಡೆಯುತ್ತಿವೆ. ಸರ್ಕಾರವು ಕಾಲ–ಕಾಲಕ್ಕೆ ವಿಷಯ ಪರಿಣಿತರ ನೇತೃತ್ವದಲ್ಲಿ ಸಮಿತಿಗಳನ್ನು ರಚಿಸಿ ವರದಿ ಪಡೆದು, ಅವುಗಳ ಅನುಷ್ಠಾನಕ್ಕೆ ಪ್ರಯತ್ನಿಸುತ್ತಿದೆ.

ಕರ್ನಾಟಕ ಜ್ಞಾನ ಆಯೋಗವು "ಕರ್ನಾಟಕ ರಾಜ್ಯ ಶಿಕ್ಷಣ ನೀತಿ" (Karnataka State Education Policy-KSEP) ನೀತಿಯನ್ನುಅಕ್ಟೋಬರ್ 2016 ರಲ್ಲಿ ಸಿದ್ಧಪಡಿಸಿದೆ. ಈ ವರದಿಯಲ್ಲಿ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನೀಡಲಾದ ಕೆಲವು ಶಿಫಾರಸ್ಸುಗಳನ್ನು ಈ ಮುಂದೆ ನೀಡಲಾಗಿದೆ. (http://www.karnataka.gov.in/jnanaayoga / Other% 20 Reports/KJA Recommendationon KSEP .pdf)

* ಪ್ರತಿ ಹೆಣ್ಣು ಮಗುವು 12 ವರ್ಷಗಳ ಶಾಲಾ ಶಿಕ್ಷಣವನ್ನು ಪೂರೈಸಿದ ನಂತರ ಕನಿಷ್ಟ 3 ವರ್ಷಗಳ ಕಾಲೇಜು ಶಿಕ್ಷಣವನ್ನು ಪಡೆಯುವಂತಾಗಬೇಕು.
* ವಿಶ್ವವಿದ್ಯಾಲಯಗಳು ಆಡಳಿತಾತ್ಮಕ, ಪರೀಕ್ಷೆಗೆ ಸಂಬಂಧಿಸಿದ, ಶೈಕ್ಷಣಿಕ, ಹಣಕಾಸಿನ ಹಾಗೂ ಮತ್ತಿತರ ಸುಧಾರಣೆಗಳನ್ನು ತರುವುದರ ಮೂಲಕ ಜ್ಞಾನದಲೆಗಳನ್ನು ಪಸರಿಸುವ ಕೇಂದ್ರಗಳಾಗಬೇಕು.
* ಉತ್ತಮ ಸಾಧನೆಯನ್ನು ದಾಖಲಿಸುವ ಶಿಕ್ಷಣ ಸಂಸ್ಥೆಗಳಿಗೆ ಸ್ವಾಯತ್ತತೆ ನೀಡಬೇಕು.
* ಶೈಕ್ಷಣಿಕ ಸಂಸ್ಥೆಗಳ ಗುಣಮಟ್ಟವನ್ನು ನಿರ್ಧರಿಸಲು ನಿರಂತರ ಮೌಲ್ಯಮಾಪನ ನಡೆಸಬೇಕು.
* ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಅಧಿಕವಾಗುತ್ತಿದ್ದು, ಇದಕ್ಕೆ ಮುಖ್ಯ ಕಾರಣ ಅವರಲ್ಲಿರುವ ಮೃದು ಹಾಗೂ ಉದ್ಯೋಗ ಕೌಶಲ್ಯಗಳ ಕೊರತೆ ಎಂದು ದಾಖಲಾಗಿದ್ದು, ಅದನ್ನು ಸರಿಪಡಿಸಲು ಸೂಕ್ತ ತರಬೇತಿಗೆ ವ್ಯವಸ್ಥೆ ಮಾಡುವುದು.
* ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಿಗೆ ನೀಡುವ ಅನುದಾನವು ಅವುಗಳ ಮಾನ್ಯತೆಯ ಶ್ರೇಣಿಯನ್ನು ಆಧರಿಸಿರಬೇಕು.
* ಶೈಕ್ಷಣಿಕ ಸಂಸ್ಥೆಯ ನೇತೃತ್ವವನ್ನು ವಹಿಸುವವರಿಗೆ, ಬೋಧಕ–ಬೋಧಕೇತರ ಸಿಬ್ಬಂದಿಗೆ ತರಬೇತಿ ನೀಡುವುದು
* ಸಂಶೋಧನೆ, ಅನ್ವೇಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಹೆಚ್ಚಿಸುವುದು.
* ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಿಗೆ ಅಂತರ್ಜಾಲ ವ್ಯವಸ್ಥೆ ಕಲ್ಪಿಸುವುದು. ಮಾಹಿತಿ ತಂತ್ರಜ್ಞಾನಾಧಾರಿತ ಕಲಿಕೆಗೆ ಅವಕಾಶ ಕಲ್ಪಿಸುವುದು.
* ಆರ್ಥಿಕವಾಗಿ ದುರ್ಬಲವಾಗಿರುವ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗದಿರಲು ಶಿಷ್ಯವೇತನಗಳ ಸಂಖ್ಯೆಯನ್ನು ಹೆಚ್ಚಿಸುವುದು.

ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಅಧಿಕವಾಗಲು ಮುಖ್ಯ ಕಾರಣ ಅವರಲ್ಲಿ ಉದ್ಯೋಗದಾತರು ಅಪೇಕ್ಷಿಸುವ ಕೌಶಲಗಳ ಕೊರತೆ ಇರುವುದಾಗಿದೆ. ಈ ಹಿನ್ನೆಲೆಯಲ್ಲಿ 21ನೇ ಶತಮಾನದ ವಿದ್ಯಾರ್ಥಿಗಳಲ್ಲಿ 16 ಕೌಶಲ್ಯಗಳಿರಬೇಕೆಂದು ವಿಶ್ವ ಆರ್ಥಿಕ ವೇದಿಕೆ ವರದಿ ಮಾಡಿದ್ದು ಆ ಕುರಿತಾದ ಮಾಹಿತಿ ಚಿತ್ರ 2 ರಲ್ಲಿ ಲಭ್ಯವಿದೆ. ಈ ಮೇಲೆ ಉಲ್ಲೇಖಿಸಲಾದ ಕರ್ನಾಟಕ ರಾಜ್ಯ ಶಿಕ್ಷಣ ನೀತಿ ನೀಡಿದ ಶಿಫಾರಸ್ಸುಗಳನ್ನು ಮತ್ತು 16 ಕೌಶಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಅಂಕುರಿಸುವ ಪಠ್ಯಕ್ರಮವನ್ನು ಹಾಗೂ ಪಠ್ಯೇತರ ಚಟುವಟಿಕೆಗಳನ್ನು ಕಾಲೇಜು ಹಾಗೂ ವಿಶ್ವವಿದ್ಯಾಲಯ ಹಂತದಲ್ಲಿ

**ಚಿತ್ರ 2 : 21ನೇ ಶತಮಾನದ ಕೌಶಲ್ಯಗಳು**

| ಮೂಲಭೂತ ಸಾಕ್ಷರತೆ | ಸ್ಪರ್ಧಾತ್ಮಕತೆ | ನಡತೆಯ ಗುಣಗಳು |
|---|---|---|
| ವಿದ್ಯಾರ್ಥಿಗಳು ಯಾವ ರೀತಿ ದಿನನಿತ್ಯದ ಚಟುವಟಿಕೆಗಳಿಗೆ ಅವಶ್ಯಕವಾದ ಕೌಶಲ್ಯಗಳನ್ನು ಅಳವಡಿಸಿಕೊಳ್ಳುತ್ತಾರೆ ಎಂಬುದರ ಕುರಿತು | ವಿದ್ಯಾರ್ಥಿಗಳು ಕ್ಲಿಷ್ಟ ಸವಾಲುಗಳನ್ನು ಹೇಗೆ ಎದುರಿಸುತ್ತಾರೆ ಎಂಬುದರ ಕುರಿತು | ವಿದ್ಯಾರ್ಥಿಗಳು ಬದಲಾಗುತ್ತಿರುವ ಪರಿಸರಕ್ಕೆ ಹೇಗೆ ಹೊಂದಿಕೊಳ್ಳುತ್ತಾರೆ ಎಂಬುದರ ಕುರಿತು |
| 1. ಸಾಕ್ಷರತೆ<br>2 ಗಣಿತಜ್ಞತೆ<br>3. ವೈಜ್ಞಾನಿಕ ಸಾಕ್ಷರತೆ<br>4 ಮಾಹಿತಿ ತಂತ್ರಜ್ಞಾನಾಧಾರಿತ ಸಾಕ್ಷರತೆ<br>5 ಹಣಕಾಸಿನ ಸಾಕ್ಷರತೆ<br>6 ಸಾಂಸ್ಕೃತಿಕ ಹಾಗೂ ನಾಗರಿಕ ಸಾಕ್ಷರತೆ | 7. ವಿಶ್ಲೇಷಣಾತ್ಮಕ ಚಿಂತನೆ/ಸಮಸ್ಯೆಗೆ ಪರಿಹಾರ ಹುಡುಕುವಿಕೆ<br>8. ಸೃಜನಾತ್ಮಕತೆ<br>9. ಸಂವಹನ ಕೌಶಲ್ಯ<br>10. ಒಟ್ಟಿಗೆ ಕೆಲಸ ಮಾಡುವಿಕೆ | 11. ಕುತೂಹಲ<br>12. ಉಪಕ್ರಮ<br>13. ನಿರಂತರತೆ<br>14. ಹೊಂದಿಕೊಳ್ಳುವಿಕೆ<br>15. ನಾಯಕತ್ವ<br>16. ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆ |
| ಆಧಾರ : World Economic Forum Report, New Vision for Education, March 2016 | | |

ಅಳವಡಿಸುವ ಅವಶ್ಯಕತೆಯಿದ್ದು, ಅದರ ಸಾಕಾರಕ್ಕೆ ಪ್ರಾಮಾಣಿಕ ಪ್ರಯತ್ನ ನಡೆದಿದೆ.

### ಗುಣಮಟ್ಟದ ಸುಧಾರಣೆಗೆ ಕೈಗೊಂಡ ಉಪಕ್ರಮಗಳು

2017–18 ನೇ ಸಾಲಿನ ಬಜೆಟ್ಟಿನಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಒಟ್ಟಾರೆಯಾಗಿ ರೂ.4401 ಕೋಟಿಯನ್ನು ಒದಗಿಸಲಾಗಿದೆ. ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಸುಧಾರಣೆಗೆ ಹಲವಾರು ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದ್ದು, ಅವುಗಳಲ್ಲಿ ಕೆಲವನ್ನು ಪಟ್ಟಿ ಮಡಲಾಗಿದೆ.

* ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಮಂತ್ರಿಗಳು 29 ಸಪ್ಟೆಂಬರ್, 2015 ರಂದು 'ನ್ಯಾಷನಲ್ ಇನ್ಸ್ಟಿಟ್ಯೂಷನಲ್ ರ್‍ಯಾಂಕಿಂಗ್ ಫ್ರೇಂವರ್ಕ' (NIRF) ಅನ್ನು ಜಾರಿಗೊಳಿಸಿದೆ. ಬೋಧನೆ, ಕಲಿಕೆ ಮತ್ತು ಸಂಪನ್ಮೂಲಗಳು, ಸಂಶೋಧನೆ ಮತ್ತು ವೃತ್ತಿಪರ ಆಚರಣೆಗಳು, ಪದವಿಯ ಪ್ರತಿಫಲಗಳು ಮತ್ತು ಒಳಗೊಳ್ಳುವಿಕೆ ಮಾನದಂಡಗಳನ್ನು ಆಧರಿಸಿ ಶಿಕ್ಷಣ ಸಂಸ್ಥೆಗಳಿಗೆ ರ್‍ಯಾಂಕ್‌ಗಳನ್ನು ನೀಡಲಾಗುತ್ತಿದೆ. ಸಂತಸದ ವಿಷಯವೆಂದರೆ ಇತ್ತೀಚೆಗೆ ಬಿಡುಗಡೆ ಮಾಡಲಾದ ವಿಶ್ವವಿದ್ಯಾಲಯಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು ಪ್ರಥಮ ಸ್ಥಾನದಲ್ಲಿದೆ. ಎನ್‌ಐಆರ್‌ಎಫ್ ರ್‍ಯಾಂಕಿಂಗ್‌ನಲ್ಲಿ ಮೊದಲ 100 ರ್‍ಯಾಂಕ್‌ಗಳನ್ನು ಗಳಿಸಿರುವ ಕರ್ನಾಟಕದ ವಿಶ್ವವಿದ್ಯಾಲಯಗಳ ಮಾಹಿತಿಯನ್ನು ಪಟ್ಟಿ8 ರಲ್ಲಿ ನೀಡಲಾಗಿದೆ.

* ರಾಜ್ಯದಲ್ಲಿಯೂ ಸಂಶೋಧನೆ ಮತ್ತು ಬೋಧನೆಯ ಗುಣಮಟ್ಟವನ್ನು ಪ್ರಾಥಮಿಕ ಆಧಾರವಾಗಿ; ಉದ್ಯೋಗ, ಅನ್ವೇಷಣೆ ಮೂಲಭೂತ ಸೌಕರ್ಯಗಳನ್ನು ದ್ವಿತೀಯ ಆಧಾರವಾಗಿ, ಒಳಗೊಳ್ಳುವಿಕೆ ಹಾಗೂ ಸಾಮಾಜಿಕ ಪರಿಣಾಮಗಳನ್ನು ತೃತೀಯ ಆಧಾರವಾಗಿಟ್ಟುಕೊಂಡು "ಕರ್ನಾಟಕ ಸ್ಟೇಟ್ ಯುನಿವರ್ಸಿಟಿ ರೇಟಿಂಗ್ ಫ್ರೇಂವರ್ಕ್" (KSURF) ಅನ್ನು ಮಾರ್ಚ್ 31, 2017 ರಂದು ಬಿಡುಗಡೆ ಮಾಡಲಾಗಿದೆ. ತನ್ಮೂಲಕ ರಾಜ್ಯದ ವಿಶ್ವವಿದ್ಯಾಲಯಗಳ ಗುಣಮಟ್ಟವನ್ನು ಮಾಪನ ಮಾಡಿ,ಕೊರತೆ ಕಂಡುಬಂದ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತರುವ ಪ್ರಯತ್ನ ಹಾಗೂ ವಿಶಿಷ್ಟ ಸಾಮರ್ಥ್ಯವನ್ನು ಹೊಂದಿದ ಕ್ಷೇತ್ರಗಳಿಗೆ ಹೆಚ್ಚಿನ ಉತ್ತೇಜನ ನೀಡುವ ಸದುದ್ದೇಶವನ್ನು ಹೊಂದಲಾಗಿದೆ.

**ಪಟ್ಟಿ 8: ಎನ್‌ಐಆರ್‌ಎಫ್ ರ್‍ಯಾಂಕಿಂಗ್‌ನಲ್ಲಿ ಮೊದಲ 100 ರ್‍ಯಾಂಕ್‌ಗಳನ್ನು ಗಳಿಸಿರುವ ಕರ್ನಾಟಕದ ವಿಶ್ವವಿದ್ಯಾಲಯಗಳು**

| ವಿಶ್ವವಿದ್ಯಾಲಯ | ಎನ್.ಐ.ಆರ್.ಎಫ್ ರ್‍ಯಾಂಕ್ |
|---|---|
| ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರು | 1 |
| ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಮಣಿಪಾಲ್ | 32 |
| ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿಶ್ವವಿದ್ಯಾಲಯ, ಮೈಸೂರು | 35 |
| ಎಂ.ಎಸ್. ರಾಮಯ್ಯ ಯುನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್‌ಸ್, ಬೆಂಗಳೂರು | 90 |
| ಪಿಇಎಸ್ ವಿಶ್ವವಿದ್ಯಾಲಯ | 98 |
| ಆಧಾರ : www.nirfindia.org | |

* ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ "ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ" (RUSA) ದಡಿ ಕರ್ನಾಟಕ ರಾಜ್ಯದಲ್ಲಿ ಅರ್ಹ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಅನುದಾನವನ್ನು ಪಡೆದಿದ್ದು, ಇದರಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಪಾಲು40:60 ಆಗಿದೆ. ರೂಸಾ ಕಾರ್ಯಕ್ರಮದಡಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣ, ಉನ್ನತೀಕರಣ, ಹೊಸ ಉಪಕರಣಗಳು/ಪುಸ್ತಕಗಳು ಇತ್ಯಾದಿಗಳ ಖರೀದಿಗೆ ಅವಕಾಶವಾಗುತ್ತಿದೆ. ರಾಜ್ಯದಲ್ಲಿ ರೂಸಾ ಕಾರ್ಯಕ್ರಮದಡಿ ಮಂಡ್ಯದಲ್ಲಿ ಏಕೀಕೃತ ವಿಶ್ವವಿದ್ಯಾಲಯ, ಬೆಂಗಳೂರಿನಲ್ಲಿ ಮಹಾರಾಣೀಸ್ ಮಹಿಳಾ ಕ್ಲಸ್ಟರ್ ವಿಶ್ವವಿದ್ಯಾಲಯ ಹಾಗೂ ನರಗುಂದದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸಂಸ್ಥಾಪಿತವಾಗಲಿವೆ.

* ಭಾರತಕ್ಕೆ ಉನ್ನತ ಶಿಕ್ಷಣ ಪಡೆಯಲು 2015–16 ನೇ ಸಾಲಿನಲ್ಲಿ 165 ರಾಷ್ಟ್ರಗಳಿಂದ ಬಂದ ವಿದೇಶಿ ವಿದ್ಯಾರ್ಥಿಗಳ ಸಂಖ್ಯೆ 45,424 ಆಗಿತ್ತು. ಹೆಮ್ಮೆಯ ವಿಷಯವೇನೆಂದರೆ, ಅವರಲ್ಲಿ 14348 ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿದ್ದರು. ಆ ಕುರಿತಾದ ಮಾಹಿತಿ ಪಟ್ಟಿ 9ರಲ್ಲಿದೆ.

ವಿದೇಶೀ ವಿದ್ಯಾರ್ಥಿಗಳ ದಾಖಲಾತಿಗೆ ಸಂಬಂಧಿಸಿದಂತೆ ರಾಷ್ಟ್ರದಲ್ಲೇ ಕರ್ನಾಟಕವು ಅಗ್ರ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಉನ್ನತ ಶಿಕ್ಷಣದಅಂತಾರಾಷ್ಟ್ರೀಕರಣದ ಗತಿಯನ್ನು ತೀವ್ರಗೊಳಿಸಲು 2014–15 ರ ರಾಜ್ಯ ಬಜೆಟ್‌ನಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳು ಸಾಗರೋತ್ತರ ವಿದ್ಯಾರ್ಥಿಗಳ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾಪಿಸಿದ್ದರು. ಅಂತೆಯೇ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣಪರಿಷತ್ತಿನಲ್ಲಿ "ಸಾಗರೋತ್ತರ ವಿದ್ಯಾರ್ಥಿಗಳ ಕೇಂದ್ರ" (Overseas Center for Foreign Students- OCFS)ಕಾರ್ಯಪ್ರವೃತ್ತವಾಗಿದೆ.

* ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ, ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ ಮತ್ತು ಪಾಲಿಟಕ್ನಿಕ್‌ಗಳಲ್ಲಿ ಐ.ಸಿ.ಟಿ ಸಂಬಂಧಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು

**ಪಟ್ಟಿ 9 : ಉನ್ನತ ಶಿಕ್ಷಣ ಪಡೆಯಲು ದಾಖಲಾದ ವಿದೇಶಿ ವಿದ್ಯಾರ್ಥಿಗಳು**

| ರಾಜ್ಯ | ವಿದೇಶಿ ವಿದ್ಯಾರ್ಥಿಗಳ ಸಂಖ್ಯೆ | ಪ್ರತಿಶತ |
|---|---|---|
| ಕರ್ನಾಟಕ | 14348 | 31.66 |
| ತಮಿಳುನಾಡು | 5377 | 11.84 |
| ಮಹಾರಾಷ್ಟ್ರ | 4649 | 10.23 |
| ಉತ್ತರ ಪ್ರದೇಶ | 3407 | 7.5 |
| ತೆಲಂಗಾಣ | 3032 | 6.67 |
| ಭಾರತ | 45424 | 100 |

ಆಧಾರ: http://mhrd.gov.in/sites/upload_files/mhrd/files/statistics/AISHE2015-16.pdf

ಕ್ರಮಕೈಗೊಳ್ಳಲಾಗಿದೆ. ಈ ಸಂಬಂಧ ಐ.ಸಿ.ಟಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ 100 ಕ್ಕೂ ಅಧಿಕ ಸಾಫ್ಟವೇರ್‌ಗಳನ್ನು ವಿನ್ಯಾಸಗೊಳಿಸಲಾಗಿದೆ. ಎಜುಸ್ಯಾಟ್ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿವೆ. ವಿದ್ಯಾರ್ಥಿಗಳು ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ಉಚಿತ ಆನ್‌ಲೈನ್ ಕಾರ್ಯಕ್ರಮವಾದ 'ಸ್ವಯಂ'ಗೆ ದಾಖಲಾಗಲು ಉತ್ತೇಜಿಸಲಾಗುತ್ತಿದೆ. ಇಂಜಿನಿಯರಿಂಗ್, ವೈದ್ಯಕೀಯ, ಪಾಲಿಟೆಕ್ನಿಕ್ ಮತ್ತು ಪ್ರಥಮ ದರ್ಜೆ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ 2017–18 ನೇ ಸಾಲಿನಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸುವುದರ ಮೂಲಕ ಸುಮಾರು 1.5 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ರಾಜ್ಯ ಸರ್ಕಾರ ಬದ್ಧವಿದೆ. (www.finance.kar.nic.in/Bud 2017/ bskan 2017-18 <http://www.finance.kar.nic.in/Bud%202017/bskan%20 2017-18>. Pdf).

* ವೃತ್ತಿನಿರತ ಪ್ರಾಧ್ಯಾಪಕರಿಗೆ, ಬದಲಾದ ಜಾಗತಿಕ ಗುಣಮಟ್ಟಕ್ಕೆ ಸಮಾನವಾದ ತರಬೇತಿಯನ್ನು ನೀಡಲು ಐಎಎಸ್ ಮತ್ತು ಐಪಿಎಸ್ ಅಕಾಡೆಮಿಗಳ ಮಾದರಿಯಲ್ಲಿ ಧಾರವಾಡದಲ್ಲಿ "ಉನ್ನತ ಶಿಕ್ಷಣ ಅಕಾಡೆಮಿ"ಯು ಪ್ರಾರಂಭವಾಗಿದೆ.

* ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ಉನ್ನತ ಶಿಕ್ಷಣ ಇಲಾಖೆಯು ವಿಶೇಷ ಮಹತ್ವವನ್ನು ನೀಡುತ್ತಿದ್ದು, ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ನೀಡಲು ರಾಯಚೂರಿನಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ




ತಲಾ 4 ಕೋಟಿ ರೂ. ಗಳ ವೆಚ್ಚದಲ್ಲಿ 25 ಹೊಸ ಸರ್ಕಾರಿ ಪಾಲಿಟೆಕ್ನಿಕ್ ಗಳನ್ನು ಸ್ಥಾಪಿಸಲಾಗುವುದೆಂದು 2017–18 ಬಜೆಟ್ಟಿನಲ್ಲಿ ಘೋಷಿಸಲಾಗಿದೆ.

* ಹೆಣ್ಣು ಮಕ್ಕಳು ಉನ್ನತ ಶಿಕ್ಷಣವನ್ನು ಪಡೆಯುವಂತಾಗಲು ರಾಜ್ಯದಲ್ಲಿ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಬೋಧನಾ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಲಾಗುತ್ತಿದೆ. ರಾಜ್ಯದಲ್ಲಿ 8 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ಗಳು ಹಾಗೂ 52 ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿದ್ದು, ವಿದ್ಯಾರ್ಥಿನಿಯರಿಗಾಗಿ ಹಾಸ್ಟೆಲ್‌ಗಳು, ಶೌಚಾಲಯಗಳು, ವಿಶ್ರಾಂತ ಕೊಠಡಿಗಳು ಮೊದಲಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇಂದಿನ ದಿನಗಳಲ್ಲಿ ವಿಶೇಷ ಆದ್ಯತೆ ನೀಡುತ್ತಿರುವುದು ಸಕಾರಾತ್ಮಕವಾದ ಬೆಳವಣಿಗೆಯಾಗಿದೆ.

* ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಇತರೇ ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಉನ್ನತ ಶಿಕ್ಷಣ ಪಡೆಯುವಂತಾಗಲು ಪ್ರವೇಶದಲ್ಲಿ ಮೀಸಲಾತಿ, ಶಿಷ್ಯವೇತನ, ಶಿಕ್ಷಣ ಸಾಲ, ವಿದ್ಯಾರ್ಥಿ ನಿಲಯಗಳ ಸೌಲಭ್ಯ, ಶುಲ್ಕ ವಿನಾಯಿತಿ ಇವೇ ಮೊದಲಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

* ವಿದ್ಯಾರ್ಥಿಗಳಲ್ಲಿ ಮೃದು ಹಾಗೂ ಉದ್ಯೋಗ ಕೌಶಲಗಳನ್ನು ಬೆಳೆಸಲು ಕ್ರಿಯಾ ಯೋಜನೆಗಳು,ತರಬೇತಿ ಕಾರ್ಯಕ್ರಮಗಳು ಜಾರಿಗೆ ಬಂದಿವೆ. ಉದ್ಯೋಗ ಮೇಳಗಳನ್ನು ಆಯೋಜಿಸಲಾಗುತ್ತಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಪದವಿ ಶಿಕ್ಷಣ ಪೂರೈಸುವ ಉದ್ಯೋಗಾಕಾಂಕ್ಷಿಗಳಿಗೆ ವೃತ್ತಿ ಆಯ್ಕೆಯ ಅವಕಾಶಗಳು, ಎದುರಾಗಲಿರುವ ಸವಾಲುಗಳ ಬಗ್ಗೆ ಮಾರ್ಗದರ್ಶನ ನೀಡಲು ರಾಜ್ಯದ ಕಾಲೇಜು ಶಿಕ್ಷಣ ಇಲಾಖೆಯವ್ಯಾಪ್ತಿಗೆ ಬರುವ 786 ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜುಗಳಲ್ಲಿ "ಕರಿಯರ್ ಗೈಡೆನ್ಸ್ ಸೆಲ್" ಗಳನ್ನು ಪ್ರಾರಂಭಿಸಲಾಗುತ್ತಿದೆ. "ಕೌಶಲ ಕರ್ನಾಟಕ" ಅಭಿಯಾನದ ಅಂಗವಾಗಿ ಕೌಶಲಾಭಿವೃದ್ಧಿನಿಗಮ ಮತ್ತು ಕಾಲೇಜು ಶಿಕ್ಷಣ ಇಲಾಖೆ ಈ ಯೋಜನೆ ಆರಂಭಿಸುತ್ತಿವೆ. ಇದರಿಂದ ಎಲ್ಲಾ ಪದವಿ ವಿದ್ಯಾರ್ಥಿಗಳಿಗೆ ಅದರಲ್ಲೂ ವಿಶೇಷವಾಗಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿ ಆಗಲಿದೆ. ವಿಶ್ವವಿದ್ಯಾಲಯಗಳಲ್ಲೂ ಉದ್ಯೋಗ ಕೋಶಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರಗಳು ಸ್ಥಾಪಿತವಾಗಿವೆ.

* ಇತ್ತೀಚಿನ ವರ್ಷಗಳಲ್ಲಿ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳು ನ್ಯಾಕ್/ಎನ್‌ಬಿಎ ಮಾನ್ಯತೆ ಪಡೆಯುವ ಪ್ರಕ್ರಿಯೆಗೆ ಒಳಗಾಗುತ್ತಿರುವ ಪ್ರಮಾಣ ಹೆಚ್ಚಾಗಿದೆ. ವಿದ್ಯಾರ್ಥಿಗಳು ಹಾಗೂ ಬೋಧಕ ಸಿಬ್ಬಂದಿ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಲು, ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಲು ಪೇಟೆಂಟ್‌ಗಳನ್ನು ಉತ್ತೇಜಿಸಲಾಗುತ್ತಿದೆ. ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಲ್ಲಿ "ಆಂತರಿಕ ಗುಣಮಟ್ಟ ಮೌಲ್ಯಮಾಪನ ಕೋಶಗಳು" ಶಿಕ್ಷಣದ ಗುಣಮಟ್ಟವನ್ನು ಉನ್ನತೀಕರಿಸಲು ಶ್ರಮಿಸುತ್ತಿವೆ. ರಾಜ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಪಠ್ಯಕ್ರಮ ವ್ಯವಸ್ಥೆಯನ್ನು ಜಾರಿಗೆ ತರಲು, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು, ಆದರ್ಶ ಪ್ರಮಾಣದ ವಿದ್ಯಾರ್ಥಿ–ಶಿಕ್ಷಕ ಅನುಪಾತವನ್ನು ಕಾಪಾಡಲು ಗಮನಹರಿಸಲಾಗುತ್ತಿದೆ.

**ಉಪಸಂಹಾರ**

'ವಿಷನ್ 2020: ಹೈಯರ್ ಎಜುಕೇಷನ್ ಕರ್ನಾಟಕ' ವರದಿಯನ್ವಯ 2020 ರ ವೇಳೆಗೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ಒಟ್ಟು ದಾಖಲಾತಿ ಪ್ರಮಾಣವನ್ನು 35% ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ನಿರಂತರ ಪ್ರಯತ್ನದಿಂದಾಗಿ 2015–16 ರ ವೇಳೆಗೆ ಈ ಪ್ರಮಾಣ 26.1% ಕ್ಕೇರಿರುವುದು ಸಂತಸದ ವಿಷಯ. ಇದಕ್ಕಾಗಿ ರಾಜ್ಯ ಬಜೆಟ್ಟಿನಲ್ಲಿ ಉನ್ನತ ಶಿಕ್ಷಣಕ್ಕೆ ನೀಡಲಾಗುವ ಅನುದಾನದ ಪ್ರಮಾಣವನ್ನು ಅಧಿಕಗೊಳಿಸುವ ಅಗತ್ಯತೆ ಇದೆ. ಕೈಗಾರಿಕೋದ್ಯಮಿಗಳು, ವ್ಯವಹಾರಸ್ಥರು, ಅನಿವಾಸಿ ಭಾರತೀಯರು ರಾಜ್ಯದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆಗೆ ಕಾಣಿಕೆ ನೀಡಲು ಪ್ರೇರೇಪಿಸಬೇಕಾಗಿದೆ. ಏಕೆಂದರೆ, ಬೆಂಜುಮಿನ್ ಫ್ರಾಂಕ್ಲಿನ್ ಹೇಳಿದಂತೆ ಜ್ಞಾನ ಸಂಪಾದನೆಗೆ ಮಾಡುವ ಹೂಡಿಕೆಯು ಅತ್ಯಂತ ಹೆಚ್ಚಿನ ಪ್ರಮಾಣದ ಪ್ರತಿಫಲವನ್ನು ನೀಡುತ್ತದೆ. ಒಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ಕರ್ನಾಟಕದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮೈಲಿಗಲ್ಲುಗಳನ್ನು ಸ್ಥಾಪಿಸಲು, ಉಜ್ವಲ ಭವಿಷ್ಯವನ್ನು ಕಾಣಲು ಎಲ್ಲ ರೀತಿಯ ಪ್ರಯತ್ನ ಮುಂದುವರಿಸಬೇಕಾಗಿದೆ. ❑

## ವಾರ್ತಾ ವಿಶೇಷ

ಭಾರತ ಮತ್ತು ಅಮೆರಿಕ ನಡುವಿನ ರಕ್ಷಣಾ ಸಹಕಾರ ಗಣನೀಯವಾಗಿ ವೃದ್ಧಿಯಾಗಿದೆ ಎಂದು ರಕ್ಷಣಾ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಭಾರತಕ್ಕೆ ಭೇಟಿ ನೀಡಿದ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಜೇಮ್ಸ್ ಮ್ಯಾಟಿಸ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಚಿವರು, ರಕ್ಷಣಾ ಸಹಕಾರವನ್ನು ಮತ್ತಷ್ಟು ವಿಸ್ತರಿಸುವ ಅಗತ್ಯವಿದೆ ಎಂದು ತಿಳಿಸಿದರು. ಆಫಘಾನಿಸ್ತಾನದಲ್ಲಿನ ಭದ್ರತಾ ಪರಿಸ್ಥಿತಿ ಮತ್ತು ಹಿಂದೂಮಹಾ ಸಾಗರದಲ್ಲಿ ಭದ್ರತೆ ಕುರಿತು ಚರ್ಚಿಸಲಾಗಿದೆ ಎಂದರು. ತಾವು ಪಾಕಿಸ್ತಾನಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಆ ದೇಶದೊಂದಿಗೆ ಭಯೋತ್ಪಾದನೆ ವಿಚಾರ ಪ್ರಸ್ತಾಪ ಮಾಡುವುದಾಗಿ ಮ್ಯಾಟಿಸ್ ಭರವಸೆ ನೀಡಿದ್ದಾರೆ ಎಂದು ಶ್ರೀಮತಿ ನಿರ್ಮಲಾ ಸೀತಾರಾಮನ್ ಹೇಳಿದರು. ಭಯೋತ್ಪಾದನೆ ಪಿಡುಗಿನಿಂದ ಭಾರತ ಮತ್ತು ಅಮೆರಿಕ ತೊಂದರೆ ಅನುಭವಿಸಿವೆ ಹಾಗೂ ಭಯೋತ್ಪಾದನೆಯಿಂದ ಜಾಗತಿಕ ಬೆದರಿಕೆ ಕುರಿತು ಮನಗಂಡಿವೆ ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಮ್ಯಾಟಿಸ್ ತಿಳಿಸಿದರು. ಈ ಪಿಡುಗನ್ನು ಹತ್ತಿಕ್ಕಲು ಒಂದು ತಂಡವಾಗಿ ಕೆಲಸ ಮಾಡುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು. ಉತ್ತರ ಕೊರಿಯಾ ಮೇಲೆ ಒತ್ತಡ ಹೇರಲು ಭಾರತ ಪ್ರಯತ್ನಿಸುತ್ತಿರುವುದನ್ನು ಮ್ಯಾಟಿಸ್ ಶ್ಲಾಘಿಸಿದರು.

* * *

ದಿವ್ಯಾಂಗರಿಗೆ ಸುಲಭವಾಗಿ ಮಾಹಿತಿ ಒದಗಿಸುವ ಸಮಗ್ರ ಮೊಬೈಲ್ ಆ್ಯಪ್– ದಿವ್ಯಾಂಗ್ ಸಾರಥಿಗೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಲಿಖಿತ ಮಾಹಿತಿಯನ್ನು ಧ್ವನಿ ಸಂದೇಶಗಳ ಮೂಲಕ ಒದಗಿಸುವುದು ಈ ಈ ಆ್ಯಪ್‌ನ ವೈಶಿಷ್ಟ್ಯವಾಗಿದೆ. ಹೊಂದಾಣಿಕೆ ಮಾಡಬಹುದಾದ ಅಕ್ಷರ ಗಾತ್ರ ಹಾಗೂ ಅಗತ್ಯಕ್ಕೆ ತಕ್ಕಂತೆ ಅದನ್ನು ಬದಲಿಸಬಲ್ಲ ಅವಕಾಶ ಈ ಆ್ಯಪ್‌ನಲ್ಲಿದೆ. ಇಂಗ್ಲಿಷ್ ಮತ್ತು ಹಿಂದಿ ದ್ವಿಭಾಷೆಗಳಲ್ಲಿ ಇದನ್ನು ಅಭಿವೃದ್ಧಿಪಡಿಸಲಾಗಿದೆ. ದಿವ್ಯಾಂಗರಿಗೆ ಸಬಲೀಕರಣ ಇಲಾಖೆಗೆ ಸಂಬಂಧಿಸಿದ ಎಲ್ಲಾ ಮಾಹಿತಿ ವಿವಿಧ ಕಾನೂನುಗಳು, ನಿಯಮ ನಿಬಂಧನೆಗಳು ಮತ್ತು ಮಾರ್ಗಸೂಚಿಗಳನ್ನು ಒದಗಿಸುವುದು ಈ ಆ್ಯಪ್‌ನ ಉದ್ದೇಶವಾಗಿದೆ.

* * *

ಡೈರಿ ಕ್ಷೇತ್ರಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಡೈರಿ ಸಂಸ್ಕರಣಾ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ನಿಧಿಯನ್ನು ಆರಂಭಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. 10,800 ಕೋಟಿ ರೂಪಾಯಿ ಮೌಲ್ಯದ ಅನುದಾನವನ್ನು ಇದಕ್ಕಾಗಿ ಒದಗಿಸಲಾಗುವುದು ಎಂದು ಕೃಷಿ ಸಚಿವ ಶ್ರೀ ರಾಧಾ ಮೋಹನ್ ತಿಳಿಸಿದ್ದಾರೆ. ಗುಜರಾತ್‌ನ ಆನಂದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಸಚಿವರು, 50 ಸಾವಿರ ಹಳ್ಳಿಗಳ 95 ಲಕ್ಷ ಕೃಷಿಕರು ಈ ಅನುದಾನದ ಲಾಭ ಪಡೆಯಲಿದ್ದಾರೆ ಎಂದರು. ಡೈರಿ ಕ್ಷೇತ್ರಕ್ಕೆ ಆದ್ಯತೆ ನೀಡುವ ಮೂಲಕ ಉದ್ಯೋಗಾವಕಾಶ ಹೆಚ್ಚಲಿದೆ. ಈ ಕ್ಷೇತ್ರದ ಅಭಿವೃದ್ಧಿಯಿಂದ ಕ್ಷೀರ ಕ್ರಾಂತಿಯೂ ಆಗಲಿದೆ ಎಂದು ಅವರು ತಿಳಿಸಿದರು. ❑

## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.______________________________ date ______________

Name (in block letters) : ______________________________

Subscriber's profile : Student / Academician / Institution / Others

Address : ______________________________

______________________________

PIN : ______________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi * 110 003.

Please allow us 4 to 6 weeks for the dispatch of the first issue.
P.S. : For Renewal / change in address, please quote your subscription number

**To Subscribe Online**
*Log on to*
**http://publicationsdivision.nic.in/**,
*in collaboration with* **bharatkosh.gov.in**